ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 10 | ಸಂಚಿಕೆ 37 ಪುಟ 16 | ಸೆಪ್ಟೆಂಬರ್ 11, 2016 | ರೂ. 10/-

web: www.janashakthi.co.in e-mail : js_weekly@yahoo.com



ಮ್ಯಾಗಸೆಸೆ ಪ್ರಶಸ್ತಿ
ಬೆಜವಾಡ ವಿಲ್ಸನ್ - ಟಿ.ಎಂ.ಕೃಷ್ಣ



ಮಂಗಳೂರು

ಹಾಸನ

ಕೆಜಿಎಫ್



ಹರಿಯಾ

ಸೆ. 2
18 ಕೋಟಿ ಕಾರ್ಮಿಕರ ಎಚ್ಚರಿಕೆ



RSS ಮುಕ್ತ ಭಾರತಕ್ಕಾಗಿ ಮಹಿಳೆಯರ ಪಣ



ಧಾರವಾಡದಲ್ಲಿ ಸಾವಿರಾರು ಕಲಬುರ್ಗಿಗಳು

- ಬಗರ್ ಹುಕುಂ ಗೆ ವಿಶೇಷ ಕೋರ್ಟು ಬೇಡ !
- ಅಮೆರಿಕ ಜೊತೆ ಸೈಡ್ ಕಿಕ್ ರೋಲ್
- ಬಾಡಿಗೆ ತಾಯ್ತನ ಕಾನೂನಿನ ತಪ್ಪು-ಸರಿ

ಅಮೆರಿಕನ್ ಸಾಮ್ರಾಜ್ಯಶಾಹಿಯ ಅಡಿಯಾಳು ಮಿತ್ರನ ಪಾತ್ರ ವಹಿಸಿಕೊಂಡಿರುವ ಒಪ್ಪಂದ–ಸಿಪಿಐ(ಎಂ) ಖಂಡನೆ

ಭಾರತದ ಮಿಲಿಟರಿ ನೆಲೆಗಳನ್ನು ಅಮೆರಿಕನ್ ಸಶಸ್ತ್ರ ಪಡೆಗಳಿಗೆ ಲಭ್ಯಗೊಳಿಸಲು ಅವಕಾಶ ಮಾಡಿಕೊಡುವ ಅಮೆರಿಕಾ ಸಂಯುಕ್ತ ಸಂಸ್ಥಾನಗಳು ಮತ್ತು ಭಾರತದ ನಡುವಿನ ಸಾಮರಿಕ ಸಾಗಾಣಿಕೆ ಬೆಂಬಲ ಒಪ್ಪಂದಕ್ಕೆ ಸಹಿ ಹಾಕಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ . ರಕ್ಷಣಾ ಮಂತ್ರಿ ಮನೋಹರ್ ಪರಿಕ್ಕರ್ ಅವರ ವಾಶಿಂಗ್ಟನ್ ಭೇಟಿಯ ವೇಳೆಯಲ್ಲಿ 'ಲಾಜಿಸ್ಟಿಕ್ಸ್ ಎಕ್ಸ್‌ಚೇಂಜ್ ಮೆಮೊರಂಡಂ ಆಫ್ ಅಗ್ರಿಮೆಂಟ್'(ಎಲ್‌ಇಎಂಒಎ) ಎಂದು ಹೆಸರಿಸಿರುವ ಈ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

ಭಾರತ ಈ ಒಪ್ಪಂದಕ್ಕೆ ಸಹಿ ಹಾಕುವುದರೊಂದಿಗೆ ಅಮೆರಿಕಾದ ಮಿಲಿಟರಿ ಮಿತ್ರ ಎಂಬ ಔಪಚಾರಿಕ ಸ್ಥಾನ ಪಡೆದಂತಾಗಿದೆ. ಈ ಒಪ್ಪಂದದ ಅಡಿಯಲ್ಲಿ ಅಮೆರಿಕಾ ವಿಮಾನಪಡೆ ಮತ್ತು ನೌಕಾ ಪಡೆ ತಮ್ಮ ಸಾಮರಿಕ ಸಾಗಾಣಿಕೆ ಬೆಂಬಲಕ್ಕೆ, ಇಂಧನ ತುಂಬಿಸಿಕೊಳ್ಳಲು ಮತ್ತು ಸೇವೆಗಳಿಗೆ ಭಾರತದ ನೌಕಾ ನೆಲೆಗಳನ್ನು ನಿಯಮಿತವಾಗಿ ಬಳಸಿಕೊಳ್ಳಬಹುದಾಗಿದೆ. ಮೂರನೇ ದೇಶಗಳಲ್ಲಿ ಅಮೆರಿಕನ್ ಸಶಸ್ತ್ರ ಪಡೆಗಳ ಮಿಲಿಟರಿ ಕಾರ್ಯಾಚರಣೆಗಳಲ್ಲಿ ಭಾರತೀಯ ಮಿಲಿಟರಿ ನೆಲೆಗಳನ್ನು ಬಳಸಲು ಕೂಡ ಇದರಿಂದ ಅವಕಾಶವಾಗಿದೆ.

ಜಗತ್ತಿನ ಅತ್ಯಂತ ಬಲಿಷ್ಟ ಸಾಮ್ರಾಜ್ಯಶಾಹಿ ಶಕ್ತಿಯೊಂದಿಗೆ ಈ ಒಪ್ಪಂದವನ್ನು ಮಾಡಿಕೊಳ್ಳುವ ಮೂಲಕ ಮೋದಿ ಸರಕಾರ ಭಾರತದ ಸಾರ್ವಭೌಮತೆಯನ್ನು, ಸಾಮರಿಕ ಸ್ವಾಯತ್ತತೆಯನ್ನು ಮೊಟಕುಗೊಳಿಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಇಂತಹ ಅಮೆರಿಕನ್ ಸಾಮ್ರಾಜ್ಯಶಾಹಿಯ ಅಡಿಯಾಳು ಪಾತ್ರವನ್ನು ತಿರಸ್ಕರಿಸಬೇಕು ಎಂದು ಅದು ಎಲ್ಲ ದೇಶಪ್ರೇಮಿ ಭಾರತೀಯರಿಗೆ ಕರೆ ನೀಡಿದೆ.

'ದಲಿತ ಸ್ವಾಭಿಮಾನ ಸಂಘರ್ಷ' ವೇದಿಕೆಯ ಕರೆ ಸೆಪ್ಟಂಬರ್ 16: ದಲಿತರ ಮೇಲೆ ಅಸಹನೀಯ ದಾಳಿಗಳ ವಿರುದ್ಧ ದಿಲ್ಲಿಯಲ್ಲಿ ಧರಣಿ

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ, ಭಾರತೀಯ ಖೇತ್ ಮಜ್ದೂರ್ ಯೂನಿಯನ್, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ದಲಿತ ಶೋಷಣ ಮುಕ್ತಿ ಮಂಚ್ ಹಾಗೂ ದಲಿತ ಹಕ್ಕುಗಳ ರಕ್ಷಣಾ ಮಂಡಳಿ ದಲಿತರ ಮೇಲೆ ಅವ್ಯಾಹತವಾಗಿ ನಡೆಯುತ್ತಿರುವ ದಾಳಿಗಳನ್ನು ಪ್ರತಿರೋಧಿಸಲು ಒಟ್ಟುಗೂಡಿವೆ. ಅವು 'ದಲಿತ ಸ್ವಾಭಿಮಾನ ಸಂಘರ್ಷ' ಎಂಬ ವೇದಿಕೆಯನ್ನು ರಚಿಸಿಕೊಳ್ಳಲು ನಿರ್ಧರಿಸಿವೆ. ಸೆಪ್ಟಂಬರ್ 16 ರಂದು ದಿಲ್ಲಿಯ ಜಂತರ್ ಮಂತರ್‌ನಲ್ಲಿ ಒಂದು ದಿನದ ಧರಣಿಯೊಂದಿಗೆ ಈ ಅಮಾನುಷತೆಯ ವಿರುದ್ಧ ಸಾಮೂಹಿಕ ಕಾರ್ಯಾಚರಣೆಗಳನ್ನು ಈ ಸಂಘಟನೆಗಳು ಆರಂಭಿಸುತ್ತಿವೆ.

ಎನ್‌ಡಿಎ ಸರಕಾರದ ಬೆಂಬಲದೊಂದಿಗೆ ಮತ್ತು ಸಂಘ ಪರಿವಾರದ ರಕ್ಷಣೆಯೊಂದಿಗೆ ಸಮಾಜ ಘಾತುಕ ಶಕ್ತಿಗಳು ಈ ದಾಳಿಗಳನ್ನು ನಡೆಸುತ್ತಿವೆ ಎಂದಿರುವ ಈ ಸಂಘಟನೆಗಳು ಬಿಜೆಪಿ ಆಳ್ವಿಕೆಯ ರಾಜ್ಯಗಳಾದ ಹರಿಯಾಣ, ರಾಜಸ್ತಾನ, ಮಧ್ಯಪ್ರದೇಶ, ಮಹಾರಾಷ್ಟ್ರ ಝಾರ್ಖಂಡ್ ಮಾತ್ರವಲ್ಲದೆ ಇವುಗಳ ನೆರೆರಾಜ್ಯಗಳಾದ ಪಂಜಾಬ್, ಉತ್ತರ ಪ್ರದೇಶಗಳಲ್ಲೂ ಈ ಹಿಂಸಾಚಾರ, ಕೊಲೆ ಸುಲಿಗೆಗಳು ನಡೆಯುತ್ತಿವೆ, ದಲಿತರ ಮೇಲೆ ದಾಳಿಗಳನ್ನು ನಡೆಸಲು ಅವರಿಗೆ ಯಾವುದೇ ನೆಪವಾದರೂ ಸರಿ, ಆದರೆ ಸರಕಾರ ಕಂಡೂ ಕಾಣದಂತಿರುತ್ತದೆ. ಪ್ರಧಾನ ಮಂತ್ರಿಗಳು ತಿಂಗಳಾನುಗಟ್ಟಲೆ ಮೌನವಾಗಿರುತ್ತಾರೆ. ಎಲ್ಲವೂ ನಡೆದು ಹೋದ ಮೇಲೆ, ಜನಗಳು ಭೀತಿಯಿಂದ ಮನೆ ಬಿಟ್ಟು ಓಡಿ ಹೋದ ಮೇಲೆ, ಇಂತಹ ಘಟನೆಗಳು ಭಾರೀ ಪ್ರಚಾರ ಪಡೆದಾಗ ಮಾತ್ರ, ಹೇಳಿಕೆಗಳು ಬರುತ್ತವೆ ಎಂದಿರುವ ಈ ಸಂಘಟನೆಗಳ ಮುಖಂಡರು ಈ ಮೊದಲ ಪ್ರತಿಭಟನೆಯನ್ನು ಯಶಸ್ವಿಗೊಳಿಸಬೇಕು ಎಂದು ಅಸ್ಪೃಶ್ಯತೆಯ ನಿವಾರಣೆ ನಮ್ಮ ಸಂವಿಧಾನದ ಒಂದು ಮೂಲಭೂತ ಅಂಶ ಎಂದು ನಂಬಿರುವವರು, ದಲಿತರ ಹಕ್ಕುಗಳ ಮತ್ತು ಸಾಮಾಜಿಕ ಸಮಾನತೆಯ ರಕ್ಷಣೆಗೆ ಶಾಸನದ ಅಗತ್ಯವಿದೆ ಎಂದು ನಂಬಿರುವ ಎಲ್ಲರಿಗೂ ಮನವಿ ಮಾಡಿವೆ.

ಝಾರ್ಖಂಡ್‌ನಲ್ಲಿ ರೈತರ ಮೇಲೆ ಪೋಲಿಸ್ ಗೋಳೀಬಾರ್ : ಎಡಪಕ್ಷಗಳ ಖಂಡನೆ



ಝಾರ್ಖಂಡ್‌ನ ರಾಮಗಡ ಜಿಲ್ಲೆಯ ಗೋಲಾದಲ್ಲಿ ಆಗಸ್ಟ್ 29ರಂದು ಇನ್ಲಾಂಡ್ ವಿದ್ಯುತ್ ಸ್ಥಾವರಕ್ಕೆ ಬಲವಂತದಿಂದ ಕೃಷಿ ಭೂಮಿಯ ಸ್ವಾಧೀನವನ್ನು ಪ್ರತಿಭಟಿಸುತ್ತಿದ್ದ ರೈತರ ಮೇಲೆ ಪೋಲೀಸರು ಸಿಕ್ಕಾಪಟ್ಟೆ ಗೋಳೀಬಾರ್ ನಡೆಸಿದ್ದರಿಂದ ಅಧಿಕೃತವಾಗಿ ಇಬ್ಬರು ಸತ್ತಿದ್ದಾರೆ, ಆದರೆ ನಿಜವಾಗಿ ಇನ್ನೂ ಹೆಚ್ಚು ಸಾವುಗಳು ಉಂಟಾಗಿವೆ ಎಂದು ವರದಿಯಾಗಿದೆ. ರಾಜ್ಯದ ಎಡಪಕ್ಷಗಳು ಇದನ್ನು ಬಲವಾಗಿ ಖಂಡಿಸಿವೆ. ರೈತರು ತಮ್ಮ ಬಹುಬೆಳೆ ಭೂಮಿಗಳಿಗೆ ನ್ಯಾಯಯುತ ಪರಿಹಾರ, ಉದ್ಯೋಗ ಮತ್ತು ಮರುವಸತಿ ಹಾಗೂ ಪರಿಸರ ಮಾಲಿನ್ಯಕ್ಕೆ ಪರಿಹಾರವನ್ನು ಆಗ್ರಹಿಸುತ್ತಿದ್ದರು.

ಸಿಪಿಐ(ಎಂ) ರಾಜ್ಯಸಮಿತಿ ಕಚೇರಿಯಲ್ಲಿ ಸಭೆ ಸೇರಿದ ಸಿಪಿಐ(ಎಂ), ಸಿಪಿಐ(ಎಂಎಲ್), ಆರ್‌ಎಸ್‌ಪಿ, ಎಂಸಿಪಿ ಮತ್ತು ಎಸ್‌ಯುಸಿಐ(ಸಿ) ಪಕ್ಷಗಳ ರಾಜ್ಯ ಕಾರ್ಯದರ್ಶಿಗಳು ನಂತರ ಒಂದು ಪತ್ರಿಕಾ ಸಮ್ಮೇಳನ ಕರೆದು ಈ ಬಗ್ಗೆ ಹಾಲಿ ಹೈಕೋರ್ಟ್ ನ್ಯಾಯಾಧೀಶರಿಂದ ಉನ್ನತ ಮಟ್ಟದ ನ್ಯಾಯಾಂಗ ತನಿಖೆ ನಡೆಸಬೇಕು, ಈ ಘಟನೆಗೆ ಕಾರಣರಾದವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು, ಸಂತ್ರಸ್ತ ಕುಟುಂಬಗಳಿಗೆ ತಲಾ 50ಲಕ್ಷ ರೂ.ಪರಿಹಾರ ಕೊಡಬೇಕು, ಗಾಯಾಳುಗಳಿಗೆ ಸರಿಯಾದ ವೈದ್ಯಕೀಯ ನೆರವು ಒದಗಿಸಬೇಕು ಹಾಗೂ ನಿರ್ವಸಿತರಿಗೆ ಉದ್ಯೋಗ ಮತ್ತು ಮರುವಸತಿ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ.

ಸಪ್ಟಂಬರ್ 3ರಂದು ಎಡಪಕ್ಷಗಳ ಮುಖಂಡರ ನಿಯೋಗವೊಂದು ರಾಜ್ಯಪಾಲರನ್ನು ಭೇಟಿ ಮಾಡಲಿದೆ, ಸಪ್ಟಂಬರ್ 5ರಂದು ರಾಮಗಡದಲ್ಲಿ ಒಂದು ಸಾಮೂಹಿಕ ಧರಣಿ ನಡೆಸಲಾಗುವುದು ಎಂದು ಎಡಪಕ್ಷಗಳ ಮುಖಂಡರು ಹೇಳಿದ್ದಾರೆ.

ಅಖಿಲ ಭಾರತ ಕಿಸಾನ್ ಸಭಾದ ನಿಯೋಗವೊಂದು ಈಗಾಗಲೇ ಗೋಲೀಬಾರ್ ನಡೆದ ಸ್ಥಳಕ್ಕೆ ಭೇಟಿ ನೀಡಿ ಸಂತ್ರಸ್ತ ಕುಟುಂಬಗಳ ಸದಸ್ಯರನ್ನು ಭೇಟಿ ಮಾಡಿದೆ.

ರಾಜ್ಯ ವಿಧಾನಸಭೆಯನ್ನು ಉದ್ದೇಶಿಸಿ ಧಾರ್ಮಿಕ ಮುಖಂಡನ ಭಾಷಣ

ರಾಷ್ಟ್ರಪತಿಗಳು, ಸಂಸತ್ತು ಮತ್ತು ಸುಪ್ರಿಂಕೋರ್ಟ್ ಅಸಂದಿಗ್ಧ ನಿಲುವು ತಳೆಯಬೇಕು– ಎಐಕೆಎಸ್ ಆಗ್ರಹ

ಧಾರ್ಮಿಕ ಮುಖಂಡರೊಬ್ಬರನ್ನು ಹರಿಯಾಣ ವಿಧಾನ ಸಭೆಯನ್ನು ಉದ್ದೇಶಿಸಿ ಮಾತನಾಡಲು ಕರೆದಿರುವುದು ಭಾರತದ ಜಾತ್ಯತೀತ ಸಂವಿಧಾನಕ್ಕೆ ಮಾಡಿರುವ ಗಾಯ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಬಲವಾಗಿ ಖಂಡಿಸಿದೆ. ಮೂರು ಮಹತ್ವದ ಸಂವಿಧಾನ ಸಂಸ್ಥೆಗಳಾದ ಭಾರತದ ರಾಷ್ಟ್ರಪತಿ, ಸಂಸತ್ತು ಮತ್ತು ಸರ್ವೋಚ್ಚ ನ್ಯಾಯಾಲಯ ಈ ರೀತಿ ಧರ್ಮವನ್ನು ಶಾಸನಬದ್ಧ ಸಂಸ್ಥೆಗಳೊಂದಿಗೆ ಬೆರೆಸುವುದು ಭಾರತದ ಸಂವಿಧಾನದಲ್ಲಿ ಕಂಡರಿಸಿದ ಜಾತ್ಯತೀತತೆ, ಆಧುನಿಕತೆ ಮತ್ತು ಸಂಸದೀಯ ಪ್ರಜಾಪ್ರಭುತ್ವದ ಅತ್ಯುನ್ನತ ನೀತಿಗಳಿಗೆ ಅನುಗುಣವಾಗಿದೆಯೇ ಎಂದು ಒಂದು ಸ್ಪಷ್ಟ ತೀರ್ಪಿನೊಂ,ದಿಗೆ ಮುಂದೆ ಬರಬೇಕಾಗಿದೆ ಎಂದು ಅದು ಹೇಳಿದೆ.

ಧರ್ಮ ಮತ್ತು ರಾಜಕೀಯದ ನಡುವಿನ ಸಂಬಂಧ ಪತಿ ಮತ್ತು ಪತ್ನಿಯ ನಡುವಿನ ಸಂಬಂಧದಂತೆ ಎಂದು ಈ ಧಾರ್ಮಿಕ ಮುಖಂಡರು ಒತ್ತಿ–ಒತ್ತಿ ಹೇಳಿದ್ದಾರೆ. ರಾಜಕೀಯ ಧರ್ಮದ ಶಿಸ್ತಿಗೆ ಒಳಪಡಬೇಕು ಎನ್ನುವುದು ಹರಿಯಾಣದ ಶಾಸಕರಿಗೆ ನೀಡಲಾಗಿರುವ ಪ್ರಮುಖ ಸಲಹೆ. ಈ ಮೂಲಭೂತ ಅಂಶದ ಬಗ್ಗೆ ಎಲ್ಲ ರಾಜಕೀಯ ಪಕ್ಷಗಳ ಮೇಲೆ ತಮ್ಮ ನಿಲುವನ್ನು ವಿವರಿಸಬೇಕಾದ ಜವಾಬ್ದಾರಿ ಇದೆ ಎಂದು ಎಐಕೆಎಸ್ ಹೇಳಿದೆ.

ಇದು ಸಮಯದ ಪರೀಕ್ಷೆಯಲ್ಲಿ ಒರೆಗೆ ಹಚ್ಚಿರುವ ಆಧುನಿಕ ಸಂಸದೀಯ ಪ್ರಜಾಪ್ರಭುತ್ವದ ರಾಜಕೀಯ ವ್ಯವಸ್ಥೆಯನ್ನು ಹಿಂದೂರಾಷ್ಟ್ರದ ಪ್ರತಿಗಾಮಿ ಪರಿಕಲ್ಪನೆಯೊಂದಿಗೆ ಲೇವಡಿ ಮಾಡುವ ಆರೆಸ್ಸೆಸ್‌ನ ಪ್ರಜ್ಞಾಪೂರ್ವಕವಾದ ಅಜೆಂಡಾದ ಒಂದು ಭಾಗ ಎಂದು ತಾನು ಪರಿಗಣಿಸುವುದಾಗಿ ಹೇಳಿರುವ ಎಐಕೆಸ್ ಆ ಧಾರ್ಮಿಕ ಮುಖ್ಯಸ್ಥ ಸದನದ ಅಧ್ಯಕ್ಷರು, ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳಿಗಿಂತ ಎತ್ತರದ ಸ್ಥಾನದಲ್ಲಿ ಕೂರಲು ಬಿಟ್ಟಿರುವುದು ಪ್ರಭುತ್ವದ ಮೇಲೆ ಮತಧರ್ಮದ ಪ್ರಾಬಲ್ಯ ಇರಬೇಕು ಎಂಬ ಆರೆಸ್ಸೆಸ್‌ನ ಕಟ್ಟಾ ನಿಲುವನ್ನು ವಿವರಿಸುತ್ತದೆ ಎಂದು ಅಭಿಪ್ರಾಯ ಪಟ್ಟಿದೆ.


ಆಧುನಿಕ ಸಂಸದೀಯ ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ವ್ಯವಸ್ಥಿತವಾಗಿ ನಿರ್ನಾಮ ಮಾಡುವ ತನ್ನ ಗುರಿಯನ್ನು ಸಾಧಿಸಲು ಆರೆಸ್ಸೆಸ್‌ಗೆ ಸಾಧ್ಯವಾಗಬಾರದು, ಭಾರತೀಯ ಸಮಾಜದ ಎಲ್ಲ ವಿಭಾಗಗಳು ಮತಧರ್ಮವನ್ನು ರಾಜಕೀಯ ವ್ಯವಸ್ಥೆಯ ಮೇಲೆ ಹೇರುವ ಈ ಅತ್ಯಂತ ಪ್ರತಿಗಾಮಿ ಮತ್ತು ಪ್ರತಿಕ್ರಿಯಾವಾದಿ ಯೋಜನೆಯನ್ನು ಪ್ರತಿರೋಧಿಸಬೇಕು ಎಂದು ಎಐಕೆಎಸ್ ಕರೆ ನೀಡಿದೆ.

ಆಧುನಿಕ ಭಾರತಕ್ಕೆ ಸವಾಲೆಸೆದು ಅದನ್ನು ಹಿಂದೂರಾಷ್ಟ್ರವಾಗಿ ಮಾಡುವ ಆರೆಸ್ಸೆಸ್‌ನ ಪ್ರತಿಗಾಮಿ ಅಜೆಂಡಾದ ವಿರುದ್ಧ ಸತತ ಪ್ರಚಾರಾಂದೋಲನ ನಡೆಸಬೇಕು ಎಂದು ರೈತಾಪಿ ಮತ್ತು ಕಾರ್ಮಿಕ ವರ್ಗದ ಜನಗಳಿಗೆ ಎಐಕೆಎಸ್ ಕರೆ ನೀಡಿದೆ.



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

'ದೇಶಾಭಿಮಾನಿ' ಪತ್ರಿಕೆಯ ಮಾಜಿ ಮುಖ್ಯ ಸಂಪಾದಕರು ವಿ.ವಿ.ದಕ್ಷಿಣಾಮೂರ್ತಿ ನಿಧನ




ಕೇರಳದ ಹಿರಿಯ ಕಮ್ಯುನಿಸ್ಟ್ ಮುಖಂಡರು, 2005ರಿಂದ ಇತ್ತೀಚಿನ ವರೆಗೆ ರಾಜ್ಯದ ದುಡಿಯುವ ಜನಗಳ ಪತ್ರಿಕೆ 'ದೇಶಾಭಿಮಾನಿ'ಯ ಮುಖ್ಯ ಸಂಪಾದಕರಾಗಿದ್ದ ವಿ.ವಿ.ದಕ್ಷಿಣಾಮೂರ್ತಿ ನಿಧನರಾಗಿದ್ದಾರೆ. ಅವರಿಗೆ 82 ವರ್ಷವಾಗಿತ್ತು. ಅವರು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರೂ ಆಗಿದ್ದರು.

ಮೂರ್ತಿ ಮಾಸ್ಟರ್ ಎಂದು ಪ್ರಖ್ಯಾತರಾಗಿದ್ದ ಇವರು ಶಿಕ್ಷಕರಾಗಿ ಜೀವನ ಆರಂಭಿಸಿದವರು, ರಾಜ್ಯದಲ್ಲಿ ಶಿಕ್ಷಕರ ಆಂದೋಲನದ ಆರಂಭದಲ್ಲಿ ಮುಂಚೂಣಿಯಲ್ಲಿದ್ದು ದುಡಿದವರು. ಕೇರಳ ಸಮಾಜವಾದಿ ಯುವಜನ ಒಕ್ಕೂಟದ ಮೊದಲ ಅಧ್ಯಕ್ಷ ರಾಗಿ ಚುನಾಯಿತರಾದ ಇವರು ನಂತರ ರಾಜ್ಯದಲ್ಲಿ ಹಲವು ತಲೆಮಾರುಗಳ ಸಿಪಿಐ(ಎಂ) ಕಾರ್ಯಕರ್ತರಿಗೆ ಮಾರ್ಕ್ಸ್‌ವಾದಿ ತತ್ವಶಾಸ್ತ್ರದ ಪಾಠ ಹೇಳಿ ಕೊಟ್ಟವರು. ಶಿಕ್ಷಕರ ಸಂಘಟನೆಯಲ್ಲದೆ ದೇವಸ್ಥಾನ ನೌಕರರು, ಮೂರ್ತೆದಾರರು, ತೋಟ ಕಾಮಿಕರು ಮುಂತಾದ ವಿವಿಧ ವಿಭಾಗಗಳನ್ನು ಸಂಘಟಿಸಿದ, ಉತ್ತಮ ವಾಗ್ಮಿಯೂ ಆಗಿದ್ದ ಇವರು 1965, 1967 ಮತ್ತು 1980ರಲ್ಲಿ ಕೋಝಿಕೋಡ್ ಜಿಲ್ಲೆಯ ಪೆರಂಬ್ರ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು, 1980–82ರಲ್ಲಿ ವಿಧಾನಸಭೆಯಲ್ಲಿ ಸಿಪಿಐ(ಎಂ)ನ ವ್ಹಿಪ್ ಆಗಿ ಕೆಲಸ ಮಾಡಿದ್ದರು.

ಮಾರ್ಕ್ಸ್‌ವಾದೀ ತತ್ವಶಾಸ್ತ್ರದ ಒಬ್ಬ ಪ್ರತಿಷ್ಠಿತ ಬೋಧಕರನ್ನು ಕಮ್ಯುನಿಸ್ಟ್ ಆಂದೋಲನ ಕಳಕೊಂಡಿದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

ಮಾತೆಂದರೆ ಇದು



ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಿರುವ ಘೋಷಣೆಯನ್ನು ಹತ್ತಿಕ್ಕಲು, ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ.

– ಡಾ. ಎಂ. ಎಂ. ಕಲಬುರ್ಗಿ

18 ಕೋಟಿ ಕಾರ್ಮಿಕರು ಭಾಗವಹಿಸಿದ ಚಾರಿತ್ರಿಕ ಸಾರ್ವತ್ರಿಕ ಮುಷ್ಕರ

ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ವಿಭಿನ್ನ ಮಾರ್ಗಗಳಲ್ಲಿ ಕಾರ್ಮಿಕರಲ್ಲಿ ಗೊಂದಲ ಉಂಟುಮಾಡಲು ನಡೆಸಿದ ಪ್ರಯತ್ನಗಳನ್ನೆಲ್ಲ ಧಿಕ್ಕರಿಸಿ ದೇಶಾದ್ಯಂತ 18 ಕೋಟಿ ಕಾರ್ಮಿಕರು ಮತ್ತು ನೌಕರರು ಸಪ್ಟಂಬರ್ 2ರ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ಇದು ಇದುವರೆಗಿನ ಅತಿ ದೊಡ್ಡ ಮುಷ್ಕರ ಎನ್ನಲಾಗಿದೆ. ಇದಕ್ಕೆ ಕರೆ ನೀಡಿದ ಕಾರ್ಮಿಕ ಸಂಘಟನೆಗಳ ವ್ಯಾಪ್ತಿಯ ಹೊರಗಿರುವ ಕಾರ್ಮಿಕರೂ ಇದರಲ್ಲಿ ಭಾಗವಹಿಸಿದ ವರದಿಗಳು ಬರುತ್ತಿವೆ.

ದೇಶದ ಆರ್ಥಿಕದ ಎಲ್ಲ ವಲಯಗಳಲ್ಲಿ ಸಂಘಟಿತರು ಮತ್ತು ಅಸಂಘಟಿತರು, ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯ, ಕೇಂದ್ರ ಮತ್ತು ರಾಜ್ಯ ಸರಕಾರಗಳ ಇಲಾಖೆಗಳು, ಮತ್ತು ಸ್ಕೀಮ್ ಕಾರ್ಮಿಕರು ಎಲ್ಲರೂ ಈ ಮಹಾಮುಷ್ಕರದಲ್ಲಿ ಭಾಗವಹಿಸಿದ್ದಾರೆ.

ದೇಶದ ಆರ್ಥಿಕ ವ್ಯವಸ್ಥೆಯ ಆಯಕಟ್ಟಿನ ವಲಯಗಳಲ್ಲಿ, ಅಂದರೆ ಕಲ್ಲಿದ್ದಲು ಮತ್ತು ಇತರ ಗಣಿಗಳಲ್ಲಿ, ವಿದ್ಯುಚ್ಛಕ್ತಿ ರಂಗದಲ್ಲಿ, ಇಂಜಿನಿಯರಿಂಗ್, ಪೆಟ್ರೋಲಿಯಂ, ರಕ್ಷಣಾ ಉತ್ಪಾದನೆ, ಟೆಲಿಕಾಂ ಮತ್ತು ಹಣಕಾಸು ವಲಯದ ಬ್ಯಾಂಕುಗಳು ಮತ್ತು ವಿಮಾರಂಗದಲ್ಲಿ ಕಾರ್ಮಿಕರು ಮತ್ತು ನೌಕರರು ದೊಡ್ಡ ಪ್ರಮಾಣದಲ್ಲಿ ಈ ಮುಷ್ಕರವನ್ನು ನಡೆಸಿದ್ದಾರೆ; ಸಂಬಂಧಪಟ್ಟ ಮಂತ್ರಾಲಯಗಳ, ಆಡಳಿತಗಳ ಮತ್ತು ಕೆಲವು ರಾಜ್ಯಸರಕಾರಗಳ ಬೆದರಿಕೆಗಳನ್ನೂ ಧಿಕ್ಕರಿಸಿ ಭಾಗವಹಿಸಿದ್ದಾರೆ.

ತೆಲಂಗಾಣ, ತಮಿಳುನಾಡು, ಒಡಿಶಾ ಮುಂತಾದೆಡೆಗಳಲ್ಲಿ ರಾಜ್ಯಮಟ್ಟದ ಟ್ರೇಡ್‌ಯೂನಿಯನ್‌ಗಳೂ ಮುಷ್ಕರದಲ್ಲಿ ಭಾಗವಹಿಸಿರುವುದು ಗಮನಾರ್ಹ.

ಬಿಎಂಎಸ್ ಬಿಟ್ಟು ಬೇರೆಲ್ಲ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಸುಮಾರಾಗಿ ಎಲ್ಲ ರಾಷ್ಟ್ರೀಯ ಒಕ್ಕೂಟಗಳು ಕರೆ ನೀಡಿದ್ದ ಈ ಸಾರ್ವತ್ರಿಕ ಮುಷ್ಕರಕ್ಕೆ ಜನಸಾಮಾನ್ಯರಿಂದಲೂ ಅಭೂತಪೂರ್ವ ಬೆಂಬಲ ದೊರಕಿದೆ. ಕಾರ್ಮಿಕ ಸಂಘಗಳು ಎತ್ತಿದ ಬೇಡಿಕೆಗಳಿಗೆ ಬೆಂಬಲವಾಗಿ ದೇಶಾದ್ಯಂತ ನಡೆದ ರ‍್ಯಾಲಿಗಳು, ರಾಸ್ತಾರೋಕೋ, ರೈಲ್ ರೋಕೋಗಳಲ್ಲಿ ರೈತರು, ಕೃಷಿ ಕೂಲಿಕಾರರು, ಯುವಜನ, ವಿದ್ಯಾರ್ಥಿಗಳು ಮತ್ತು ಮಹಿಳೆಯರು ಭಾಗವಹಿಸಿದ್ದಾರೆ.

ಪಶ್ಚಿಮ ಬಂಗಾಲ, ಹರಿಯಾಣ, ಉತ್ತರಪ್ರದೇಶ, ಅಸ್ಸಾಂ ಮುಂತಾದೆಡೆಗಳಲ್ಲಿ ಪೋಲೀಸ್ ದಮನವನ್ನು ಕಾರ್ಮಿಕರು ಎದುರಿಸಬೇಕಾಗಿ ಬಂದಿತು. ಪಶ್ಚಿಮ ಬಂಗಾಲದ ತೃಣಮೂಲ ಕಾಂಗ್ರೆಸ್ ಸರಕಾರ ಪೋಲಿಸ್ ದಮನದೊಂದಿಗೆ ತನ್ನ ಗೂಂಡಾಗಳನ್ನೂ ಛೂ ಬಿಟ್ಟಿತು. ರಾಜ್ಯ ಹಲವೆಡೆಗಳಲ್ಲಿ ಸಂಘರ್ಷಗಳೂ ನಡೆದವು. ಬರ್ದ್ವಾನ್ ಮುಂತಾದೆಡೆಗಳಲ್ಲಿ ಮುಷ್ಕರಕ್ಕೆ ಬೆಂಬಲವಾಗಿ ನಡೆದ ರ‍್ಯಾಲಿಗಳ ಮೇಲೂ ದಾಳಿಗಳು ನಡೆದವು.

ಗುರ್ಗಾಂವ್, ಫರಿದಾಬಾದ್, ನೋಯ್ಡಾ ಮುಂತಾದ ಕೈಗಾರಿಕಾ ಕೇಂದ್ರಗಳಲ್ಲಿ ಸೆಕ್ಷನ್ 144 ಜಾರಿ ಮಾಡಲಾಗಿತ್ತು. ಗುರ್ಗಾಂವ್‌ನಲ್ಲಿ 12 ಮಾರುತಿ ಸುಝುಕಿ ಮತ್ತು 22 ಸಾರಿಗೆ ಸಂಘಟನೆಯ ಮುಖಂಡರನ್ನು ಬಂಧಿಸಲಾಗಿತ್ತು. ಅಲ್ಲಿ ಕಾಂಟ್ರಾಕ್ಟ್ ಕಾಮಿಕರು ವಾಸವಿರುವ ಜಾಗಗಳಿಗೆ ಪೋಲೀಸರು ಹೋಗಿ ಮುಷ್ಕರ ಬಿಟ್ಟು ಕೆಲಸಕ್ಕೆ ಹಾಜರಾಗುವಂತೆ ಬಲವಂತ ಮಾಡುವ ಪ್ರಯತ್ನಗಳೂ ನಡೆದಿವೆ. ಪಶ್ಚಿಮ ಬಂಗಾಲದ ಸಾರಿಗೆ ಮಂತ್ರಿ ಮುಷ್ಕರ ನಿರತ ಕಾರ್ಮಿಕರನ್ನು ಅಮಾನತು ಮಾಡುವಂತೆ ಜಲ ಸಾರಿಗೆ ಎಂಡಿಗೆ ನಿರ್ದೇಶನ ನೀಡಿದರು.

ರಸ್ತೆ ಸಾರಿಗೆ ಹರಿಯಾಣ, ಪಂಜಾಬ್, ತೆಲಂಗಾಣ, ಕರ್ನಾಟಕ, ಅಸ್ಸಾಂ, ಒಡಿಶಾ, ಕೇರಳ, ತ್ರಿಪುರ ಮುಂತಾದೆಡೆಗಳಲ್ಲಿ ಸ್ತಬ್ಧಗೊಂಡಿತು. ಆಂಧ್ರ, ಕರ್ನಾಟಕ, ಒಡಿಶಾ ಮುಂತಾದ ರಾಜ್ಯಗಳಲ್ಲಿ ಆಟೋಚಾಲಕರೂ ಮುಷ್ಕರದಲ್ಲಿ ಭಾಗವಹಿಸಿದರು.

ಕಾರ್ಮಿಕ ಸಂಘಟನೆಗಳು ಬಂದ್‌ಗೆ ಕರೆ ನೀಡದಿದ್ದರೂ ದೇಶದ ಹಲವು ರಾಜ್ಯಗಳಲ್ಲಿ, ಅಸ್ಸಾಂ, ಬಿಹಾರ್, ಹರಿಯಾಣ, ಒಡಿಶಾ, ಕೇರಳ, ತ್ರಿಪುರ, ತೆಲಂಗಾಣಗಳಲ್ಲಿ, ಕರ್ನಾಟಕ, ಮಧ್ಯಪ್ರದೇಶ ಮತ್ತಿತರ ರಾಜ್ಯಗಳ ಹಲವು ಜಿಲ್ಲೆಗಳಲ್ಲಿ ಬಂದ್ ರೀತಿಯ ವಾತಾವರಣವೇ ಸೃಷ್ಟಿಯಾಯಿತು. ಹೆಚ್ಚಿನ ರಾಜ್ಯಗಳಲ್ಲಿ ಕೈಗಾರಿಕಾ ಕೇಂದ್ರಗಳು ಮುಷ್ಕರದಿಂದ ನೀರವಗೊಂಡವು. ಮಹಾರಾಷ್ಟ್ರದ ಪುಣೆ, ಔರಂಗಾಬಾದ್, ನಾಗಪುರ, ನಾಶಿಕ್, ಮುಂಬೈ, ಶೋಲಾಪುರದ ಲಕ್ಷಾಂತರ ಕಾರ್ಮಿಕರು ಸಾರಾಸಗಟಾಗಿ ಮುಷ್ಕರದಲ್ಲಿ ಭಾಗವಹಿಸಿದರು.

ಬಿಜೆಪಿ ಸರಕಾರ ಬಿಎಂಎಸ್ ನೆರವಿನೊಂದಿಗೆ ಹರಿಯ ಬಿಟ್ಟ ತಪ್ಪು ಮಾಹಿತಿಗಳ ಅಪಪ್ರಚಾರವನ್ನೂ ಬದಿಗೊತ್ತಿ ಸಾರ್ವತ್ರಿಕ ಮುಷ್ಕರ ಯಶಸ್ವಿಯಾಗಿರುವುದು ಬಿಜೆಪಿ ಸರಕಾರದ ನವ–ಉದಾರವಾದಿ ಅಜೆ–ಂಡಾ ದುಡಿಯುವ ಜನರ ಬದುಕು ಮತ್ತು ಉದ್ಯೋಗಗಳ ಮೇಲೆ ಮಾಡುತ್ತಿರುವ ದಾಳಿಗಳಿಗೆ ಕಾರ್ಮಿಕರ ತೀವ್ರ ಆಕ್ರೋಶವನ್ನು ಬಿಂಬಿಸಿದೆ ಎಂದು ದೇಶದ ಕಾರ್ಮಿಕ ವರ್ಗವನ್ನು ಈ ಅಭೂತಪೂರ್ವ ಮುಷ್ಕರಕ್ಕಾಗಿ ನಮಿಸುತ್ತ ಸಿಐಟಿಯು ಹೇಳಿದೆ. ಈ ಮುಷ್ಕರಕ್ಕೆ ಬೃಹತ್ ಪ್ರಮಾಣದಲ್ಲಿ ಬೆಂಬಲ ನೀಡಿ ಸೌಹಾರ್ದ ವ್ಯಕ್ತಪಡಿಸಿದ ರೈತರು, ಕೃಷಿಕೂಲಿಕಾರರು, ಆದಿವಾಸಿಗಳು, ವಿದ್ಯಾರ್ಥಿಗಳು, ಯುವಜನರು ಮತ್ತು ಮಹಿಳೆಯರಿಗೆ ಸಿಐಟಿಯು ಕಾರ್ಮಿಕ ವರ್ಗದ ಪರವಾಗಿ ಕೃತಜ್ಞತೆ ಸಲ್ಲಿಸಿದೆ.

ಈ ಮುಷ್ಕರ ಭಾರತದ ಕಾರ್ಮಿಕ ವರ್ಗ ತನ್ನ ಹಕ್ಕುಗಳ ರಕ್ಷಣೆಗಾಗಿ ಮಾತ್ರವಲ್ಲ, ದೇಶದ ಸ್ವಾವಲಂಬನೆ ಮತ್ತು ಸಾರ್ವಭೌಮತೆಯ ರಕ್ಷಣೆಗೂ ಹೋರಾಟವನ್ನು ಮುಮದುವರೆಸಲು ಕಟಿಬದ್ಧರಾಗಿದ್ದಾರೆ ಎಂಬ ಎಚ್ಚರಿಕೆಯನ್ನು ಆಳುವವರಿಗೆ ನೀಡಿದೆ ಎಂದು ಸಿಐಟಿಯು ಅಭಿಪ್ರಾಯ ಪಟ್ಟಿದೆ.

15 ಕೋಟಿ ಕಾರ್ಮಿಕರು ಮತ್ತು ನೌಕರರು ಭಾಗವಹಿಸಿದ್ದ ಕಳೆದ ಸಪ್ಟಂಬರ್ ಮುಷ್ಕರದ ನಂತರ ಕಾರ್ಮಿಕರ ಬೇಡಿಕೆಗಳನ್ನು ಪರಿಶೀಲಿಸಲೆಂದು ನೇಮಿಸಿದ್ದ ಮಂತ್ರಿಗಳ ಗುಂಪು ಏನೂ ಮಾಡಿರಲಿಲ್ಲ. ಈಗಲಾದರೂ, ಇನ್ನೂ ಹೆಚ್ಚಿನ ಸಂಖ್ಯೆಯ, 18 ಕೋಟಿ ದುಡಿಯುವ ಜನಗಳ ಒಕ್ಕೊರಲಿನ ಬೇಡಿಕೆಗಳನ್ನು ಈಡೇರಿಸಲು ಸರಕಾರ ಕ್ರಮಗಳನ್ನು ಕೈಗೊಳ್ಳುವುದೇ ಎಂಬ ಪ್ರಶ್ನೆಗಳನ್ನು ಕೇಳಲಾಗುತ್ತಿದೆ. ಸರಕಾರ ತನ್ನ ಹಳೆಯ ಜಾಡಿನಲ್ಲೇ ಮುಮದುವರೆಯುವುದಾದರೆ ಕಾರ್ಮಿಕರು ಇನ್ನೂ ಹೆಚ್ಚಿನ ಐಕ್ಯತೆಯೊಂದಿಗೆ ಹೋರಾಟಗಳನ್ನು ತೀವ್ರಗೊಳಿಸುತ್ತಾರೆ ಎಂದು ಕಾರ್ಮಿಕ ಸಂಘಟನೆಗಳು ಎಚ್ಚರಿಸಿವೆ.

(ಕರ್ನಾಟಕದ 50 ಲಕ್ಷ ಕಾರ್ಮಿಕರ ಎಚ್ಚರಿಕೆ – ಪುಟ 16 ನೋಡಿ)

ಬಗರ್ ಹುಕುಂ ಭೂಮಿ ವಿಶೇಷ ನ್ಯಾಯಾಲಯದ ವ್ಯಾಪ್ತಿಗೆ ಬೇಡ

ಸಂಪಾದಕೀಯ

ಒತ್ತುವರಿ ಜಮೀನು ತೆರವುಗೊಳಿಸುವ ಸಂಬಂಧ 'ನಮ್ಮ ಬೆಂಗಳೂರು ಪ್ರತಿಷ್ಠಾನ' ಹಾಗೂ 'ಸಮಾಜ ಪರಿವರ್ತನಾ ಸಮುದಾಯ' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎಸ್.ಕೆ. ಮುಖರ್ಜಿ ಹಾಗೂ ನ್ಯಾಯಮೂರ್ತಿ ರವಿಮಳಿ ಮಠ ಅವರಿದ್ದ ವಿಭಾಗೀಯ ಪೀಠವು ವಿಚಾರಣೆ ನಡೆಸುತ್ತಿದೆ. 'ರಾಜ್ಯದ ವಿವಿಧೆಡೆ ಒಟ್ಟು 11 ಲಕ್ಷ ಎಕರೆಗೂ ಹೆಚ್ಚು ಸರ್ಕಾರಿ ಜಮೀನು ಒತ್ತುವರಿಯಾಗಿದೆ. ರಾಜ್ಯದ ವಿವಿಧೆಡೆ ಕಬಳಿಕೆಯಾಗಿರುವ ಜಮೀನಿನ ಪೈಕಿ ಇದೇ ಜನವರಿ ಅಂತ್ಯಕ್ಕೆ 2.54 ಲಕ್ಷ ಎಕರೆಯಷ್ಟು ತೆರವುಗೊಳಿಸಲಾಗಿದೆ' ಎಂದು ರಾಜ್ಯ ಸರ್ಕಾರವು ಹೈಕೋರ್ಟ್‌ಗೆ ತಿಳಿಸಿದೆ.

'ರಾಜ್ಯದ ವಿವಿಧೆಡೆ ಒಟ್ಟು 11 ಲಕ್ಷ ಎಕರೆಗೂ ಹೆಚ್ಚು ಸರ್ಕಾರಿ ಜಮೀನು ಒತ್ತುವರಿಯಾಗಿದೆ. ಭೂಕಬಳಿಕೆಯಿಂದ ಬೊಕ್ಕಸಕ್ಕೆ ಸುಮಾರು 16 ಲಕ್ಷ ಕೋಟಿಗೂ ಮಿಕ್ಕಿ ನಷ್ಟವುಂಟಾಗಿದೆ' ಎಂದು ವಿ.ಬಾಲಸುಬ್ರಮಣಿಯನ್ ಹಾಗೂ ಎ.ಟಿ.ರಾಮಸ್ವಾಮಿ ವರದಿಗಳು ಹಿಂದೆ ತಿಳಿಸಿದ್ದವು.

ಬೆಂಗಳೂರಿನಲ್ಲಿ ರಾಜಾಕಾಲುವೆ ಮತ್ತು ಕೆರೆಗಳ ಒತ್ತುವರಿ ಮಾಡಿಕೊಂಡ ಪ್ರಕರಣಗಳ ಬಗ್ಗೆ ನೇಮಿಸಲಾದ ಕೋಳಿವಾಡ ಸಮಿತಿ ಸಹ ದೊಡ್ಡ ಪ್ರಮಾಣದಲ್ಲಿ ನಗರದಲ್ಲಿ ಒತ್ತುವರಿಯಾಗಿರುವ ಬಗ್ಗೆ ವಿವರವಾದ ವರದಿ ಸಿದ್ಧ ಪಡಿಸುತ್ತಿದೆ. ಬೆಂಗಳೂರು ನಗರ ಮತ್ತು ರಾಜ್ಯದ ಹಲವು ಪ್ರದೇಶಗಳಲ್ಲಿ ಸರಕಾರಿ ಮತ್ತು ಸಾರ್ವಜನಿಕ ಭೂಮಿಯ ಒತ್ತುವರಿ ರಿಯಲ್ ಎಸ್ಟೇಟ್ ಉದ್ಯಮಿಗಳು, ಮಂತ್ರಿ/ರಾಜಕಾರಣಿಗಳು ಹಾಗೂ ಅಧಿಕಾರಿಗಳ ಶಾಮೀಲಿನಿಂದ ಅವ್ಯಾಹತವಾಗಿ ನಡೆಯುತ್ತಿದೆ. ಇದ–ರಿಂದ ನಗರದ ವ್ಯವಸ್ಥಿತ ಬೆಳವಣಿಗೆಗೆ ಹಾಗೂ ಮೂಲ ಸೌಕರ್ಯಗಳ ಯೋಜನೆ ಮೇಲೆ ತೀವ್ರ ದುಷ್ಪರಿಣಾಮ ಆಗಿದೆ. ಪ್ರಮುಖವಾಗಿ ಮಳೆ ನೀರು, ಚರಂಡಿ ನೀರು ನಿರ್ವಹಣೆಯಲ್ಲಿ ಇವು ತೀವ್ರ ಏರುಪೇರು ಉಂಟು ಮಾಡಿವೆ. ರಾಜಾಕಾಲುವೆಯ ವ್ಯಾಪಕ ಒತ್ತುವರಿ ಹೆಚ್ಚಿನ ಮಳೆಯಾದಾಗಲೆಲ್ಲ ತೀವ್ರ ನೆರೆ ಸೃಷ್ಟಿಸಿ ಸಾಮಾನ್ಯ ಜೀವನವನ್ನು ಅಲ್ಲೋಲ ಕಲ್ಲೋಲ ಮಾಡುವುದನ್ನು ನೋಡುತ್ತಿದ್ದೇವೆ. ನಗರದ ಬಹುಪಾಲು ಭೂಮಿಯ ಮೇಲೆ ರಿಯಲ್ ಎಸ್ಟೇಟ್ ದುಷ್ಟಕೂಟದ ಹಿಡಿತ ಮನೆಗಳ ಲಭ್ಯತೆ ಮತ್ತು ಬಾಡಿಗೆ ಮೇಲೆ ಸಹ ತೀವ್ರ ದುಷ್ಪರಿಣಾಮ ಬೀರಿದೆ. ನಗರಗಳಲ್ಲಿ ಸ್ವಂತ ಅಥವಾ ಬಾಡಿಗೆ ಮನೆ ಹೊಂದುವುದು ಮಧ್ಯಮ, ಕೆಳ ಮಧ್ಯಮ, ಬಡ ಕುಟುಂಬಗಳ ಅಳವಿಗೆ ಮೀರಿದ ಸಂಗತಿಯಾಗಿದೆ. ನಗರಗಳಲ್ಲಿ ಮನೆ ಮೇಲೆ ಖರ್ಚು(ಬಾಡಿಗೆ ಅಥವಾ ಸಾಲದ ಕಂತು) ಆದಾಯದ ಅತಿ ದೊಡ್ಡ ಪಾಲನ್ನು ನುಂಗಿ ಹಾಕುತ್ತಿದೆ.

ಈ ಹಿನ್ನೆಲೆಯಲ್ಲಿ ಸರಕಾರಿ ಮತ್ತು ಸಾರ್ವಜನಿಕ ಒಡೆತನದ ಭೂಕಬಳಿಕೆಯನ್ನು ತಡೆಯಲು ವಿಶೇಷ ತುರ್ತು ಕ್ರಮ ತೆಗೆದುಕೊಳ್ಳುವ ಅಗತ್ಯ ಇದೆ. ಈ ನಿಟ್ಟಿನಲ್ಲಿ ಅಕ್ರಮ ಭೂ ಒತ್ತುವರಿ ಪ್ರಕರಣಗಳನ್ನು ತ್ವರಿತವಾಗಿ ವಿಚಾರಣೆ ನಡೆಸಲು ರಚನೆ ಮಾಡಿರುವ ವಿಶೇಷ ನ್ಯಾಯಾಲಯ ಸ್ಥಾಪನೆಯಾಗಿ ಕಾರ್ಯಾರಂಭ ಮಾಡಿರುವುದು ಸ್ವಾಗತಾರ್ಹವ್ರ್. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾರಾಯಣ್ ಅವರ ನೇತೃತ್ವದಲ್ಲಿ ಪೀಠ ಬೆಂಗಳೂರಿನಲ್ಲಿ ಸ್ಥಾಪನೆಯಾಗಿದೆ. ವಿಶೇಷ ನ್ಯಾಯಾಲಯ ಕರ್ನಾಟಕ ಭೂಕಬಳಿಕೆ ತಡೆ ಕಾಯ್ದೆ 2011ರ ಸೆಕ್ಷನ್ 7ರ ಅಡಿ ಬರುವ ಎಲ್ಲ ಪ್ರಕರಣಗಳ ವಿಚಾರಣೆಯನ್ನು ನಡೆಸಲಿದೆ. ಕರ್ನಾಟಕ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾರಾಯಣ್ ಅವರ ನೇತೃತ್ವದಲ್ಲಿರುವ ಪೀಠ ದಲ್ಲಿ ನಾಲ್ವರು ಸದಸ್ಯರು ಇರುತ್ತಾರೆ. ಈ ವಿಶೇಷ ನ್ಯಾಯಾಲಯದಲ್ಲಿ ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ರಾಯಪ್ಪ ಹನುಮಂತಪ್ಪ ರೆಡ್ಡಿ ಮತ್ತು ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಬಾಲಕೃಷ್ಣ ಬಿ ಅವರು ನ್ಯಾಯಿಕ ಸದಸ್ಯರಾಗಿರುತ್ತಾರೆ. ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಆಯುಕ್ತ ಮನೀಶ್ ಮೌದ್ಗಿಲ್, ಬೆಂಗಳೂರು ನಗರ ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿಗಳಾದ ಹಪ್ಸಿಬಾರಾಣಿ ಕೊರ್ಲಾಪಾಟಿ ಅವರು ಕಂದಾಯ ಸದಸ್ಯರಾಗಿರುತ್ತಾರೆ.

ಭೂಕಬಳಿಕೆ ಪ್ರಕರಣಗಳ ಶೀಘ್ರ ವಿಚಾರಣೆ ಹಾಗೂ ಕಬಳಿಕೆಯ ಭೂಮಿಯ ಒಡೆತನ, ಹಕ್ಕುಸ್ವಾಮ್ಯ, ಸ್ವಾಧೀನ ಹಾಗೂ ಅಪರಾಧಿಗಳ ವಿಚಾರಣೆ/ಶಿಕ್ಷೆ ವಿಧಿಸುವ ವ್ಯಾಪ್ತಿಯನ್ನು ತ್ವರಿತ ಕೋರ್ಟ್ ಹೊಂದಲಿದೆ. ಕಬಳಿಕೆಯಾದ ಜಮೀನಿನ ವಿಸ್ತೀರ್ಣ, ಮೌಲ್ಯ, ಸ್ಥಿತಿಗತಿ ಆಧರಿಸಿ ವಿಚಾರಣೆಗೆ ಪರಿಗಣಿಸಬಹುದು. ಪ್ರಕರಣ ದಾಖಲಾದ ಆರು ತಿಂಗಳಲ್ಲಿ ಇತ್ಯರ್ಥಪಡಿಸಿ ಕಾನೂನು ಪ್ರಕಾರವಾಗಿಯೇ ಜಮೀನು ವಾಪಸ್ ಪಡೆಯುವ ಪ್ರಕ್ರಿಯೆಯಲ್ಲಿ ಕೋರ್ಟ್ ಪ್ರಮುಖ ಪಾತ್ರ ವಹಿಸಲಿದೆ. ಆದರೆ ರಿಯಲ್ ಎಸ್ಟೇಟ್ ಉದ್ಯಮಿಗಳು, ಮಂತ್ರಿ/ರಾಜಕಾರಣಿಗಳು ಹಾಗೂ ಅಧಿಕಾರಿಗಳ ದುಷ್ಟಕೂಟದ ಪ್ರಭಾವ ಪ್ರಭುತ್ವದ ಎಲ್ಲಾ ರಂಗಗಳ ಮೇಲೆ ಹೊಂದಿರುವ ವಿಶೇಷ ಪ್ರಭಾವದ ಹಿನ್ನೆಲೆಯಲ್ಲಿ ಇದು ಎಷ್ಟು ಪರಿಣಾಮಕಾರಿಯಾಗಿ ನಡೆಯಲಿದೆ ಎಂಬುದನ್ನು ಕಾದು ನೋಡಬೇಕಾಗಿದೆ. ರಾಜಾಕಾಲುವೆ ಒತ್ತುವರಿ ಎರವು ಕಾರ್ಯಾಚರಣೆಯಲ್ಲಿ

ಪುಟ 4 ಕ್ಕೆ

@SitaramYechury

ಮೋದಿ ಖಾಸಗಿ ಟೆಲಿಕಾಂ ಕಂಪನಿಯ ಪ್ರಚಾರದಲ್ಲಿ ತೊಡಗಿದ್ದಾರೆ. ರೀಯಲ್ ಎಸ್ಟೇಟ್ ಕಂಪನಿಗಳ ಬ್ಯಾಂಕ್ ಸಾಲ ಮನ್ನಾ ಮಾಡ ಹೊರಟಿರುವ ಸರಕಾರದ ಬಳಿ ಕಾರ್ಮಿಕರಿಗಾಗಿ ಮಾತ್ರ ಹಣ ಇಲ್ಲವೇ?

– ಸೀತಾರಾಂ ಯೆಚುರಿ

ಕರ್ನಾಟಕ ಪ್ರಾಂತ ರೈತ ಸಂಘದಿಂದ ರಸ್ತೆ ತಡೆ ಚಳುವಳಿ

ದೇಶದ ರೈತ ಸಂಕಷ್ಟದಲ್ಲಿದ್ದು ಆತ್ಮಹತ್ಯೆಯ ದಾರಿಯನ್ನು ತುಳಿಯುತ್ತಿದ್ದರೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರ ಸಂಕಷ್ಟಗಳಿಗೆ ಶಾಶ್ವತ ಪರಿಹಾರಗಳನ್ನು ಹುಡುಕುವ ನಿಟ್ಟಿನಲ್ಲಿ ರೈತ ಮತ್ತು ಕೃಷಿ ಪರವಾದ ನೀತಿಗಳನ್ನು ಜಾರಿಗೊಳಿಸಲು ಮುಂದಾಗುತ್ತಿಲ್ಲ. ಆದ್ದರಿಂದಲೇ ದಿನದಿಂದ ದಿನಕ್ಕೆ ಕೃಷಿಯನ್ನು ಬಿಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಕೃಷಿ ಲಾಭದಾಯಕವಿರಲಿ, ಅತ್ಯಂತ ದುಬಾರಿ ಮತ್ತು ಗ್ಯಾರಂಟಿ ಸಾಲ ಎನ್ನುವಂತಾಗಿದೆ. ಕೃಷಿಯನ್ನು ಇಂತಹ ಬಿಕ್ಕಟ್ಟಿನಿಂದ ಹೊರತರಬೇಕಾದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸಬೇಕಾಗುತ್ತದೆ. ಅದಕ್ಕಾಗಿ ಸೆಪ್ಟೆಂಬರ್ 2 ರಂದು ದೇಶದಾದ್ಯಂತ ರೈತ ಚಳುವಳಿಗಳು ಹೋರಾಟಕ್ಕೆ ಕರೆ ನೀಡಿವೆ. ಇದರ ಭಾಗವಾಗಿ ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲೂ ರಸ್ತೆ ತಡೆ ಚಳುವಳಿ ನಡೆಸಿತು.

ಚಳುವಳಿಯ ಕೆಲವು ಬೇಡಿಕೆಗಳು

1. ವಿವಿಧ ಹೆಸರಿನ ಸರಕಾರಿ ಮತ್ತು ಅರಣ್ಯ ಜಮೀನು ಸಾಗುವಳಿ ಮಾಡಿ, ಅಭಿವೃದ್ಧಿ ಪಡಿಸಿದ ರಾಜ್ಯದ ಎಲ್ಲಾ ಬಡ ರೈತರಿಗೆ ಹಕ್ಕು ಪತ್ರ ನೀಡಲು ಅಡ್ಡಿಯಾಗಿರುವ ಭೂಕಂದಾಯ ಮತ್ತು ಅರಣ್ಯ ಹಕ್ಕು ಮಾನ್ಯತೆಯ ಮತ್ತು ಮತ್ತಿತರೇ ಅಗತ್ಯ ಕಾಯ್ದೆಗಳ ವಿವಿಧ ಕಲಂಗಳಿಗೆ ತಿದ್ದುಪಡಿ ಮಾಡಿ ಹಕ್ಕುಪತ್ರ ದೊರೆಯುವಂತೆ ಸೂಕ್ತ ಕ್ರಮ ವಹಿಸಬೇಕು. ಈ ಎಲ್ಲಾ ಜಮೀನುಗಳನ್ನು ಗಣತಿ ಮಾಡಿ ವಾಸ್ತವ ಅಂಶಗಳನ್ನು ಪಹಣಿಗಳಲ್ಲಿ ಸೇರ್ಪಡೆ ಮಾಡಬೇಕು. ಯಾವುದೇ ಕಾರಣ-ಕ್ಕೆ ಇವರನ್ನು ಭೂಕಬಳಿಕೆದಾರರೆಂದು ಪರಿಗಣಿಸಬಾರದು ಮತ್ತು ವಿಶೇಷ ಕೋರ್ಟಿನ ವ್ಯಾಪ್ತಿಗೆ ಸೇರ್ಪಡೆ ಮಾಡಬಾರದು. ಗುತ್ತಿಗೆ ಆಧಾರದಲ್ಲಿ ಮತ್ತು ಪಾಲು ಬೆಳೆಯಾಧಾರದಲ್ಲಿ ವ್ಯವಸಾಯದಲ್ಲಿ ತೊಡಗಿರುವ ಬಡಗೇಣಿದಾರರ ಸಂರಕ್ಷಣೆಗೆ ಅಗತ್ಯ ಕಾಯ್ದೆಯನ್ನು ರೂಪಿಸಬೇಕು. ರಾಜ್ಯದ ಎಲ್ಲ ನಿವೇಶನ ರಹಿತ ಬಡವರಿಗೆ ಬದುಕು ಕಟ್ಟಿಕೊಡುವಂತಹ ಕನಿಷ್ಠ 10 ಸೆಂಟ್ಸ ಜಮೀನು ಉಚಿತವಾಗಿ ಒದಗಿಸಲು ಭೂಸ್ವಾಧೀನಕ್ಕೆ ಮುಂದಾಗಬೇಕು. ಕನಿಷ್ಟ 5ಲಕ್ಷ ರೂಗಳ ಮನೆಯನ್ನು ಕಟ್ಟಿಸಿಕೊಡಬೇಕು. ಕರ್ನಾಟಕ ಸರಕಾರದ ಮೇ 31,2016ರಂದು ಹೊರಡಿಸಿದ ಭೂ ಸ್ವಾಧೀನ ಆದೇಶವನ್ನು, ಭೂಸ್ವಾಧೀನ ಕಾಯ್ದೆ – 2013 ರಲ್ಲಿನ ಬೆಲೆ ನೀತಿ, ಪುನರ್‌ವಸತಿ ಮತ್ತು ಪುನರ್ ನಿರ್ಮಾಣದ ಅಂಶಗಳು ಮತ್ತು ಭೂಸ್ವಾಧೀನದ ನಂತರವೂ ಕೂಡ ಸಾಮಾಜಿಕ ಹಾಗೂ ಪರಿಸರದ ಪರಿಣಾಮಗಳ ಕುರಿತ ಕ್ರಮಗಳನ್ನು ಒಳಗೊಳ್ಳುವಂತೆ ತಿದ್ದುಪಡಿ ಮಾಡಬೇಕು. ಪ್ರಗತಿಪರವಾದ ಭೂ ಸುಧಾರಣೆ ಕಾನೂನನ್ನು ಜಾರಿಗೊಳಿಸಬೇಕು.
2. ಕರ್ನಾಟಕದ 11 ಜಿಲ್ಲೆಗಳ 40 ತಾಲೂಕಾಗಳ 1576 ಗ್ರಾಮಗಳ ಜನತೆಗೆ ಆತಂಕವನ್ನುಂಟು ಮಾಡಿರುವ ಮತ್ತು ಅಲ್ಲಿಯ ಬಡ ಸಾಗುದಾರರ ಜಮೀನಿಗೆ ಹಕ್ಕು ಪತ್ರ ಪಡೆಯಲು ಅಡ್ಡಿಯಾಗಿರುವ ಮತ್ತು ಪರಿಸರ ಸೂಕ್ಷ್ಮ ಪ್ರದೇಶದ ಪರಿಸರ ಸ್ನೇಹಿ ಅಭಿವೃದ್ಧಿಗೆ ವಿರುದ್ಧವಾಗಿರುವ, ಅದೇ ರೀತಿ ಕರಾವಳಿ ಪ್ರದೇಶದ ಮತ್ತು ದಕ್ಷಿಣ ಹಾಗೂ ಮಧ್ಯ ಕರ್ನಾಟಕದ ಬರ ಪೀಡಿತ ಜಿಲ್ಲೆಗಳ ಬರ ನೀಗಿಸಿ ನೀರು ಒದಗಿಸಲು ಅಡ್ಡಿಯಾಗಿರುವ ಪಶ್ಚಿಮ ಘಟ್ಟಗಳ ಕುರಿತ, ಕಸ್ತೂರಿ ರಂಗನ್ ವರದಿಯ ಜಾರಿಯನ್ನು ಕೂಡಲೇ ತಡೆಯಬೇಕು ಮತ್ತು ಸೂಚಿಸಲಾದ ಅಭಿವೃದ್ಧಿಗೆ ನೆರವಾಗುವಂತೆ ಈ ಪ್ರದೇಶದ ಜನಗಳ ಆತಂಕವನ್ನು ಗಮನಿಸಿ ಸೂಕ್ತ ತಿದ್ದುಪಡಿ ಮಾಡಬೇಕು. ●

ಬಗರ್ ಹುಕುಂ ಭೂಮಿ........

ಪುಟ 3 ರಿಂದ

ಜನಸಾಮಾನ್ಯರು ಮತ್ತು ಪ್ರಭಾವಿ ವ್ಯಕ್ತಿ/ಕಂಪನಿಗಳ ನಡುವೆ ಢಾಲಾಗಿ ಕಂಡು ಬಂದ ತಾರತಮ್ಯದ ಹಿನ್ನೆಲೆಯಲ್ಲಿ ಇಂತಹ ಅನುಮಾನ ಸಹಜವೇ. ಈ ಆದರೆ ಈ ಪ್ರಯತ್ನವನ್ನು ಎಲ್ಲಾ ಪ್ರಜ್ಞಾವಂತರು ಬೆಂಬಲಿಸಬೇಕಾಗಿದೆ. ಇದು ಪರಿಣಾಮಕಾರಿಯಾಗಿರುವಂತೆ ಒತ್ತಡ ಹರಬೇಕಾಗಿದೆ.

ಆದರೆ ಒತ್ತುವರಿ ಎಂದು ಪರಿಗಣಿಸಲಾಗಿರುವ ಜಮೀನಿನಲ್ಲಿ ಬಗರ್ ಹುಕುಂ ಸಾಗುವಳಿ ಅನುಸಾರ ಫಾರಂ 50 ಹಾಗೂ 53ರ ಅಡಿಯಲ್ಲಿ ಸರ್ಕಾರ-ಕ್ಕೆ ಅರ್ಜಿ ಸಲ್ಲಿಸಿರುವ ಹಾಗೂ ವ್ಯಾಜ್ಯದ 8.36 ಲಕ್ಷ ಪ್ರಕರಣಗಳು ಇವೆ' ಎಂದು ಸರಕಾರವೇ ತಿಳಿಸಿದೆ.

ಸುಮಾರ 8 ಲಕ್ಷಕ್ಕೂ ಹೆಚ್ಚು ಎಕರೆ ಭೂಮಿ ರೈತರು ಹಾಗೂ ಕೃಷಿ ಕಾರ್ಮಿಕರ ಸುಪರ್ದಿಯಲ್ಲಿದೆ. ಸರಕಾರ ಆಗಾಗ 5 ಎಕರೆಗಿಂತ ಕಡಿಮೆ ಇರುವ ಮತ್ತು ಬಡ ರೈತರಿಗೆ ಸೇರಿದ ಸ್ವತಃ ಸಾಗುವಳಿ ಮಾಡುತ್ತಿರುವ ಭೂಮಿಯ ಒಡೆತನ ಪತ್ರವನ್ನು ಅವರಿಗೆ ನೀಡಲಾಗುವುದು ಎಂದು ಆಶ್ವಾಸನೆ ಕೊಡುತ್ತಾ ಬಂದಿದೆ. ಬಡ ರೈತರು ಇದನ್ನು ನಂಬಿಕೊಂಡು ಸಾಗುವಳಿ ಮಾಡುತ್ತಾ ಬಂದಿದ್ದಾರೆ. ರೈತರು ಕೆಲವು ವರ್ಷಗಳಿಂದ ಹಿಡಿದು ಕೆಲವು ದಶಕಗಳಿಂದ ಸಾಗುವಳಿ ಮಾಡುತ್ತಿದ್ದರೂ ಒಡೆತನ ಪತ್ರ ಸಿಕ್ಕಿಲ್ಲ. ಭೂಕಬಳಿಕೆ ತಡೆ ಕಾಯಿದೆ 2011ರ ಸೆಕ್ಷನ್ 7 ರ ಅಡಿ ಭೂಗಳ್ಳ ದುಷ್ಟಕೂಟದವರನ್ನೂ ಬಡ ಬಗರ್ ಹುಕುಂ ಸಾಗುವಳಿದಾರರನ್ನು ಒಟ್ಟಾಗಿ ಭೂಕಬಳಿಕೆ ಮಾಡಿರುವವರು ಎಂದು ಪರಿಗಣಿಸಲಾಗಿದೆ. ಬಡ ಬಗರ್ ಹುಕುಂ ಸಾಗುವಳಿದಾರರನ್ನು ಈ ಕಾನೂನಿನ ವ್ಯಾಪ್ತಿಯಿಂದ ಹೊರಗಿಡುವಂತೆ ಈ ಕಾನೂನಿನ ತಿದ್ದುಪಡಿ ಮಾಡಬೇಕೆಂದು ಹಾಗೂ ಅವನ್ನು ಸಕ್ರಮಗೊಳಿಸಿ ಒಡೆತನ ಪತ್ರಗಳನ್ನು ಕೂಡಲೇ ಕೊಡಬೇಕೆಂದು ರೈತ ಮತ್ತು ಪ್ರಗತಿಪರ ಸಂಘಟನೆಗಳು ಹಾಗು ಎಡಪಕ್ಷಗಳು ಒತ್ತಾಯಿಸುತ್ತಾ ಬಂದಿವೆ. ಈಗ ವಿಶೇಷ ನ್ಯಾಯಾಲಯ ರಚನೆಯಾಗಿ ಕಾರ್ಯಾರಂಭ ಮಾಡಿರುವ ಹಿನ್ನೆಲೆಯಲ್ಲಿ ಈ ವಿಷಯ ತುರ್ತಿನದಾಗಿದೆ. ಈ ಕಾನೂನು ಬದಲಾಯಿಸದಿದ್ದರೆ ಸುಮಾರು 16 ಲಕ್ಷ ಬಡ ರೈತರ ಕುಟುಂಬಗಳು ಬೀದಿಗೆ ಬೀಳುತ್ತವೆ.

ಆದ್ದರಿಂದ ಬಗರ್ ಹುಕುಂ ಸಾಗುವಳಿ ಅನುಸಾರ ಫಾರಂ 50 ಹಾಗೂ 53ರ ಅಡಿಯಲ್ಲಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿರುವ 5 ಕ್ಕಿಂತ ಕಡಿಮೆ ಎಕರೆ ಇರುವ ಸಾಗುವಳಿದಾರರನ್ನು ಭೂಕಬಳಿಕೆ ತಡೆ ಕಾಯಿದೆ 2011 ರ ವ್ಯಾಪ್ತಿಯಿಂದ ತೆಗೆಯಲು ಸೂಕ್ತ ತಿದ್ದುಪಡಿ ಮಾಡಬೇಕು. ಆ ವರೆಗೆ ಬಗರ್ ಹುಕುಂ ಸಾಗುವಳಿದಾರರ ಪ್ರಕರಣಗಳನ್ನು ವಿಶೇಷ ನ್ಯಾಯಾಲಯ ಕೈಗೆತ್ತಿಕೊಳ್ಳಬಾರದು. ಇದಕ್ಕೆ ಸರಕಾರ ಸ್ಪಂದಿಸದಿದ್ದರೆ ರೈತ-ಕೃಷಿ ಕೂಲಿ ಸಂಘಟನೆಗಳು ಹಾಗೆ ಮಾಡುವಂತೆ ತೀವ್ರ ಒತ್ತಡ ತರಬೇಕು. ರಿಯಲ್ ಎಸ್ಟೇಟ್ ದುಷ್ಟಕೂಟದ ಭಾರೀ ಭೂಕಬಳಿಕೆಗಳನ್ನು ಆದ್ಯತೆ ಮೇಲೆ ವಿಶೇಷ ನ್ಯಾಯಾಲಯ ಕೈಗೆತ್ತಿಕೊಳ್ಳಬೇಕು. ●

ಶೈಕ್ಷಣಿಕ ಬಂದ್

"ಶಿಕ್ಷಣದ ವ್ಯಾಪಾರೀಕರಣ, ಕೋಮುವಾದೀಕರಣ, ಕೇಂದ್ರಿಕರಣ ವಿರೋಧಿಸಿ, ಸಮಾನ ಶಿಕ್ಷಣಕ್ಕಾಗಿ ಒತ್ತಾಯಿಸಿ, ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಆಗ್ರಹಿಸಿ" ಖಈಖ, ಂಖಆಖಔ, ಂಖಖಈ ಸಂಘಟನೆಗಳು ಕರೆ ನೀಡಿದ್ದ ಶೈಕ್ಷಣಿಕ ಬಂದ್ ಗೆ ಉತ್ತಮ ಪ್ರತಿಕ್ರಿಯೆ ದೊರಕಿದೆ. ಬಂದ್ ನ ಭಾಗವಾಗಿ ಇಂದು ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಕಾರ್ಯಕರ್ತರು ಕೇಂದ್ರ ಮತ್ತು ರಾಜ್ಯ ಸರಕಾರಗಳ ಶಿಕ್ಷಣ ವಿರೋಧಿ ನೀತಿಗಳ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತ ಪಡಿಸಿದರು. ಪ್ರತಿಭಟನೆಯಲ್ಲಿ ಎಸ್.ಎಫ್.ಐ ರಾಜ್ಯಾಧ್ಯಕ್ಷ ವಿ.ಅಂಬರೀಷ್, ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ, ಎ.ಐ.ಡಿ.ಎಸ್.ಓ ರಾಜ್ಯ ಕಾರ್ಯದರ್ಶಿ ಅಶ್ವಿನಿ.ಕೆ, ರಾಜ್ಯ ಉಪಾಧ್ಯಕ್ಷ ರವಿನಂದನ್, ಎ.ಐ.ಎಸ್.ಎಫ್ ನ ಮಂಜುನಾಥ ಸೇರಿದಂತೆ ಅನೇಕರಿದ್ದರು.

ಅಖಿಲ ಭಾರತ ಮಟ್ಟದಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿಸಮಿತಿಯು ಬೆಲೆ, ಏರಿಕೆ, ಭ್ರಷ್ಟಾಚಾರ, ಖಾಸಗೀಕರಣ ಸರ್ವಾಧಿಕಾರಿ ದೋರಣೆ ಖಂಡಿಸಿ ನಡೆಸಿದ ಸೆಪ್ಟೆಂಬರ್ 2ರ ಅಖಿಲ ಭಾರತ ಮುಷ್ಕರವನ್ನು ಬೆಂಬಲಿಸಿ ಶೈಕ್ಷಣಿಕ ಬಂದ್ ನಡೆಸಲಾಯಿತು.

ಬೇಡಿಕೆಗಳು

- ಶಿಕ್ಷಣಕ್ಕಾಗಿ ರಾಜ್ಯ ಬಜೆಟ್‌ನಲ್ಲಿ ಶೆ 30% ರಷ್ಟು ಕೇಂದ್ರ ಬಜೆಟ್‌ನಲ್ಲಿ ಶೆ 10%ರಷ್ಟು ಜಿ.ಡಿ.ಪಿ ಯಲ್ಲಿ ಶೇ 6ರಷ್ಟು ಹಣವನ್ನು ಮೀಸಲಿಡಬೇಕು.
- ಶಿಕ್ಷಣದ ಖಾಸಗೀಕರಣ – ಕೇಸರೀಕರಣ ಹಾಗೂ ಕೇಂದ್ರೀಕರಣ ನಿಲ್ಲಿಸಬೇಕು, ಸರ್ಕಾರಿ ಶಾಲಾ ಕಾಲೇಜ್ ವಿ.ವಿ ಹಾಸ್ಟಲ್‌ಗಳು ಬಲಗೊಳ್ಳಬೇಕು.
- 2016 ರ ಹೊ ರಾಷ್ಟ್ರೀಯ ಶಿಕ್ಷಣ ಕರಡು ನೀತಿಯ ವಾಪಾಸ್ಸಾತಿಗಾಗಿ.
- ಉನ್ನತ ಮತ್ತು ವೃತಿ ಶಿಕ್ಷಣ ಶುಲ್ಕಗಳು ಇಳಿಯಬೇಕು, ಎಲ್ಲ ವಿದ್ಯಾರ್ಥಿ ಸಮುದಾಯಕ್ಕೂ ಈ ಶಿಕ್ಷಣ ಸಿಗುವಂತಾಗಬೇಕು, ಅದಕ್ಕಾಗಿ ಕೇಂದ್ರೀಯ ಶಾಸನ ಜಾರಿಯಾಗಬೇಕು.
- ಹಾಸ್ಟಲ್ ವಿದ್ಯಾರ್ಥಿಗಳಿಗೆ 3500 ಆಹಾರ ಭತ್ಯೆ ನೀಡಬೇಕು, ಹಾಸ್ಟೇಲ್‌ಗಳನ್ನು ಬಲಪಡಿಸಬೇಕು.
- ವಿದ್ಯಾರ್ಥಿನಿಯರ ಮೇಲಿನ ದೌರ್ಜನ್ಯ ನಿಲ್ಲಬೇಕು, ಅದಕ್ಕಾಗಿ ಲೈಂಗಿಕ ಕಿರುಕುಳ ವಿರೋಧಿ ಸಮಿತಿ ರಚನೆಯಾಗಬೇಕು.
- ಖಾಸಗಿ, ವಿದೇಶಿ ವಿಶ್ವವಿದ್ಯಾಲಯಗಳನ್ನು ತಿರಸ್ಕರಿಸಿ, ಸರ್ಕಾರಿ ವಿವಿಗಳಿಗೆ ಮೂಲ ಸೌಲಭ್ಯ ನೀತಿ ವಿವಿಗಳಲ್ಲಿ ಭ್ರಷ್ಟಾಚಾರ ನಿಲ್ಲಿಸಿ.
- ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್, ವಿದ್ಯಾರ್ಥಿ ವೇತನ ನೀಡಬೇಕು.
- ಖಾಲಿ ಇರುವ ಬೋಧಕ-ಬೋಧಕೇತರ ಹುದ್ದೆಗಳ ಭರ್ತಿ ಮಾಡಬೇಕು. ●

ಕೇಳಿಸಿದ್ದು

ಉತ್ತರ ಕರ್ನಾಟಕದಲ್ಲಿ ರೇಷನ್ ಕಾರ್ಡನ್ನು ಕರೆಯುವುದೇ ಕೂಪನ್ ಅಂತ. ಹಾಗಾಗಿ ಕೂಪನ್ ಮೇಲೆ ಮತ್ತೆ ಕೂಪನ್ ತೆಗೆದುಕೊಳ್ಳಬೇಕು ಎಂದು ಸುದ್ದಿ ಬಂದಾಗ ಜನರು ನಕ್ಕುಬಿಟ್ಟರು

'ಈ ದೇಶದಲ್ಲಿ ಆರೋಗ್ಯ, ಆಹಾರ ಇವನ್ನೆಲ್ಲ ಜನಕ್ಕೆ ಪುಗಸಟ್ಟೆ ಕೊಟ್ಟುಬಿಡ್ತಿದ್ದೀರಾ, ಅದನ್ನೆಲ್ಲ ಇನ್ನು ಮುಚ್ಚಿ ಹಾಕಿ. ಮಾರುಕಟ್ಟೆ ಎಲ್ಲವನ್ನೂ ನೋಡಿಕೊಳ್ಳುತ್ತದೆ, ಮಾರುಕಟ್ಟೆಗೆ ಬಿಟ್ಬಿಡಿ' ಎನ್ನುತ್ತದೆ ವಿಶ್ವ ವ್ಯಾಪಾರದ ಷರತ್ತು. ನೂರೆಂಟು ಜನಕಲ್ಯಾಣ ಯೋಜನೆಗಳಿರುವ ನಮ್ಮ ದೇಶದಲ್ಲಿ ಅದನ್ನು ಮಾಡುವುದು ಹೇಗೆ? ಸೋಸುವುದು. ಮತ್ತೆ ಮತ್ತೆ ಸೋಸುತ್ತ ಹೋಗುವುದು. ಐಎಎಸ್ ಮೇಧಾವಿಗಳು ಜನರನ್ನೇ ಬೀಳಿಸುವ ಹೊಸ ಹೊಸ ಜರಡಿಗಳನ್ನು, ಸೋಸುವ ಈ ವಿಧಾನಗಳನ್ನು ಕಂಡು ಹಿಡಿದರು.

ರೇಷನ್ ಕಾರ್ಡುಗಳಿಗೆ ಆಧಾರ್ ಲಿಂಕ್ ಮಾಡುವುದರಿಂದ ಬೋಗಸ್ ಕಾರ್ಡುಗಳ ಪತ್ತೆ ಆಗುವುದಿಲ್ಲ ಎಂದು ಅಧಿಕಾರಿಗಳಿಗೆ ಮೊದಲೇ ಗೊತ್ತಿದ್ದಾಗಲೂ ಸಾರ್ವಜನಿಕ ಹಣ ಪೋಲು ಮಾಡಿದರು. ಈಗ ಮತ್ತೆ ಅದೇ ಹೆಸರಿನಲ್ಲಿ ಮತ್ತೆ ದುಡ್ಡು ವ್ಯಯ. ಬೋಗಸ್ ಕಾರ್ಡ್ ಗುರುತಿಸಲು, ಆರ್.ಆರ್. ನಂಬರ್, ಮೊಬೈಲ್ ಮೆಸೇಜ್, ಆಧಾರ್ ಸಂಖ್ಯೆ ಎಲ್ಲವನ್ನೂ ಮಾಡಿ ಕಡೆಗೆ, 'ಬೋಗಸ್ ಕಾರ್ಡ್ ಹುಡುಕಿ ಕೊಟ್ಟವರಿಗೆ ಬಹುಮಾನ' ಎಂದು ತಾವು ನಿರ್ಗಮಿಸುವ ಕೆಲ ದಿನಗಳ ಮೊದಲು ಅಂದಿನ ಆಹಾರ ಮಂತ್ರಿ ದಿನೇಶ್ ಗುಂಡೂರಾವ್ ಘೋಷಿಸಿ ತಮ್ಮ ಸೋಲನ್ನು ಒಪ್ಪಿಕೊಂಡಿದ್ದರು

ಇದು ಇನ್ನೊಂದು ರೀತಿಯ ಆಹಾರ ರಾಜಕೀಯವಲ್ಲದೆ ಇನ್ನೇನು? ಪಕ್ಷಾತೀತ ರಾಜಕೀಯವಿದು. ಕೆಲವು ಜಾತಿ/ವರ್ಗದ ಜನರು ದನದ ಮಾಂಸವನ್ನು ತಿನ್ನಬಾರದು, ಮಾರಬಾರದು ಎನ್ನುವುದರಲ್ಲಿನ ರಾಜಕೀಯಕ್ಕೂ, ಅತ್ಯಲ್ಪ ಪಡಿತರ ಆಹಾರ ಕೂಡ ಅವರಿಗೆ ಸಿಗದಂತೆ ಮಾಡುವ ಈ ರಾಜಕೀಯಕ್ಕೂ ಮಧ್ಯೆ ವ್ಯತ್ಯಾಸ ಇದೆಯೇ?

–ಶಾರದಾ ಗೋಪಾಲ್ (ಪ್ರಜಾವಾಣಿ)

ಈ ವಾರ ಚರಿತ್ರೆಯಲ್ಲಿ

3 ಸೆಪ್ಟೆಂಬರ್ 1947

ಮೈಸೂರು ಚಲೋ

ಅಗಸ್ಟ್ 15 1947 ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದರೂ ಮೈಸೂರು ಮಹಾರಾಜರು ರಾಜ್ಯದ ಜನತೆಗೆ ಸ್ವಾತಂತ್ರ್ಯ ನೀಡಲಿಲ್ಲ. ರಾಜ್ಯವನ್ನು ಸ್ವತಂತ್ರ ರಾಷ್ಟ್ರವಾಗಿ ತಾವೇ ಆಳುವುದಾಗಿ ಘೋಷಿಸಿದರು. ಹೀಗಾಗಿ ಪ್ರಜಾತಂತ್ರ ಸ್ಥಾಪನೆಗಾಗಿ ಮಹಾರಾಜರ ವಿರುದ್ಧ 'ಮೈಸೂರು ಚಲೋ' ಚಳವಳಿ ಆರಂಭಿಸಬೇಕಾಯಿತು. ಈ ಚಳವಳಿ 1947 ಸೆಪ್ಟೆಂಬರ್ 3 ರಿಂದ 24 ರವರೆಗೂ ನಡೆಯಿತು. ಈ ಚಳವಳಿಯಲ್ಲಿ ರಾಜ್ಯಾದ್ಯಂತ 37 ಜನರು ಗುಂಡಿಗೆ ಬಲಿಯಾಗಿ ಹುತಾತ್ಮರಾದರು. ಮೈಸೂರು ನಗರದಲ್ಲೇ ಮೂರು ಜನ ಗುಂಡಿಗೆ ಎದೆ ಒಡ್ಡಿದರು...

'ಮೈಸೂರು ಚಲೋ' ಚಳುವಳಿಯಲ್ಲಿ ಕಾರ್ಮಿಕರು ದೊಡ್ಡ ರೀತಿಯಲ್ಲಿ ಭಾಗವಹಿಸಿದರು. ಇದರ ಭಾಗವಾಗಿ ಹಮ್ಮಿಕೊಂಡಿದ್ದ 'ಮೈಸೂರು ಚಲೋ' ಚಳುವಳಿಯಲ್ಲಿ ಬಿನ್ನಿ ಮಿಲ್ ಮತ್ತು ಇತರ ಕಾರ್ಮಿಕರು ಭಾಗವಹಿಸದಂತೆ ಮ್ಯಾನೇಜ್ ಮೆಂಟು ಮತ್ತು ಸರಕಾರದ ಪ್ರತಿನಿಧಿಗಳು ಶತಪ್ರಯತ್ನ ಮಾಡಿದರು. ಅದನ್ನು ಧಿಕ್ಕರಿಸಿ ಸೆಪ್ಟೆಂಬರ್ 1 ರಂದು 1947ರಂದು 'ಮೈಸೂರು ಚಲೋ' ಚಳುವಳಿಯ ಜಾಥಾವನ್ನು ಚಿಕ್ಕಲಾಲ್ ಬಾಗಿನಲ್ಲಿ ಬೀಳ್ಕೊಡಲು ಸಂಘಟಿಸಿದ ಮೆರವಣಿಗೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಬೆಂಗಳೂರಿನ ಬೀದಿಗಳನ್ನು ತುಂಬಿ ಬಂದು ಭಾಗವಹಿಸಿದ್ದರು. ಕೆಜಿಎಫ್ ಗಣಿ ಕಾರ್ಮಿಕರು ಈ ರಾಜಕೀಯ ಬೇಡಿಕೆಗಾಗಿ 18 ದಿನಗಳ ಮುಷ್ಕರ ನಡೆಸಿದ್ದು ಚಾರಿತ್ರಿಕ ಘಟನೆ.



ದಲಿತ ಮಹಿಳೆಯ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ವಿರೋಧಿಸಿ ಪ್ರತಿಭಟನೆ

ಜಾತಿ, ಅಸ್ಪೃಶ್ಯತೆ ತಾರತಮ್ಯಗಳು ಜೀವಂತವಾಗಿರುವ ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಸಣಬ ಗ್ರಾಮದಲ್ಲಿ ಗೀತಾ (28) ವಯಸ್ಸಿನ ಗೃಹಿಣಿ ವಾಸವಾಗಿದ್ದಾರೆ. ಅಗಸ್ಟ್ 24ರಂದು ಬುಧವಾರ ರಾತ್ರಿ ವೇಳೆಯಲ್ಲಿ ಮನೆಯಿಂದ ಸುಮಾರು 300 ಮೀಟರ್ ದೂರದಲ್ಲಿ ಆರೋಪಿಗಳು ಗೀತಾ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿ ಕೊಲೆ ಮಾಡಿರುವ ದಾರುಣ ಪ್ರಕರಣ ವರದಿಯಾಗಿದೆ. ಅಗಸ್ಟ್ 25ರಂದು ಬೆಳಿಗ್ಗೆ ಊರಿನ ಗ್ರಾಮಸ್ಥರು ಕಂಡು ಕೊಲೆಯಾಗಿದೆ ಎಂಬುದಾಗಿ ತಿಳಿಸಿದ್ದಾರೆ. ಗೀತಾಳ ತಾಯಿ ಪಾಂಡವಪುರ ಪೊಲೀಸ್ ಠಾಣೆಗೆ ದೂರು ನೀಡಿದ ಬಳಿಕ ಪೊಲೀಸರು ಶವ ಪಂಚನಾಮೆ ಮಾಡಿ ಪಾಂಡವಪುರ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೊತ್ತರ ಪರೀಕ್ಷೆ ನಡೆಸಿದಾಗ ಅತ್ಯಾಚಾರ ಮತ್ತು ಕೊಲೆ ಎಂಬುದಾಗಿ ದೃಢಪಟ್ಟಿದೆ. ಆದರೆ ಶವದ ಮೇಲೆ ಗುಪ್ತ ಅಂಗಾಂಗಗಳ ಮೇಲೆ ಗಾಯಗಳಾಗಿರುವುದರಿಂದ ಸಾಮೂಹಿಕ ಅತ್ಯಾಚಾರವಾಗಿದೆ. ಪೊಲೀಸರು ಕೊಲೆ ಪ್ರಕರಣ ದಾಖಲಿಸಿದ್ದಾರೆ. ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಎಂಬುದರ ಅಡಿಯಲ್ಲಿ ಕೇಸು ದಾಖಲು ಮಾಡಬೇಕು.

ಆದರೆ ಈ ಪ್ರಕರಣದ ವಿವರಗಳನ್ನು ಪರಿಶೀಲಿಸಿದರೆ ಒಬ್ಬ ವ್ಯಕ್ತಿ ಅತ್ಯಾಚಾರ ಮಾಡಿ ಕೊಲೆ ಮಾಡಲು ಸಾಧ್ಯವಿಲ್ಲ. ಗುಂಪಿನಿಂದ ಅತ್ಯಾಚಾರ ನಡೆಸಿ ಕೊಲೆ ಮಾಡಿರುವುದು ಕಂಡು ಬರುತ್ತಿದೆ. ಈ ಅತ್ಯಾಚಾರದಲ್ಲಿ ಮೇಲ್ ಜಾತಿಯವರ ಕೈವಾಡ ಇರುವುದು ಕಂಡುಬರುತ್ತದೆ. ಈ ಕೊಲೆ ಸಂಬಂದ ಆರೋಪಿಯನ್ನು ಬಂಧಿಸಿರುವ ಪೊಲೀಸರು ಆತ ತಪ್ಪೊಪ್ಪಿಕೊಂಡಿದ್ದಾನೆಂದು ಹೇಳುತ್ತಿರುವುದು ಪ್ರಕರಣವನ್ನು ದಿಕ್ಕು ತಪ್ಪಿಸುವಂತಾಗಿದೆ. ಹಾಗಾಗಿ ತನಿಖೆ ನ್ಯಾಯ ಸಮ್ಮತ್ತವಾಗುವುದಿಲ್ಲ. ಅತ್ಯಾಚಾರ ಮಾಡಿ ಕೊಲೆ ಮಾಡಿದ ಉಳಿದ ಆರೋಪಿಗಳನ್ನು ಕೂಡಲೆ ಬಂಧಿಸಲು ವಿಶೇಷ ತನಿಖೆ ತಂಡವನ್ನು ನಿಯೋಜಿಸಬೇಕು. ಈ ಘಟನೆಯನ್ನು ಉನ್ನತ ಮಟ್ಟದ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಬೇಕು. ಕುಟುಂಬಕ್ಕೆ ಸೂಕ್ತ ಭದ್ರತೆ ಮತ್ತು ಪರಿಹಾರ ನೀಡಬೇಕು. ಎಸ್.ಸಿ. ಎಸ್.ಟಿ. ದೌರ್ಜನ್ಯ ಕಾಯ್ದೆ ಅಡಿ ಪ್ರಕರಣವನ್ನು ದಾಖಲಿಸಬೇಕು ಎಂದು ದಲಿತ ಹಕ್ಕುಗಳ ಸಮಿತಿಯ ನಿಯೋಗದ ಅಭಿಪ್ರಾಯ.

ಈ ಘಟನೆಗೆ ಸಂಬಂಧಿಸಿದಂತೆ ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ, ಆರ್. ಕೃಷ್ಣ (ಜಿಲ್ಲಾ ಸಂಚಾಲಕ), ರಾಜೇಂದ್ರಸಿಂಗ್ ಬಾಬು (ಜಿಲ್ಲಾ ಸಹ ಸಂಚಾಲಕರು), ಅಂಬೂಜಿ (ಮಂಡ್ಯ ತಾಲ್ಲೂಕು ಸಂಚಾಲಕರು), ಕುಮಾರ್ ಬಿ.ಜೆ. (ಪಾಂಡವಪುರ ಸಂಚಾಲಕರು) ಒಳಗೊಂಡ ನಿಯೋಗ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದೆ. ನಿಯೋಗದ ಜತೆ ಭರತ್‌ರಾಜ್ ಮತ್ತು ರಮೇಶ್ ಡಿ (ಜಿಲ್ಲಾ ಸಮಿತಿ ಸದಸ್ಯರು) ಮಂಜು (ಮಳವಳ್ಳಿ ತಾಲ್ಲೂಕು ಸಮಿತಿ, ಸಂಚಾಲಕರು,.) ಇದ್ದರು. ಜಿಲ್ಲೆಯಲ್ಲಿ ಈ ಘಟನೆಯು ಮಹಿಳೆಯರಿಗೆ ಭಯ ಹುಟ್ಟಿಸುವಂತಾಗಿದೆ. ಆದ್ದ-ರಿಂದ ಜಿಲ್ಲಾಧಿಕಾರಿಗಳು ಜಿಲ್ಲಾವರಿಷ್ಠಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಉನ್ನತ ತನಿಖೆ ನಡೆಸಿ ಉಳಿದ ಆರೋಪಿಗಳನ್ನು ಬಂಧಿಸಬೇಕು. ಎಂದು ದಲಿತ ಹಕ್ಕುಗಳ ರಾಜ್ಯ ಸಮಿತಿ ಒತ್ತಾಯಿಸಿದೆ.

ಸಣಬ ಗ್ರಾಮದಲ್ಲಿ ಒಟ್ಟು 475 ರಿಂದ 500 ಕುಟುಂಬಗಳಿವೆ. ಇದರಲ್ಲಿ ದಲಿತ ಕುಟುಂಬಗಳು 80 ಮನೆ, ಒಕ್ಕಲಿಗರು 380 ಕುಟುಂಬ, ಇಲ್ಲಿ ಒಕ್ಕಲಿಗೆ ಸಮುದಾಯವೆ ಪ್ರಬಲ ಜಾತಿ. ದಲಿತರ 80 ಕುಟುಂಬಗಳಲ್ಲಿ 0.10 ಗುಂಟೆ, 0.20 ಗುಂಟೆ, 1 ಎಕರೆ ಭೂಮಿ ಇದೆ. ಇದು ಜೀವನಕ್ಕೆ ಸಾಲದೆ ಸವರ್ಣಿಯರಲ್ಲಿ ಕೂಲಿಗೆ ಹೋಗುವುದು ಇದ್ದೆ ಇದೆ, ಗಂಡಸರ ಕೂಲಿಗೆ 200, ಮಹಿಳೆಯರಿಗೆ 100 ರೂ. ಇದೆ. ಈ ಗ್ರಾಮ ಬಿಟ್ಟು ಬೇರೆ ಊರಿಗೆ ಕೆಲಸಕ್ಕೆ ಹೋದರೆ ಸ್ವಲ್ಪ ಜಾಸ್ತಿ ಇರುತ್ತದೆ. ಈ ಗ್ರಾಮದಲ್ಲಿಯೂ ಕ್ಷೌರ ನಿರಾಕರಣೆ, ದೇವಸ್ಥಾನದ ಪ್ರವೇಶ ಇಲ್ಲದಿರುವುದು, ಸಾರ್ವಜನಿಕರ ಪ್ರದೇಶಗಳಿಗೆ ಅಡ್ಡಿ, ಸ್ಮಶಾನ, ನಿವೇಶನ ಇಲ್ಲದೆ ಇರುವುದು ಕಂಡುಬರತ್ತದೆ. ದಲಿತ ಸಮುದಾಯದಲ್ಲಿ 1 ಗ್ರಾಮ ಪಂಚಾಯಿತಿ ಸದಸ್ಯರಿದ್ದೂ ಸವರ್ಣಿಯರ ತಾಳಕ್ಕೆ ತಕ್ಕಂತೆ ನಡೆದುಕೊಳ್ಳವುದು ರೂಢಿಯಲ್ಲಿದೆ.

– ಆರ್. ಕೃಷ್ಣ

ರೈತರ ಕಗ್ಗೊಲೆ ಮಾಡುತ್ತಿರುವ ಕಂದಾಯ ಇಲಾಖೆ ವಿರುದ್ಧ

ರೈತ ಸಂಘದ ಹೋರಾಟ

ರೈತರ ಮೇಲೆ ಕಾನೂನುಬಾಹಿರವಾಗಿ ದಾಳಿ ನಡೆಸಿ, ರೈತರ ಕೃಷಿ ನಾಶ ಮಾಡುತ್ತಿರುವ ಕಂದಾಯ ಅಧಿಕಾರಿಗಳ ದುರ್ನೀತಿಯನ್ನು ಕರ್ನಾಟಕ ಪ್ರಾಂತ ರೈತ ಸಂಘ ಎಂದಿಗೂ ಕ್ಷಮಿಸುವುದಿಲ್ಲ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಕಾರ್ಯದರ್ಶಿ ಹಾಗೂ ಪಟ್ರಮೆ ಗ್ರಾಮ ಪಂಚಾಯತು ಸದಸ್ಯರಾದ ಶ್ಯಾಮರಾಜ್ ಹೇಳಿದರು

ಅವರು ಬೆಳ್ತಂಗಡಿ ತಾಲೂಕು ಕಚೇರಿ ಎದರು ಕನ್ಯಾಡಿ ಗ್ರಾಮದ ರೈತ ಕುಂಞ ಗೌಡರ ರಬ್ಬರ್ ಬೆಳೆಯನ್ನು ಕಡಿದು ನಾಶ ಮಾಡಿದ್ದರ ವಿರುದ್ಧ ಹಾಗೂ ಅಕ್ರಮ ಸಕ್ರಮ ಅರ್ಜಿಗಳ, ಅರಣ್ಯಹಕ್ಕು ಸಮಿತಿಗೆ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಿದ್ದನ್ನು ತಕ್ಷಣ ಸಕ್ರಮಗೊಳಿಸಬೇಕು, ಎಂದು ಒತ್ತಾಯಿಸಿ ರೈತ ಸಂಘದ ನೇತೃತ್ವದಲ್ಲಿ ಸಿಪಿಐ(ಎಂ) ಪಕ್ಷದ ಬೆಂಬಲದೊಂದಿಗೆ ನಡೆದ ಹೋರಾಟವನ್ನುದ್ದೇಶಿಸಿ ಮಾತಾಡುತ್ತಿದ್ದರು. ನಮ್ಮ ರೈತರ ಎಲ್ಲಾ ಸಮಸ್ಯೆಗಳು ಜೀವಂತ ಇವೆ. ಕನಿಷ್ಟ ಭೂಮಿಯ ಒಡೆತನವನ್ನೂ ನೀಡದೆ ಇಂದು ಪ್ರಜಾಪ್ರಭುತ್ವ ಎಂದು ಧ್ವಜಾರೋಹಣ ಮಾಡಲು ನಾಚಿಕೆ ಆಗೋಲ್ಲವೇ ಎಂದು ಹೀಯಾಳಿಸಿದ ಅವರು ಬರುವ ಪ್ರಜಾಪ್ರಭುತ್ವ ದಿನಾಚರಣೆಯ ಮೊದಲು ಎಲ್ಲಾ ರೈತರಿಗೆ ಹಕ್ಕಪತ್ರ ನೀಡದೇ ಇದ್ದರೆ ತಾಲೂಕಿನ ಸಮಸ್ತ ರೈತರು ನಮ್ಮ ಸಂಘದ ನೇತೃತ್ವದಲ್ಲಿ ಪ್ರಜಾ ಹಕ್ಕಿಗಾಗಿ ತಾಲೂಕು ಕಚೇರಿ ಎದುರಿನಲ್ಲಿ ಹೋರಾಡುತ್ತಾ ಪ್ರಜಾಪ್ರಭುತ್ವ ದಿನಾಚರಣೆ ನಡೆಸಲಿದ್ದೇವೆ ಎಂದರು.

ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಕಾರ್ಯದರ್ಶಿ ನ್ಯಾಯವಾದಿ ಬಿ.ಎಂ.ಭಟ್ ಅವರು ಮಾತಾಡುತ್ತಾ ರಬ್ಬರ್ ಗಿಡ ಕಡಿದವರ ಮೇಲೆ ಕೇಸ್ ದಾಖಲಿಸಬೇಕು, ಕುಂಞ ಗೌಡರಿಗೆ ಪರಿಹಾರ ನೀಡಬೇಕು. ಸಂತೋಷ್ ಗೌಡರ ಮೇಲೆ ದಾಖಲಿಸಿದ ಸುಳ್ಳು ಕೇಸ್ ಹಿಂಪಡೆಯಬೇಕು, ಅಕ್ರಮ ಸಕ್ರಮ ಅರ್ಜಿ ವಿಲೇವಾರಿ ಆಗದೆ ರೈತನ ಭೂಮಿಯನ್ನು ತೆರವುಗೊಳಿಸಿರುವ ಕಾನೂನು ಬಾಹಿರ ಕೆಲಸ ಮಾಡಿದ ಅಧಿಕಾರಿಗಳ ಅಮಾನತ್ತಾಗಬೇಕು ಎಂದರು. ಎಲ್ಲಾ ರೈತರಿಗೆ



ಭೂಮಿಯ ಹಕ್ಕಿಗಾಗಿ, ತೀವ್ರ ಸ್ವರೂಪದ ಹೋರಾಟಕ್ಕೆ ನಾವು ಸಿದ್ಧರಾಗುತ್ತೇವೆ ಎಂದ ಅವರು ಇಂದು ಬಹುರಾಷ್ಟ್ರೀಯ ಕಂಪೆನಿಗಳಿಗೆ ರೈತನ ಭೂಮಿಯನ್ನು ನೀಡಲು ಹೊಸ ಹೊಸ ಯೋಜನೆ, ಮಸೂದೆಗಳು ಬರುತ್ತಿವೆ. ಅಂತಹ ಬಲಾಢ್ಯ ಕಂಪೆನಿಗಳ ವಿರುದ್ಧ ಹೋರಾಟಕ್ಕೆ ಸಿದ್ಧರಾಗಬೇಕಾದ ರೈತರು ಇಂದು ಈ ತಾಲೂಕಾಡಳಿತದ ದೌರ್ಜನ್ಯವನ್ನು ಎದುರಿಸಲು ಸಿದ್ಧರು ಎಂದು ತೋರಿಸಿಕೊಡಲು ಬಂದಿದ್ದೇವೆ ಎಂದರು. ರೈತನನ್ನು ಯಾರೇ ಮುಟ್ಟಿದರೂ ಅವರ ಸರ್ವ ನಾಶ ಖಂಡಿತ ಎಂದರು.

ಹೋರಾಟದ ನೇತೃತ್ವದಲ್ಲಿ ಪ್ರಾಂತ ರೈತ ಸಂಘದ ಕನ್ಯಾಡಿ ಮುಖಂಡರುಗಳಾದ ಡೇನಿಸ್ ವೇಗಸ್, ಕುಂಞ ಗೌಡ, ಹರ್ಷ, ಗೋವಿಂದ ಗೌಡ, ಚಂದ್ರಹಾಸ, ಪೆರ್ನು ಗೌಡ, ಸಿಪಿಐ(ಎಂ) ಮುಖಂಡರುಗಳಾದ ನಾರಾಯಣ ಕೈಕಂಬ, ನೆಬಿಸಾ, ಈಶ್ವರಿ, ದೇವಕಿ, ಜಯರಾಮ ಮಯ್ಯ, ಸಂಜೀವ ನಾಯ್ಕ, ಲೋಕೇಶ್ ಕುದ್ಯಾಡಿ, ರೋಹಿಣಿ ಪೆರಾಡಿ, ಸಿಐಟಿಯು ಮುಖಂಡರುಗಳಾದ ಜಯಶ್ರೀ, ಇಂದಿರಾ, ರಾಮಚಂದ್ರ, ಪುಷ್ಪಾ, ಕುಸುಮ, ದೀನೇಶ್ ನಾಯ್ಕ, ಡಿ.ವೈ.ಎಫ್.ಐ. ಮುಖಂಡರುಗಳಾದ ವಿಠಲ ಮಲೆಕುಡಿಯ, ಲಾರೆನ್ಸ್ ಮೊದಲಾದವರು ಇದ್ದರು.

ಜಿಲ್ಲಾಧಿಕಾರಿಗಳಿಗೆ ಮನವಿ ನೀಡಿದ ಪ್ರತಿಭಟನಾಕಾರರು, ಎ.ಸಿ. ಬಂದು ಸಮಸ್ಯೆಗಳ ಪರಿಹಾರಕ್ಕೆ ಒಪ್ಪಿಗೆ ನೀಡುವ ತನಕ ಧರಣಿ ನಡೆಸಿದರು.

ಬಿ.ಎಂ.ಭಟ್

ಅಕ್ರಮ ಸಕ್ರಮ ಯೋಜನೆ ಜಾರಿಗಾಗಿ


ವಿಜಯಪುರ ನಗರದ ಅಂಬೇಡ್ಕರ ವೃತ್ತದಿಂದ ಘೋಷಣೆ ಕೂಗುತ್ತಾ ಮೆರವಣಿಗೆ ಚಾಲನೆಗೊಂಡು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ವಿಜಯಪುರ ವತಿಯಿಂದ ಅಪರ ಜಿಲ್ಲಾಧಿಕಾರಿ ಬೂದೆಪ್ಪ ಅವರಿಗೆ 18 ಬೇಡಿಕೆ ಈಡರಿಸಬೇಕೆಂದು ಮನವಿ ಸಲ್ಲಿಸಲಾಯಿತು. ಮನವಿ ಸ್ವೀಕರಿಸಿ ಸೂಕ್ತ ಪರಿಶೀಲನೆ ಮೇಲಿನ ಅಧಿಕಾರಿಗಳ ಗಮನಕ್ಕೆ ತರುತ್ತೇನೆಂದು ಆಶ್ವಾಸನೆ ನೀಡಿದರು.

ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷ ಭೀಮಶಿ ಕಲಾದಗಿ ಮಾತನಾಡಿ, ಕಂದಾಯ ಸಚಿವರು ಸರ್ಕಾರ ಭೂಮಿ ಹಾಗೂ ಅರಣ್ಯ ಭೂಮಿ ಇನ್ನಿತರರ ಭೂಮಿಗಳಲ್ಲಿ ಸುಮಾರು ವರ್ಷಗಳಿಂದ ಸಾಗುವಳಿ ಮಾಡುವವರಿಗೆ ಡಿಸೆಂಬರ್ ಒಳಗೆ ಹಕ್ಕು ಪತ್ರ ಕೊಡುತ್ತೇನೆ ಎಂದು ಆಶ್ವಾಸನೆ ನೀಡಿದ್ದರು. ಇನ್ನೂವರೆಗೆ ಆ ಪ್ರತಿಕ್ರಿಯೆ ನಡೆದಿಲ್ಲ. ಮುಳವಾಡ ಏತ ನೀರಾವರಿ 3ನೇ ಹಂತದ ಮಸೂತಿ. ಚಿಮ್ಮಲಗಿ ಜಾಕ್‌ವೇಲ್ ಕಾಮಗಾರಿ ಕಳಪೆ ಮಟ್ಟದಾಗಿದ್ದು, ಅಲ್ಲಿ ಭ್ರಷ್ಟಾಚಾರ ನಡೆಯುತ್ತಿದ್ದು ಈ ಕುರಿತು ತನಿಖೆ ಮಾಡಿ ತಪ್ಪಿತಸ್ತರಿಗೆ ಕಾನೂನು ಕ್ರಮ ಕೈಗೊಳ್ಳಬೇಕು. ನಿವೇಶನದಲ್ಲಿ ಅಕ್ರಮ ಸಕ್ರಮ ಆದೇಶ ಮಾಡಿದ್ದರು. ಆದರೆ ಯೋಜನೆ ಅಭಿವೃದ್ಧಿ, ಕಂದಾಯ ಇಲಾಖೆ ಅಧಿಕಾರಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಖುದ್ದಾಗಿ ಸ್ಥಳಕೆ ಭೇಟಿ ನೀಡಿ ಪರಿಶೀಲಿಸಬೇಕು. ಅಕ್ರಮ ಸಕ್ರಮ ಯೋಜನೆ ತಕ್ಷಣ ಚಾಲನೆ ನೀಡಬೇಕು ಎಂದು ಒತ್ತಾಯಿಸಿದರು.

ಕೂಡಗಿ ಅಣು ವಿದ್ಯುತ್ ಸ್ಥಾವರ್ (ಎನ್‌ಟಿಪಿಸಿ) ಅಭಿವೃದ್ಧಿಗಾಗಿ ಮಣ್ಣು ಹೊಡೆಯಲಿಕ್ಕೆ ಗುತ್ತಿಗೆದಾರರಿಗೆ ಕೊಟ್ಟಿದ್ದು, ನೂರಾರು ಡಂಪರ್‌ಗಳಿಂದ ಮಣ್ಣು ಹೊಡೆದಿದ್ದರಿಂದ ದೂಳಿನಿಂದ ಬೆಳೆಗಳ ಹಾನಿ ರಸ್ತೆಗಳು ಹಾನಿಗೊಳಗಾಗಿದೆ. ರೈತರ ಭೂಮಿಯಲ್ಲಿ ಕಾನೂನು ಬಾಹೀರವಾಗಿ ಗುತ್ತಿಗೆದಾರರು ಮಣ್ಣು ಹೊಡೆದಿದ್ದು ರೈತರಿಗೆ ಮೋಸಮಾಡಿ ಯಾವುದೇ ಬೆಳೆ ಬರದ ಹಾಗೆ ಬೆಳೆ ನಾಶಗೊಳಿಸಿದ್ದಾರೆ. ಎನ್.ಟಿ.ಪಿ.ಸಿ ಅಧಿಕಾರಿಗಳು ಎಂಟು ದಿನದಲ್ಲಿ ನಿಮ್ಮ ಪರಿಹಾರ ಧನ ಕೊಡಿಸುತ್ತೇವೆ ಎಂದು ಸುಳ್ಳು ಆಶ್ವಾಸನೆ ಕೊಡುತ್ತಾ ಬಂದಿದ್ದಾರೆ. ತಕ್ಷಣ ಪರಿಹಾರ ಧನ ಕೊಡಬೇಕು ಎಂದರು. ಪರಿಹಾರ ತಕ್ಷಣ ನೀಡಲಿಲ್ಲವೆಂದರೆ ಹೋರಾಟ ಮಾಡಬೇಕಾಗುವುದು ಎಂದು ಎಚ್ಚರಿಸಿದರು. ವಿಜಯಪುರ, ಸಿಂದಗಿ, ಇಂಡಿ, ಬ. ಬಾಗೇವಾಡಿ, ಸರ್ಕಾರ ಭೂಮಿ ಹಾಗೂ ಕಂದಾಯ ಭೂಮಿ, ಅರಣ್ಯಭೂಮಿ ಇದನ್ನು ಅಕ್ರಮ ಸಕ್ರಮ ಗೊಳಿಸಬೇಕೆಂದು ಕಂದಾಯ ಮಂತ್ರಿ ಮುಖ್ಯ ಮಂತ್ರಿ ಅಧಿಕಾರಿಗಳಿಗೆ ಜುಲೈ 2ರಂದು ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಹಾಗೂ ಉತ್ತರ ನೀಡಿರುವುದಿಲ್ಲ. ತಕ್ಷಣ ತನಿಖೆ ಮಾಡಿ ಅಕ್ರಮ ಸಕ್ರಮಗೊಳಿಸಿ ಹಕ್ಕು ಪತ್ರ ಕೊಡಬೇಕೆಂದು ಭೀಮಶಿ ಕಲಾದಗಿ ಒತ್ತಾಯಿಸಿದರು.

ಕೂಲಿ ಕಾರ್ಮಿಕ ಸಂಘದ ಮಾಜಿ ಅ ಧ್ಯಕ್ಷ ಮಳಸಿದ್ಧ ನಾಯಕೋಡಿ, ದೇವದಾಸಿ ಸಂಘದ ಅಧ್ಯಕ್ಷೆ ಯಲ್ಲವ್ವ ಬಾಳಪ್ಪ ಕತ್ನಳ್ಳಿ, ರೇಣುಕಾ ಬಗಲಿ, ಸೋನಾಬಾಯಿ ರಾಠೋಡ; ರೈತರ ಸಂಘದ ಮುಖಂಡರು ಅಯ್ಯಪ್ಪ ಗದ್ದನಕೇರಿ, ಪರಶುರಾಮ ಮಂಟೂರ, ಸಿದ್ರಾಮ ಬಂಗಾರಿ, ಯಮನಪ್ಪ ಪೂಜಾರಿ, ಚಿದಾನಂದ ಬೆಳ್ಳೆನವರ, ಬಸವರಾಜ ಗುಡಿಮನಿ, ಲಾಲಸಾಬ ಮ್ಯಾಗೇರಿ, ಸಂಗಪ್ಪ ತಳವಾರ, ಸುಭಾಸ ತಳಕೇರಿ, ಶ್ರೀಶೈಲ ನಿಂಬಾಳ, ಸೋಮಪ್ಪ ಗುಡಿಮನಿ, ಯಮನಪ್ಪ ಬಡಿಗೇರ, ಗೈಬು ಮ್ಯಾಗನಕೇರಿ, ಮಹಿಳಾ ಸಂಘ ಕುಸಮಾ ಹಜೇರಿ, ಶಶಿಕಲಾ ಜಮಾದಾರ, ರಾಜಮಾ ನದಾಪ ಮುಂತಾದ ನೂರಾರು ಜನ ಈ ಹೋರಾಟದಲ್ಲಿ ಭಾಗಿಯಾಗಿದ್ದರು.

ರಾಮಣ್ಣ ಶಿರಾಗೋಳ



ನವ-ಉದಾರವಾದಿ ವ್ಯವಸ್ಥೆಯಲ್ಲಿ ಸರ್ಕಾರ ಯಾರಿಗಾಗಿ?

ಅತಿಥಿ ಅಂಕಣ



ಪ್ರೊ. ಟಿ. ಆರ್. ಚಂದ್ರಶೇಖರ್

ನಮ್ಮ ದೇಶದಲ್ಲಿ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣ ಕ್ರಮಗಳನ್ನು ಒಳಗೊಂಡ ಹೊಸ ಆರ್ಥಿಕ ನೀತಿ ಜಾರಿಗೆ ಬಂದು 25 ವರ್ಷಗಳಾದವು. ಈ 25 ವರ್ಷಗಳಲ್ಲಿನ ಅದರ ಸಾಧನೆ, ವೈಫಲ್ಯಗಳ ಬಗ್ಗೆ ಇಂದು ಮಾಧ್ಯಮಗಳಲ್ಲಿ ವಿಸ್ತೃತವಾಗಿ ಚರ್ಚೆ ನಡೆಯುತ್ತಿದೆ. ಈ ಹೊಸ ನೀತಿಯನ್ನು 1991ರಲ್ಲಿ ಏಕೆ ರೂಪಿಸಬೇಕಾಯಿತು, ಅದು ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಒತ್ತಡದಿಂದ ಜಾರಿಗೆ ಬಂದಿತೇ ಅಥವಾ ದೇಶ ಸ್ವತಃ ಪ್ರಜ್ಞಾಪೂರ್ವಕವಾಗಿ ಅದನ್ನು ಜಾರಿಗೆ ತಂದಿತೋ ಎಂಬುದರ ಬಗ್ಗೆ ಅದರ ರೂವಾರಿಗಳು ಇಂದು ಚರ್ಚೆ ಮಾಡುತ್ತಿದ್ದಾರೆ. ಅದು ಅನಿವಾರ್ಯವಾಗಿತ್ತು ಮತ್ತು ಅದು ನಮ್ಮ ಸ್ವಇಚ್ಛೆಯ ಆಯ್ಕೆಯೂ ಆಗಿತ್ತು ಎಂಬ ಬಗ್ಗೆಯೂ ತಜ್ಞರು ಬರೆಯುತ್ತಿದ್ದಾರೆ. ಕಳೆದ 25 ವರ್ಷಗಳಲ್ಲಿ ಏನೆಲ್ಲ ಬದಲಾವಣೆಗಳಾಗಿವೆ, ಅದರ ಪರಿಣಾಮ ಸಮಾಜದ ಕೆಳವರ್ಗದ ಮೇಲೆ, ಕಾರ್ಮಿಕ ವರ್ಗದ ಮೇಲೆ, ಮಹಿಳೆಯರ ಮೇಲೆ ಮತ್ತು ಕೃಷಿಯ ಮೇಲೆ ಹೇಗೆ ಉಂಟಾಗಿದೆ ಎಂಬುದರ ಮೌಲ್ಯಮಾಪನವೂ ನಡೆಯುತ್ತಿದೆ.

ನವ-ಉದಾರವಾದಿ ವ್ಯವಸ್ಥೆಯಲ್ಲಿ ಸರ್ಕಾರ ಅನ್ನುವುದರ ಸ್ಥಾನವೇನು? ಈ ವ್ಯವಸ್ಥೆಯ ಪ್ರತಿಪಾದಕರು ಹೇಳುವಂತೆ ಇಲ್ಲಿ ಸರ್ಕಾರ ಅನ್ನುವುದು ಆರ್ಥಿಕ ಕ್ಷೇತ್ರದಿಂದ ಹಿಂದೆ ಸರಿದಿದೆಯೇ? ಅದರ ಪಾತ್ರ ಕನಿಷ್ಟಮಟ್ಟಕ್ಕೆ ಇಳಿದಿದೆಯೇ? ಸಾರ್ವಜನಿಕ ವಲಯಕ್ಕೆ ಪ್ರತಿಯಾಗಿ ಮಾರುಕಟ್ಟೆ ವ್ಯವಸ್ಥೆಯು ಆರ್ಥಿಕತೆಯನ್ನು ಪೂರ್ಣವಾಗಿ ಆವರಿಸಿಕೊಂಡಿದೆಯೇ? ಮುಂತಾದ ಪ್ರಶ್ನೆಗಳು ಇಂದು ನಮ್ಮ ಮುಂದಿವೆ. ಇಂದು ಸರ್ಕಾರ ಅನ್ನುವುದು ಇದ್ದರೆ ಅದು ಯಾರ ಹಿತಾಸಕ್ತಿಗಳನ್ನು ಕಾಪಿಡುತ್ತಿದೆ? ನಮ್ಮ ಅನುಭವವೆಂದರೆ ಸರ್ಕಾರ ಅನ್ನುವುದು ಕನಿಷ್ಟ ಮಟ್ಟಕ್ಕೆ ಇಳಿದಿಲ್ಲ. ಅದು ಆರ್ಥಿಕತೆಯಿಂದ ಹಿಂದೆ ಸರಿಯುತ್ತಿಲ್ಲ. ಆದರೆ ಅದರ ಕಾರ್ಯಸೂಚಿ ಬದಲಾಗಿದೆ. ಅದು ಜನರ, ಅದರಲ್ಲೂ ಬಡವರ, ಗ್ರಾಮೀಣವಾಸಿಗಳ, ದುಡಿಮೆಗಾರರ ಮತ್ತು ಮಹಿಳೆಯರ ಬದುಕಿಗೆ ಭದ್ರತೆಯನ್ನು ನೀಡುವುದಕ್ಕೆ ಪ್ರತಿಯಾಗಿ ಮಾರುಕಟ್ಟೆಯ ರಕ್ಷಣೆ–ಪೋಷಣೆಗೆ ನಿಂತಿದೆ. ಉದ್ದಿಮೆಗಾರರ ಹಿತಾಸಕ್ತಿಯು ಅದರ ಪ್ರಧಾನ ಗುರಿಯಾಗಿರುವಂತೆ ಕಾಣುತ್ತದೆ. ಅದರ ಎಲ್ಲ ಕ್ರಮಗಳು ಇಂದು ಉದ್ದಿಮೆಗಳಿಗೆ ತಮ್ಮ ಕಾರ್ಯ ಚಟುವಟಿಕೆಗಳನ್ನು ನಡೆಸಲು ಯಾವುದೇ ಬಗೆಯ ಅಡ್ಡಿ ಉಂಟಾಗದಂತೆ ನೋಡಿಕೊಳ್ಳುವ ಕಡೆಗೆ ಕೇಂದ್ರೀಕೃತಗೊಂಡಿವೆ. ಇದು ಎಲ್ಲಿಯವರೆಗೆ ಹೋಗಿದೆಯೆಂದರೆ ಮಾನವ ಹಕ್ಕುಗಳು ಅನ್ನುವುದು ಕೂಡ ಜನರಿಗೆ ಸಂಬಂಧಿಸಿದ ಸಂಗತಿಗಳಾಗದೆ ಉದ್ದಿಮೆಗಳ ಮಾನವ ಹಕ್ಕುಗಳ ಬಗ್ಗೆ ಸರ್ಕಾರ ಕ್ರಿಯಾಶೀಲವಾಗುವಂತಾಗಿದೆ. ಉದ್ದಿಮೆಗಾರರ, ವ್ಯಾಪಾರಿಗಳ, ಲೇವಾದೇವಿಗಾರರ ಹಕ್ಕುಗಳು ಆದ್ಯತೆಯ ಸಂಗತಿಗಳಾಗಿವೆ.

ಖಾಸಗೀಕರಣ ಅನ್ನುವುದು ಕೇವಲ ಉದ್ದಮೆಗಳಿಗೆ, ನಗರಗಳಿಗೆ ಮೀಸಲು ಎಂದು ಜನರು ಭಾವಿಸಿದ್ದರು. ಆದರೆ ಇಂದು ಅದು ನಮ್ಮ ಮನೆಯ ಬಾಗಿಲಿಗೆ ಬಂದು ನಿಂತಿದೆ. ಉದಾಹರಣೆಗೆ ನಮ್ಮ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಖಾಸಗಿ ಶಾಲೆಗಳ ಪ್ರಮಾಣ 1990ರ ದಶಕದಲ್ಲಿ ಕನಿಷ್ಟ ಮಟ್ಟದಲ್ಲಿತ್ತು. ಆದರೆ ಉದಾರವಾದಿ ಪರ್ವದಲ್ಲಿ ಒಟ್ಟು ಶಾಲೆಗಳಲ್ಲಿ ಖಾಸಗಿ ಶಾಲೆಗಳ ಪ್ರಮಾಣ 2005–07ರಲ್ಲಿ ಶೇ24.33ಕ್ಕೂ ಮತ್ತು 2015–16ರಲ್ಲಿ ಅದರ ಪ್ರಮಾಣ ಶೇ.34ಕ್ಕೆ ಏರಿದೆ. ಇತ್ತೀಚೆಗೆ ಬಾಗಲಕೋಟೆ ಜಿಲ್ಲಾ ಪಂಚಾಯತಿಯಲ್ಲಿ ಶಿಕ್ಷಣ ಇಲಾಖೆಯು ನೂರಾರು–ಅಕ್ಷರಶಃ ನೂರಾರು ಖಾಸಗಿ ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಅನುಮತಿ ಕೊಟ್ಟಿರುವುದರ ಬಗ್ಗೆ ಅದರ ಪರ–ವಿರೋಧಿಗಳ ನಡುವೆ ತೀವ್ರ ಜಟಾಪಟಿ ನಡೆದು ಹೋಯಿತು. ಇಂದು ಶಾಲೆಗಳನ್ನು ನಡೆಸುವುದು ಭಾಷಾ ಅಭಿಮಾನವಾಗಲಿ, ಸಮಾಜ ಸೇವೆಯಾಗಲಿ ಅಥವಾ

> **ನವ-ಉದಾರವಾದಿ ವ್ಯವಸ್ಥೆಯಲ್ಲಿ ಸರ್ಕಾರ ಅನ್ನುವುದರ ಸ್ಥಾನವೇನು? ಈ ವ್ಯವಸ್ಥೆಯ ಪ್ರತಿಪಾದಕರು ಹೇಳುವಂತೆ ಇಲ್ಲಿ ಸರ್ಕಾರ ಅನ್ನುವುದು ಆರ್ಥಿಕ ಕ್ಷೇತ್ರದಿಂದ ಹಿಂದೆ ಸರಿದಿದೆಯೇ? ಅದರ ಪಾತ್ರ ಕನಿಷ್ಟಮಟ್ಟಕ್ಕೆ ಇಳಿದಿದೆಯೇ? ಸಾರ್ವಜನಿಕ ವಲಯಕ್ಕೆ ಪ್ರತಿಯಾಗಿ ಮಾರುಕಟ್ಟೆ ವ್ಯವಸ್ಥೆಯು ಆರ್ಥಿಕತೆಯನ್ನು ಪೂರ್ಣವಾಗಿ ಆವರಿಸಿಕೊಂಡಿದೆಯೇ? ಸರ್ಕಾರ ಅನ್ನುವುದು ಕನಿಷ್ಟ ಮಟ್ಟಕ್ಕೆ ಇಳಿದಿಲ್ಲ. ಅದು ಆರ್ಥಿಕತೆಯಿಂದ ಹಿಂದೆ ಸರಿಯುತ್ತಿಲ್ಲ. ಆದರೆ ಅದರ ಕಾರ್ಯಸೂಚಿ ಬದಲಾಗಿದೆ. ಉದ್ದಿಮೆಗಾರರ ಹಿತಾಸಕ್ತಿಯು ಅದರ ಪ್ರಧಾನ ಗುರಿಯಾಗಿರುವಂತೆ ಕಾಣುತ್ತದೆ. ಅದರ ಎಲ್ಲ ಕ್ರಮಗಳು ಇಂದು ಉದ್ದಿಮೆಗಳಿಗೆ ತಮ್ಮ ಕಾರ್ಯ ಚಟುವಟಿಕೆಗಳನ್ನು ನಡೆಸಲು ಯಾವುದೇ ಬಗೆಯ ಅಡ್ಡಿ ಉಂಟಾಗದಂತೆ ನೋಡಿಕೊಳ್ಳುವ ಕಡೆಗೆ ಕೇಂದ್ರೀಕೃತಗೊಂಡಿವೆ.**

ಬಡವರ ಮಕ್ಕಳ ಉದ್ಧಾರದ ಪ್ರಶ್ನೆಯಾಗಿ ಉಳಿದಿಲ್ಲ. ಖಾಸಗೀಕರಣ ಏನೆಲ್ಲ ಮಾಡಬಹುದು ಎಂಬುದಕ್ಕೆ ಇದು ಒಂದು ಸೂಚಿ. ಎಲ್ಲ ಕ್ಷೇತ್ರಗಳಲ್ಲಿಯೂ ವಾಣಿಜ್ಯ ಸಂಗತಿಗಳು ಪ್ರಧಾನವಾಗಿ ಜನಕಲ್ಯಾಣ ಅನ್ನುವುದು ಆನುಷಂಗಿಕವಾಗಿದೆ.

ಕೃಷಿಯನ್ನು ಒಳಗೊಳ್ಳದ ಹೊಸ ಆರ್ಥಿಕ ನೀತಿ

ನವ–ವಸಾಹತುಶಾಹಿ ಪರ್ವದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ವಲಯವೆಂದರೆ ಕೃಷಿ. ಈ ಪರ್ವದಲ್ಲಿ ಎಲ್ಲ ವಲಯಗಳು 'ಸುಧಾರಣಾ' (ರಿಫಾರ್ಮ್ಸ್)ಪ್ರಕ್ರಿಯೆಗೆ ಒಳಗಾಗಿವೆ. ಸಾರ್ವಜನಿಕ ವಲಯ, ಕಾರ್ಮಿಕ ಕ್ಷೇತ್ರ, ಬ್ಯಾಂಕಿಂಗ್ ವಲಯ, ವಿದೇಶಿ ಬಂಡವಾಳ ಮುಂತಾದ ಕ್ಷೇತ್ರಗಳು ಸುಧಾರಣೆಗೆ ಒಳಗಾದವು. ಸಾರ್ವಜನಿಕ ಉದ್ದಿಮೆ ಕ್ಷೇತ್ರದಲ್ಲಿ ಬಂಡವಾಳದ ಹಿಂತೆಗೆತ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ವಾಣಿಜ್ಯ ನಿಯಮಗಳ ಪರಿಪಾಲನೆ, ಕಾರ್ಮಿಕ ಕ್ಷೇತ್ರದಲ್ಲಿ ನಿಯಮಗಳ ಸಡಿಲಿಕೆ, ವಿದೇಶಿ ಬಂಡವಾಳದ ಪ್ರವೇಶಕ್ಕೆ ಎಲ್ಲ ಅನುಕೂಲಗಳು ಮುಂತಾದವು ನಮ್ಮ ಆರ್ಥಿಕತೆಯ ಸ್ವರೂಪವನ್ನು ಬದಲಾಯಿಸಿದವು. ಇಲ್ಲಿ ಜಾಗತೀಕರಣದ ಪರಿಭಾಷೆಯಾದ ಪೈಪೋಟಿ, ದಕ್ಷತೆ, ಉತ್ಕೃಷ್ಟತೆ, ಲಾಭ, ಬಡ್ಡಿ ಮುಂತಾದವು ಚಾಲ್ತಿಗೆ ಬಂದಿವೆ. ಆದರೆ ಈ ಬಗೆಯ ಸುಧಾರಣೆಗಳಾಗಲಿ, ಜಾಗತೀಕರಣ ಪರಿಭಾಷೆಯಾಗಲಿ ಕೃಷಿಯನ್ನು ಪ್ರವೇಶಿಸಲಿಲ್ಲ. ಇಲ್ಲಿಯೂ ಸುಧಾರಣೆಯ ಮಾತುಗಳು ಕೇಳಿಬರುತ್ತಿವೆ. ಆದರೆ ಅವು ಯಾವುವು ನಿಜವಾದ ರೀತಿಯಲ್ಲಿ ಜಾರಿಗೆ ಬರಲಿಲ್ಲ. ಕೃಷಿಕರ ಸಾವಿರಾರು ಕೋಟಿ ರೂಪಾಯಿ ಸಾಲದ ಬಗ್ಗೆ ಬ್ಯಾಂಕುಗಳು, ಆರ್.ಬಿ.ಐ, ಹಣಕಾಸು ಸಚಿವಾಲಯ, ವಿಶ್ವಬ್ಯಾಂಕು, ಐ.ಎಮ್.ಎಫ್ ಗಳು ತೀವ್ರ ತಲೆಕೆಡಿಸಿಕೊಳ್ಳುತ್ತಿವೆ. ಕೃಷಿಯಿಂದ ಬರಬೇಕಾದ ಸಾಲದ ಮೊತ್ತ ಹಿಮಾಲಯ ಸದೃಶವಾಗಿದೆ ಎಂದು ಹೇಳಲಾಗುತ್ತಿದೆ. ಅದನ್ನು ಮನ್ನಾ ಮಾಡುವ ಬಗ್ಗೆ ಸರ್ಕಾರ ಸಿದ್ದವಿಲ್ಲ. ಆದರೆ ಬೃಹತ್ ಉದ್ದಿಮೆ ಕುಟುಂಬಗಳು, ವಾಣಿಜ್ಯ ಸಮಸ್ಥೆಗಳು, ಖಾಸಗಿ ಹಣಕಾಸು ಘಟಕಗಳು ಬ್ಯಾಂಕುಗಳಿಗೆ ಕಟ್ಟ ಬೇಕಾದ ಲಕ್ಷಾಂತರ ಕೋಟಿ ರೂಪಾಯಿ ಸಾಲದ ಬಗ್ಗೆ ಮಾತ್ರ ಮಾತನಾಡುತ್ತಿಲ್ಲ.

ಕೃಷಿಗೆ ಅಗತ್ಯವಾದ ಸರ್ಕಾರದ ಬೆಂಬಲವು ಕನಿಷ್ಟವಾಗುತ್ತಾ ನಡೆದಿದೆ. ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆ ಕುಸಿಯುತ್ತಾ ಬಂದಿದೆ. ಕೃಷಿಕರ ಮಕ್ಕಳಿಗೆ ಸಾರ್ವಜನಿಕ ವಲಯದಲ್ಲಿ, ಸರ್ಕಾರಿ ಕ್ಷೇತ್ರದಲ್ಲಿ ಉದ್ಯೋಗದ ಅವಕಾಶಗಳು ಸಂಕುಚಿತಗೊಳ್ಳುತ್ತಿವೆ. ಸರ್ಕಾರಿ ಬ್ಯಾಂಕುಗಳನ್ನು ಅವಲಂಬಿಸುವುದಕ್ಕೆ ಪ್ರತಿಯಾಗಿ ಕೃಷಿಕರು ಲೇವಾದೇವಿಗಾರರನ್ನು ಅವಲಂಬಿಸಬೇಕಾಗಿದೆ. ಬ್ಯಾಂಕುಗಳು ತಾವು ನೀಡಿದ ಸಾಲ ವಸೂಲಾತಿಗೆ ಗುಂಡಾ ಪಡೆ ನೇಮಿಸಿಕೊಳ್ಳ ತೊಡಗಿವೆ. ಪರಿಣಾಮ ಹತಾಶರಾದ ಕೃಷಿಕರಿಗೆ ಆತ್ಮಹತ್ಯೆಗೆ ಮೊರೆ ಹೋಗುವುದು ಅನಿವಾರ್ಯವಾಗಿದೆ.

ಕಳೆದ 30 ವರ್ಷಗಳ ಅವಧಿಯಲ್ಲಿ ದೈನಂದಿನ ತಲಾ ಆಹಾರ ಪದಾರ್ಥಗಳ ಲಭ್ಯತೆಯು ಕುಸಿಯುತ್ತಾ ನಡೆದಿರುವುದೇ ಕೃಷಿಯ ದಿವ್ಯ ನಿರ್ಲಕ್ಷ್ಯಕ್ಕೆ ಸಾಕ್ಷಿ. ಕೇಂದ್ರ ಸರ್ಕಾರದ 2015–16ನೆಯ ಸಾಲಿನ ಆರ್ಥಿಕ ಸಮೀಕ್ಷೆಯಲ್ಲಿ ದಾಖಲಿಸಿರುವಂತೆ 1991 ರಲ್ಲಿ ತಲಾ ದಿನಂಪ್ರತಿ ಆಹಾರ ಲಭ್ಯತೆ 510 ಗ್ರಾಂಗಳಷ್ಟಿದ್ದುದು 2011ರಲ್ಲಿ ಅದು 453 ಗ್ರಾಂಗಳಿಗೆ ಇಳಿದಿದೆ. ಅದೇ ರೀತಿಯಲ್ಲಿ ಪ್ರಭಾತ್ ಪಟ್ನಾಯಿಕ್ ಗುರುತಿಸಿರುವಂತೆ ದಿನಂಪ್ರತಿ ತಲಾ 2200 ಕ್ಯಾಲರಿಗಳಿಗಿಂತ ಕಡಿಮೆ ಆಹಾರ ಸೇವಿಸುವವರ ಪ್ರಮಾಣ(ಅಂದರೆ ಬಡತನ ರೇಖೆಯ ಕೆಳಗೆ ಜೀವಿಸುವ ಕುಟುಂಬಗಳ ಪ್ರಮಾಣ) 1993–94ರಲ್ಲಿ ಶೇ.58.5ರಷ್ಟಿದ್ದುದು 2011–12ರಲ್ಲಿ ಅದು ಶೇ.68ಕ್ಕೇರಿದೆ. ಕೃಷಿ ವಲಯದಲ್ಲಿ ಸಾರ್ವಜನಿಕ ಬಂಡವಾಳ ಹೂಡಿಕೆ ಪ್ರಮಾಣ ಕನಿಷ್ಟತಮವಾಗಿದೆ. ಇಂದು ಸರ್ಕಾರ ಸ್ಟಾರ್ಟ್ ಅಪ್, ಸ್ಟಾಂಡ್ ಅಪ್, ಡಿಜಿಟಲ್ ಇಂಡಿಯಾ, ಮೇಕ್ ಇನ್ ಇಂಡಿಯಾ, ಸ್ಮಾರ್ಟ್ ಸಿಟಿ, ಸ್ಕಿಲ್ ಇಂಡಿಯಾ ಬಗ್ಗೆ ಮಾತನಾಡುತ್ತಿದೆಯೇ ವಿನಾ ಕೃಷಿಯ ಬಗ್ಗೆ ಆಸಕ್ತಿ ಅದಕ್ಕೆ ಇದ್ದಂತಿಲ್ಲ. ಸಮಾಜದಲ್ಲಿ ಇಂದು ಸಮುದಾಯಗಳು ಉದ್ಯೋಗದಲ್ಲಿ ಮೀಸಲಾತಿಯನ್ನು ಒತ್ತಾಯಿಸುತ್ತಿದ್ದರೆ ಅದರ ಮೂಲದಲ್ಲಿ ಕೃಷಿಯ ದುಸ್ಥಿತಿಯ ಪಾತ್ರವಿದೆ.

ಕೃಷಿಯು ನಿರ್ಲಕ್ಷ್ಯಕ್ಕೆ ಒಳಗಾಗಿರುವುದಕ್ಕೆ ಮತ್ತೊಂದು ನಿದರ್ಶನವೆಂದರೆ ಕೃಷಿಯಲ್ಲಿನ ತಲಾ ರಾಜ್ಯ ಆಂತರಿಕ ಉತ್ಪನ್ನ(ಎಸ್‌ಡಿಪಿ). ನಮ್ಮ ರಾಜ್ಯದಲ್ಲಿನ 2012–13ನೆಯ ಸಾಲಿನ ಕೃಷಿ ವಲಯದಲ್ಲಿನ ತಲಾ ಎಸ್.ಡಿ.ಪಿ ಯು ರೂ.14.2 ಸಾವಿರದಷ್ಟಿದ್ದರೆ ಉದ್ದಿಮೆಯ ವಲಯದಲ್ಲಿನ ತಲಾ ಎಸ್.ಡಿ.ಪಿ ಯು ರೂ 22.8 ಸಾವಿರದಷ್ಟಿದೆ. ಆದರೆ ಮೂರನೆಯ ಸೇವಾ ವಲಯದಲ್ಲಿನ ತಲಾ ಎಸ್.ಡಿ.ಪಿ ರೂ 49.4 ಸಾವಿರ. ರಾಜ್ಯದ ಒಟ್ಟು ಎಸ್ ಡಿ ಪಿ ಯಲ್ಲಿ ಕೃಷಿಯ ಪಾಲು ಶೇ 16.43. ಆದರೆ ಉದ್ದಿಮೆ ಮತ್ತು ಸೇವಾ ವಲಯಗಳ ಪಾಲು ಕ್ರಮವಾಗಿ ಶೇ 26.38 ಮತ್ತು ಶೇ. 57.19. ಕೃಷಿ ವಲಯವನ್ನು ಅವಲಂಬಿಸಿರುವ ದುಡಿಮೆಗಾರರ ಪ್ರಮಾಣ ಅಧಿಕ(ಶೇ49); ಅದರೆ ಅದು ರಾಜ್ಯದ ವರಮಾನದಲ್ಲಿ ಪಡೆದಿರುವ ಪ್ರಮಾಣ ಕಡಿಮೆ(ಶೇ16.43). ಉದ್ದಿಮೆ ಮತ್ತು ಸೇವಾ ವಲಯಗಳಲ್ಲಿ ದುಡಿಮೆಗಾರರ ಪ್ರಮಾಣ ಕಡಿಮೆ(ಶೇ51); ಆದರೆ ಅವುಗಳು ಎಸ್.ಡಿ.ಪಿ ಯಲ್ಲಿ ಪಡೆದಿರುವ ಪಾಲು ಅಧಿಕ(ಶೇ. 83.5). ಇದು ಅಸಮಾನತೆಯ ಪರಮೋಚ್ಛ ಸೂಚಿಯಾಗಿದೆ. ಮೇಲಿನ ಎಲ್ಲ ಸೂಚಿಗಳು ಮತ್ತು ನಿದರ್ಶನಗಳ ಆಧಾರದ ಮೇಲೆ 1991ರಿಂದ ನಮ್ಮ ಸರ್ಕಾರಗಳು ಕೃಷಿಯನ್ನು ಸಂಪೂರ್ಣವಾಗಿ ಕಡೆಗಣಿಸುತ್ತಾ ಬರಲಾಗಿದೆ ಎಂಬುದನ್ನು ದೃಢವಾಗಿ ಹೇಳಬಹುದು. ಈ ಹಿನ್ನೆಲೆಯಲ್ಲಿ ಕೃಷಿಕರ ಆತ್ಮಹತ್ಯೆಯನ್ನು ಅರ್ಥ ಮಾಡಿಕೊಳ್ಳಬೇಕು(ವಿವರಗಳಿಗೆ ನೋಡಿ: ಕರ್ನಾಟಕ ಸರ್ಕಾರ: 2013, ಕರ್ನಾಟಕ ರಾಜ್ಯ ಮತ್ತು ಜಿಲ್ಲಾ ಆಂತರಿಕ ಉತ್ಪನ್ನ 2014–15, ಪು: 159)

ಉದ್ದಿಮೆಗಾರರ ಮನ್ನಾ ಮಾಡಿದ ಸಾಲದ ಮೊತ್ತ

ನಮ್ಮ ದೇಶದಲ್ಲಿನ ಸಾರ್ವಜನಿಕ ವಲಯದ 29 ಬ್ಯಾಂಕುಗಳು 2004 ರಿಂದ 2015ರ ಅವಧಿಯಲ್ಲಿ ಮನ್ನಾ ಮಾಡಿದ ಸಾಲದ ಮೊತ್ತ ರೂ 2.11 ಲಕ್ಷ ಕೋಟಿ. ಇದರಲ್ಲಿ ರೂ1.14 ಲಕ್ಷ ಕೋಟಿಯನ್ನು 2013–15ರ ಸಾಲುಗಳಲ್ಲಿ ಮನ್ನಾ ಮಾಡಲಾಗಿದೆ. ಇದಕ್ಕೆ ಪ್ರತಿಯಾಗಿ ಕೃಷಿಯಲ್ಲಿ ಸಾರ್ವಜನಿಕ ಬಂಡವಾಳ ವಿನಿಯೋಜನೆ ಪ್ರಮಾಣ 2004–05ರಲ್ಲಿ ಶೇ21.3ರಷ್ಟಿದ್ದುದು 2011–12ರಲ್ಲಿ ಅದು ಶೇ15.1ಕ್ಕಿಳಿದಿದೆ. ಋಣದಲ್ಲಿರುವ ಕೃಷಿ ಕುಟುಂಬಗಳ ಪ್ರಮಾಣ 2003ರಲ್ಲಿ ಶೇ. 48.6ರಷ್ಟಿದ್ದುದು 2013ರಲ್ಲಿ ಅದು ಶೇ. 51.9ಕ್ಕೇರಿದೆ. ನಮ್ಮ ಸಮಾಜ ಮತ್ತು ಸರ್ಕಾರಗಳು ಕೃಷಿಯನ್ನು ನಿರಂತರವಾಗಿ ಕಡೆಗಣಿಸುತ್ತಾ ಬಂದಿವೆ ಮತ್ತು ಉದ್ದಿಮೆ ಮತ್ತು ಸೇವಾ ವಲಯವನ್ನು ಅತಿಯಾಗಿ ಪೋಷಿಸುತ್ತಾ ಬರಲಾಗಿದೆ.

ಆರ್.ಬಿ.ಐ.ನ ಗವರ್ನರ್ ರಘುರಾಮ್ ರಾಜನ್ ಮತ್ತು ನೀತಿ ಆಯೋಗದ ಉಪಾಧ್ಯಕ್ಷ ಅರವಿಂದ ಪಾಣಿಗಾರಿಯಾ ಅವರು ನಮ್ಮ ಆರ್ಥಿಕ ವ್ಯವಸ್ಥೆಯ ಸಂಕಷ್ಟದ ಪರಿಹಾರಕ್ಕೆ ಕೃಷಿ ವಲಯದಿಂದ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಕೃಷಿಕರು ಮತ್ತು ಭೂರಹಿತ ದುಡಿಮೆಗಾರರು ನಗರಗಳಿಗೆ, ಉದ್ದಿಮೆ ಪ್ರದೇಶಗಳಿಗೆ ವಲಸೆ ಬರಬೇಕೆಂದು ಸಲಹೆ ನೀಡುತ್ತಿದ್ದಾರೆ. ಆದರೆ ಹೀಗೆ ಬಂದ ದುಡಿಮೆಗಾರರಿಗೆ ನಗರ ಪ್ರದೇಶಗಳಲ್ಲಿ ಏನು ಉದ್ಯೋಗ ನೀಡಲಾಗುತ್ತದೆ, ಏನು ವಸತಿ ಒದಗಿಸಲಾಗುತ್ತದೆ, ಭದ್ರತೆಯನ್ನು ಹೇಗೆ ನೀಡಲಾಗುತ್ತದೆ ಎಂಬುದರ ಬಗ್ಗೆ ಅವರು ಯೋಚಿಸುತ್ತಿಲ್ಲ. ಸರ್ಕಾರ, ಸಮಾಜ, ತಜ್ಞರು, ಅಂತಾರಾಷ್ಟ್ರೀಯ ಸಂಸ್ಥೆಗಳು, ರೈತರು ಒಕ್ಕಲುತನದ ಬಗ್ಗೆ ಭರವಸೆ ಕಳೆದುಕೊಂಡಿದ್ದಾರೆ. ಹೀಗಾದಾಗ ಕೃಷಿಯ ಸ್ಥಿತಿಗತಿಯು ಕುಸಿಯದೆ ಮತ್ತೇನಾಗುತ್ತದೆ?

ನವವಸಾಹತುಶಾಹಿ ನೀತಿಯಿಂದಾಗಿ ಬಡವರು, ಸಮಾಜದಲ್ಲಿ ಅಂಚಿನಲ್ಲಿರುವವರು, ಕೃಷಿಕರು ತಬ್ಬಲಿಗಳಾಗುತ್ತಿದ್ದಾರೆ. ಸರ್ಕಾರವು ಸಾರ್ವಜನಿಕರನ್ನು ಕಾಪಿಡುವುದಕ್ಕೆ ಪ್ರತಿಯಾಗಿ ಉದ್ದಿಮೆಗಾರರಿಗೆ ಭದ್ರತೆಯನ್ನು ಒದಗಿಸುವುದರ ಬಗ್ಗೆ, ಪ್ರಾಕೃತಿಕ ಸಂಪನ್ಮೂಲಗಳನ್ನು ಸೋವಿ ಬೆಲೆಯಲ್ಲಿ ಅನಿರ್ಬಂದಿತವಾಗಿ ಒದಗಿಸುವುದರ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಿವೆ. ಇಲ್ಲಿ ಮಾನವ ಅಭಿವೃದ್ಧಿಗಾಗಲಿ, ಸುಸ್ಥಿರಗತಿ ಅಭಿವೃದ್ಧಿಗಾಗಲಿ ಅಥವಾ ಹಕ್ಕು–ಆದರಿತ ಅಭಿವೃದ್ಧಿಗಾಗಲಿ ಅವಕಾಶ ಇಲ್ಲದಂತಾಗಿದೆ. ಸರ್ಕಾರಕ್ಕೆ ಮಾರುಕಟ್ಟೆಯ ರಕ್ಷಣೆಯು ಪ್ರಧಾನ ಕರ್ತವ್ಯವಾಗಿರುವಂತೆ ಕಾಣುತ್ತಿದೆ. ಇಂದು ಆಳುವ ವರ್ಗ ಸಮಾನತೆಯ ಬಗ್ಗೆ, ಬಡತನ–ಹಸಿವು ನಿವಾರಣೆಯ ಬಗ್ಗೆ ಮಾತನಾಡಲು ಸಿದ್ಧವಿಲ್ಲ. ಇದೀಗ ಸೆಪ್ಟೆಂಬರ್ 02 ರಂದು ಕಾರ್ಮಿಕ ಸಂಘಟನೆಗಳು ಕರೆದಿರುವ ದೇಶ ವ್ಯಾಪಿ ಮುಷ್ಕರದ ಸಂದರ್ಭದಲ್ಲಿ ಕೇಂದ್ರ ಹಣಕಾಸು ಸಚಿವರು ಕೇಂದ್ರ ವಲಯದ 'ಸಿ' ವರ್ಗದ ಅಕುಶಲ ಕೃಷಿಯೇತರ ದುಡಿಮೆಗಾರರ ಕನಿಷ್ಟ ಕೂಲಿಯನ್ನು ರೂ. 246 ರಿಂದ ರೂ.350 ಏರಿಸುವ ಮಾತನಾಡಿದ್ದಾರೆ. ಒಂದು ದುಡಿಮೆಗಾರ ಕುಟುಂಬವು ರೂ. 350ರಲ್ಲಿ ಬೆಲೆಯೇರಿಕೆ ಸಂದರ್ಭದಲ್ಲಿ ಯಾವ ಬಗೆಯ ಬದುಕನ್ನು ಸಾಗಿಸಬಹುದು ಎಂಬುದರ ಬಗ್ಗೆ ಸರ್ಕಾರವು ಯೋಚಿಸಲು ಸಿದ್ಧವಿಲ್ಲ. ಕನಿಷ್ಟ ಕೂಲಿಯ ಏರಿಕೆಯ ಸಲಹೆಯು ದುಡಿಯುವ ವರ್ಗಕ್ಕೆ ಮಾಡಿದ ಅವಮಾನವಾಗಿದೆ. ಕಾರ್ಮಿಕರು ಕೇಳುತ್ತಿರುವುದು ತಮ್ಮ ಹಕ್ಕೇ ವಿನಾ ಭಿಕ್ಷೆಯಲ್ಲ.

ಇಂದು ನಮಗೆ ನವವಸಾಹತುಶಾಹಿ ಅಭಿವೃದ್ಧಿ ನೀತಿಯ ವಿನಾಶಕರ ಮುಖದ ಅನಾವರಣವಾಗುತ್ತಿದೆ. ಅದನ್ನು ಇಂದು ಬದಲಾಯಿಸಲು ಸಾಧ್ಯವಿಲ್ಲ ಎಂದು ಹೇಳಲಾಗುತ್ತಿದೆ. ಆದರೆ ಅದರ ದುಷ್ಪರಿಣಾಮಗಳು ಬಡವರ ಮೇಲೆ, ಮಹಿಳೆಯರ ಮೇಲೆ ಬೀಳದಂತೆ ಏನು ಮಾಡಬಹುದು ಎಂಬುದರ ಬಗ್ಗೆ ಯೋಚಿಸಬಹುದು. ನವವಸಾಹತುಶಾಹಿ ವ್ಯವಸ್ಥೆಯಲ್ಲಿ ಸರ್ಕಾರ ಅನ್ನುವುದು ಉಳ್ಳವರ ಪರವಾಗಿದೆ, ಅದು ಮಾರುಕಟ್ಟೆ ಪರವಾಗಿದೆ, ಅದು ಅನಿವಾಸಿ ಭಾರತೀಯರ ಪರವಾಗಿದೆ, ವ್ಯಾಪಾರಿಗಳು, ವಾಣಿಜ್ಯೋದ್ಯಮಿಗಳ ಪರವಾಗಿದೆ. ಇದನ್ನು ನಾವು ಪ್ರಶ್ನಿಸಬೇಕಾಗಿದೆ, ಪ್ರತಿಭಟಿಸಬೇಕಾಗಿದೆ. ●

ಸಾರ್ವಭೌಮತೆಗೆ ಮತ್ತು ಸಾಮರಿಕ ಸ್ವಾಯತ್ತತೆಗೆ ಧಕ್ಕೆ ತಂದಿರುವ ಅಮೆರಿಕಾ–ಭಾರತ ಒಪ್ಪಂದ

ಮೋದಿ ಸರಕಾರ ಸಂಯುಕ್ತ ಸಂಸ್ಥಾನದೊಂದಿಗೆ ಲಾಜಿಸ್ಟಿಕ್ಸ್(ಸಾಮರಿಕ ಸಾಗಣೆ) ಒಪ್ಪಂದಕ್ಕೆ ಸಹಿ ಹಾಕಿ ಇಷ್ಟು ವರ್ಷ ಯಾವುದೇ ಮಿಲಿಟರಿ ಕೂಟಗಳ ಭಾಗವಾಗಲು ನಿರಾಕರಿಸಿ ಭಾರತ ರಕ್ಷಿಸಿಕೊಂಡು ಬಂದಿದ್ದ ಭಾರತೀಯ ಸಾರ್ವಭೌಮತೆಗೆ ಧಕ್ಕೆ ತಂದಿದೆ. ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳುವಲ್ಲಿ ಭದ್ರ ಬುನಾದಿಯಾದ ನಮ್ಮ ಸಾಮರಿಕ ಸ್ವಾಯತ್ತತೆಯನ್ನೂ ಬಿಟ್ಟುಕೊಡಲಾಗಿದೆ. ಇದರೊಂದಿಗೆ ಮೋದಿ ಒಂದು ಅಲಿಪ್ತ ಶೃಂಗ ಸಭೆಯಲ್ಲಿ ಭಾಗವಹಿಸದೇ ಇರುವ ಮೊದಲ ಭಾರತೀಯ ಪ್ರಧಾನ ಮಂತ್ರಿಯಾಗುತ್ತಿದ್ದಾರೆ. ಇದರ ಹಿಂದಿರುವ ಸಂದೇಶ ಸ್ಪಷ್ಟ. ಭಾರತ ಈಗ ಅಲಿಪ್ತವಲ್ಲ, ಅದೀಗ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಒಂದು ಅಡಿಯಾಳು ಮಿತ್ರ ನಾಗಿದೆ.



ಪ್ರಕಾಶಕಾರಟ್

ರಕ್ಷಣಾ ಮಂತ್ರಿ ಮನೋಹರ ಪರಿಕ್ಕರ್ ಅವರ ಭೇಟಿಯ ವೇಳೆಯಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದೊಂದಿಗೆ ಸಹಿ ಹಾಕಿದ ಲಾಜಿಸ್ಟಿಕ್ಸ್(ಸಾಮರಿಕ ಸಾಗಣೆ–ಅನು.) ಒಪ್ಪಂದ ಭಾರತಕ್ಕೆ ಈ ರೀತಿಯ ಮೊದಲ ಒಪ್ಪಂದ. ಈ ಒಪ್ಪಂದದಿಂದ ಒಂದು ವಿದೇಶಿ ಮಿಲಿಟರಿ ಶಕ್ತಿ, ಅದರಲ್ಲೂ ಅತ್ಯಂತ ಬಲಿಷ್ಟ ಸಾಮ್ರಾಜ್ಯಶಾಹಿ ದೇಶದ ಸಶಸ್ತ್ರ ಪಡೆಗೆ ಈಗ ಭಾರತದ ನೌಕಾ ಮತ್ತು ವಾಯು ನೆಲೆಗಳಿಗೆ ಪ್ರವೇಶ ಸಾಧ್ಯವಾಗಿದೆ.

'ಸಾಮರಿಕ ಸಾಗಣೆ ಬೆಂಬಲ ಒಪ್ಪಂದ' (ಎಲ್ಎಸ್ಎ) ಎಂಬುದು ಅಮೆರಿಕಾ ಮಿಲಿಟರಿ ಮೈತ್ರಿ ಅಥವ ನಿಕಟ ಮಿಲಿಟರಿ ಸಹಕಾರ ಸ್ಥಾಪಿಸಿಕೊಂಡ ದೇಶಗಳೊಂದಿಗೆ ಮಾಡಿಕೊಳ್ಳುವ ಒಂದು ಸಂಧಿ. ಇದು 'ಅಕ್ವಿಸಿಶನ್ ಅಂಡ್ ಕ್ರಾಸ್ ಸರ್ವಿಸ್ ಅಗ್ರಿಮೆಂಟ್'(ಎಸಿಎಸ್ಎ–ಸೇವೆಯೊಳಗಣ ಒಪ್ಪಂದ) ದ ಮಾದರಿಯಲ್ಲಿ ರೂಪಿಸಿರುವ ಸಂಧಿ. ಈ ಎಸಿಎಸ್ಎ ಎಂಬುದೇ ನಾಟೋ ಮ್ಯುಚುವಲ್ ಸಪೋರ್ಟ್ ಆಕ್ಟ್(ನಾಟೋ ಪರಸ್ಪರ ಬೆಂಬಲ ಕಾಯ್ದೆ) ಯ ನಾಟೋಗೆ ಸೇರಿರಿದ ದೇಶಗಳಿಗಾಗಿ ಪರಿಷ್ಕರಿಸಿದ ಆವೃತ್ತಿ. ಏಶ್ಯಾದಲ್ಲಿ ಫಿಲಿಪ್ಪೈನ್ಸ್‌ನಂತಹ ಅಮೆರಿಕಾದ ಮಿಲಿಟರಿ ಮಿತ್ರದೇಶಗಳು ಈ ಎಲ್ಎಸ್ಎ ಗೆ ಸಹಿ ಹಾಕಿವೆ. ದಕ್ಷಿಣ ಏಶ್ಯಾದಲ್ಲಿ ಶ್ರೀಲಂಕಾದೊಂದಿಗೆ ಇಂತಹ ಎಲ್ಎಸ್ಎ ಜಾರಿಯಲ್ಲಿದೆ. ಪಾಕಿಸ್ತಾನದೊಮದಿಗೆ ಇದ್ದ ಎಲ್ಎಸ್ಎ 2012ರಲ್ಲಿ ಲುಪ್ತಗೊಂಡಿದೆ.

ಅಮೆರಿಕನ್ ಮಿಲಿಟರಿ ಹಸ್ತಕ್ಷೇಪಕ್ಕೆ ನೆರವು

ಈ ಎಲ್ಎಸ್ಎ ಅತಿಥೇಯ ದೇಶದ ಮಿಲಿಟರಿ ಸೌಲಭ್ಯಗಳ ಬಳಕೆಗೆ ಕಾನೂನಿನ ಆಧಾರ ಕಲ್ಪಿಸುತ್ತದೆ ಮತ್ತು ಅದು ಒದಗಿಸುವ ಸೇವೆಗಳು ಮತ್ತು ಸರಕುಗಳಿಗೆ ಹಣಪಾವತಿಯ ವಿಧಾನಗಳನ್ನು ವಿಧಿಸುತ್ತದೆ. ಅಮೆರಿಕನ್ ಸಶಸತ್ರ ಪಡೆಗಳು ಜಗತ್ತಿನ ಸುತ್ತ ಹೊಮದಿರುವ ಮಿಲಿಟರಿ ನೆಲೆಗಳನ್ನು ಮಾತ್ರ ಅವಲಂಬಿಸಿಲ್ಲ. ಅದರ ದಾಳಿ ಪಡೆಗಳಿಗೆ ಜಗತ್ತಿನ ಪ್ರತಿಯೊಂದು ಭಾಗದಲ್ಲಿ ಓಡಾಡುವ ಸಾಧ್ಯತೆ ನೀಡಿರುವುದು ಇಂತಹ ಎಲ್ಎಸ್ಎ ಮಾದರಿಯ ಒಪ್ಪಂದಗಳೇ.

ಇದು ಅಮೆರಿಕಾ ಬಹಳ ಕಾಲದಿಂದ ಪ್ರಯತ್ನಿಸಿಕೊಂಡು ಬಂದಿರುವ ಒಂದು ಒಪ್ಪಂದ. ಇದು 'ಅಮೆರಿಕಾ–ಭಾರತ ರಕ್ಷಣಾ ಚೌಕಟ್ಟು ಒಪ್ಪಂದ'ದ ವ್ಯಾಪ್ತಿಯಲ್ಲಿ ಬರುತ್ತದೆ. ಅದನ್ನು 2015ರಲ್ಲಿ ಇನ್ನೂ ಒಮದು ದಶಕದ ಅವಧಿಗೆ ವಿಸ್ತರಿಸಲಾಗಿತ್ತು.

ಎಲ್ಎಸ್ಎಯ ನಿಜವಾದ ಆಶಯವನ್ನು ಮರೆಮಾಚಲು ಭಾರತದೊಡನೆ ಮಾಡಿಕೊಂಡಿರುವ ಒಪ್ಪಂದದಲ್ಲಿ ಬೇರ ಎಪದಗಳನ್ನು ಬಳಸಲಾಗಿದೆ. ಈಗ ಸಹಿ ಹಾಕಿರುವ ಒಪ್ಪಂದವನ್ನು 'ಸಾಮರಿಕ ಸಾಗಣೆ ವಿನಿಮಯ ಒಪಂದ ಮನವಿ ಪತ್ರ'(ಎಲ್ಇಎಂಒಎ) ಎಂದು ಹೆಸರಿಸಲಾಗಿದೆ.

ನಿಜ ಪ್ರಶ್ನೆಯನ್ನು ಗೋಜಲಾಗಿಸುವ ಯತ್ನ

ಈ ಒಪ್ಪಂದದ ನಿಜವಾದ ಮಹತ್ವವನ್ನು ಗೋಜಲುಗೊಳಿಸಲು ಮೋದಿ ಸರಕಾರ ಉದ್ದೇಶಪೂರ್ವಕವಾಗಿಯೇ ಪ್ರಯತ್ನಿಸುತ್ತಿದೆ. ಅಮೆರಿಕಾ ಕೂಡ ಎರಡು ಸಶಸ್ತ್ರ ಪಡೆಗಳ ನಡುವೆ ಸಂಯೋಜನೆಯ ಮಹತ್ವದ ಹೆಜ್ಜೆ ಈಡೇರಿದರೂ ಮೋದಿ ಸರಕಾರದ ಉದ್ದೇಶವನ್ನು ಮನ್ನಿಸಿ ಆಟವಾಡುತ್ತಿದೆ.

ಭಾರತದ ರಕ್ಷಣಾ ಮಂತ್ರಾಲಯ ಇದೊಂದು 'ಅನುವು ಮಾಡಿಕೊಡುವ ಒಪ್ಪಂದ' ಮಾತ್ರ, ಇದನ್ನು ಅಧಿಕೃತಗೊಂಡಿರುವ ಬಂದರು ಭೇಟಿಗಳಿಗೆ, ಜಂಟಿ ಕವಾಯತುಗಳಿಗೆ, ಜಂಟಿ ತರಬೇತಿಗಳಿಗೆ ಮತ್ತು ಮಾನವೀಯ ನೆರವು ಮತ್ತು ಆಪತ್ತು ಪರಿಹಾರ ಪ್ರಯತ್ನಗಳಿಗೆ ಮಾತ್ರವೇ ಬಳಸಲಾಗುವುದು' ಎಂದು ಒಂದು ಹೇಳಿಕೆಯಲ್ಲಿ ತಿಳಿಸಿದೆ.

ಆದರೆ ಅಡಚಣೆ ಇರುವುದು ನಂತರದ ವಾಕ್ಯದಲ್ಲೇ. "ಬೇರೆ ಯಾವುದೇ ಸಹಕಾರಿ ಪ್ರಯತ್ನಗಳಿಗೆ ಸಾಗಣೆ ಬೆಂಬಲವನ್ನು ಸಹಿ ಹಾಕಿದ ಎರಡು ಪಕ್ಷಗಳ ಪರಸ್ಪರ ಪೂರ್ವ ಒಪ್ಪಿಗೆಯೊಂದಿಗೆ ಆಯಾಯ ಕಾಯ್ದೆಗಳು, ನಿಯಮಾವಳಿಗಳು ಮತ್ತು ಧೋರಣೆಗಳ ಆ ಧಾರದ ಮೇಲೆ ಮಾತ್ರವೇ ಆಯಾಯ ಸಂದರ್ಭದಲ್ಲಿ ಒದಗಿಸಲಾಗುವುದು" ಎಂದು ಹೇಳಲಾಗಿದೆ.

ಇಲ್ಲಿ ಸಹಿ ಹಾಕಿದ ಎರಡೂ ಪಕ್ಷಗಳು ಸಾಗಣೆ ಸಹಕಾರ ಮುಖ್ಯವಾಗಿ ಬಂದರು ಭೇಟಿಗಳಿಗೆ, ಜಂಟಿ ಕವಾಯತುಗಳಿಗೆ, ಜಂಟಿ ತರಬೇತಿಗಳಿಗೆ ಮತ್ತು ಮಾನವೀಯ ನೆರವು ಇತ್ಯಾದಿಗಳಿಗೆ ಮಾತ್ರ ಎಂದು ನಟಿಸುತ್ತಿವೆ. ಆದರೆ ವಿಶ್ವವ್ಯಾಪಿ ಮಿಲಿಟರಿ ನೇಲೆಗಳ ಜಾಲವನ್ನು ಹೊಂದಿರುವ ಅಮೆರಿಕಾ ಇತರ ಹಲವು ದೇಶಗಳೊಂದಿಗೆ ಮಾಡಿಕೊಂಡಿರುವ ಸಾಗಣೆ ಬೆಂಬಲ ಒಪ್ಪಂದಗಳನ್ನು ವಿಶ್ವದ ಸುತ್ತ ತನ್ನ ಮಿಲಿಟರಿ ಕಾರ್ಯಾಚರಣೆಗಳಿಗೆ ಮತ್ತು ಹಸ್ತಕ್ಷೇಪಗಳಿಗೆ ತನ್ನ ಸಶಸ್ತ್ರ ಪಡೆಗಳನ್ನು ಮತ್ತು ಅದರ ಸಾಮರಿಕ ಸೊತ್ತುಗಳನ್ನು ಒಯ್ಯಲು ಬಳಸಿಕೊಳ್ಳುತ್ತಿದೆ.

ಭಾರತದೊಂದಿಗೆ ಒಂದು ಸಾಮರಿಕ ಸಾಗಣೆ ಒಪ್ಪಂದ ಇದ್ದರೆ ಅಮೆರಿಕನ್ ವಿಮಾನ ಪಡೆಗೆ ಮತ್ತು ನೌಕಾಪಡೆಗೆ ಇಂಧನ ತುಂಬಿಸಿಕೊಳ್ಳಲು, ಪೂರೈಕೆಗಳು, ಸಲಕರಣೆಗಳನ್ನು ಒದಗಿಸಲು ಅನುಕೂಲ ದೊರೆಯುತ್ತದೆ. ಅಮೆರಿಕದೊಂದಿಗೆ ಮೋದಿ ಸರಕಾರ ಹೊಂದಿರುವ ಸಾಮರಿಕ ಮೈತ್ರಿಯ ಹಿನ್ನೆಲೆಯಲ್ಲಿ ಮೂರನೇ ದೇಶಗಳ ವಿರುದ್ಧ ಕಾರ್ಯಾಚರಣೆಗಳಲ್ಲಿ ಭಾರತೀಯ ಸೌಲಭ್ಯಗಳನ್ನು ಬಳಸಿಕೊಳ್ಳಲು ಅಮೆರಿಕನ್ ಪಡೆಗಳಿಗೆ ಮಂಜೂರಾತಿಯನ್ನು ಆಯಾಯ ಸಂದರ್ಭಕ್ಕೆ ಅನುಗುಣವಾಗಿ ಪರಿಶೀಲಿಸಲಾಗುವುದು ಎಂಬುದು ಕೇವಲ ಔಪಚಾರಿಕ ಮಾತಷ್ಟೇ.

ಅಮೆರಿಕಾದೊಂದಿಗೆ ಭಾರತ ಇಂತಹ ಒಂದು ಒಪ್ಪಂದ ಹೊಂದಿಲ್ಲದಿದ್ದಾಗಲೂ ಈ ಹಿಂದೆ ಭಾರತೀಯ ಮಿಲಿಟರಿ ಸೌಲಭ್ಯಗಳನ್ನು ಬಳಸಲು ಅಮೆರಿಕಾದಿಂದ ಕೋರಿಕೆ ಬಂದಾಗ ಆಗಿದ್ದ ಸರಕಾರಗಳು ಒಪ್ಪಿಕೊಂಡ ಉದಾಹರಣೆಗಳಿವೆ. 1991ರ ಅಲ್ಪಕಾಲ ಬದುಕಿದ್ದ ಚಂದ್ರಶೇಖರ ಸರಕಾರ ಅಮೆರಿಕನ್ ಯುದ್ಧವಿಮಾನಗಳು ಇರಾಕಿನ ಮೇಲೆ ಬಾಂಬದಾಳಿಗಳಿಗೆ ಹೋಗುವ ದಾರಿಯಲ್ಲಿ ಭಾರತದ ಮಿಲಿಟರಿ ನೆಲೆಗಳಲ್ಲಿ ಇಂಧನ ತುಂಬಿಸಿಕೊಳ್ಳಲು ಅವಕಾಶ ನೀಡಿತ್ತು. 2001ರಲ್ಲಿ ಸಪ್ಟಂಬರ್ 11 ದಾಳಿಯ ನಂತರ ಅಮೆರಿಕಾ ಅಫಘಾನಿಸ್ತಾನದ ಮೇಲೆ ದಾಳಿ ಮಾಡಲು ನಿರ್ಧರಿಸಿದಾಗ ಪ್ರಧಾನ ಮಂತ್ರಿ ವಾಜಪೇಯಿ ಅಧ್ಯಕ್ಷ ಬುಶ್ ಅವರಿಗೆ ಪತ್ರ ಬರೆದು ಅಂತಹ ಸಂದರ್ಭದಲ್ಲಿ ಭಾರತೀಯ ಮಿಲಿಟರಿ ಸೌಲಭ್ಯಗಳನ್ನು ಬಳಸಿಕೊಳ್ಳಬಹುದೆಂದು ಆಹ್ವಾನ ನೀಡಿದ್ದರು. ಅಮೆರಿಕಾ ಆ ಆಹ್ವಾನವನ್ನು ಸ್ವೀಕರಿಸಲಿಲ್ಲ, ಏಕೆಂದರೆ ಅವರು ತಮ್ಮ ಮಿಲಿಟರಿ ಕಾರ್ಯಾಚರಣೆಗಳಿಗೆ ಪಾಕಿಸ್ತಾನವನ್ನು ಪ್ರಧಾನ ನೆಲೆಯಾಗಿ ಬಳಸಿಕೊಳ್ಳಲು ನಿರ್ಧರಿಸಿದರು.

ಆದ್ದರಿಂದ ಸಾಗಣೆ ಬೆಂಬಲ ಒಪ್ಪಂದ ಆಪತ್ತು ಮತ್ತು ಮಾನವೀಯ ಪರಿಹಾರ ಕಾರ್ಯಾಚರಣೆಗಳಿಗೆ, ಅಥವ ಜಂಟಿ ಕವಾಯತುಗಳಿಗಷ್ಟೇ ಮೀಸಲಾಗಿರುವುದಿಲ್ಲ. ಅಮೆರಿಕಾದ ಮಿಲಿಟರಿ ವ್ಯವಸ್ಥೆಯಾದ ಪೆಂಟಗನ್ ಈ ಒಪ್ಪಂದವನ್ನು ತನ್ನ ಏಶ್ಯ–ಶಾಂತಸಾಗರ ಸಮರತಂತ್ರದಲ್ಲಿ ಚೀನಾವನ್ನು ತಡೆದಿಡಲು ಮಾತ್ರವೇ ಅಲ್ಲ, ಮಧ್ಯ ಏಶ್ಯಾವೂ ಸೇರಿದಂತೆ ಏಶ್ಯಾದಲ್ಲೆಲ್ಲ ಕಡೆ ಮಿಲಿಟರಿ ಕಾರ್ಯಾಚರಣೆಗಳಿಗೆ ಬಳಸಲಿದೆ. ಏಶ್ಯಾದಲ್ಲಿ ಚೀಣಾದ ನಂತರ ಅತಿ ದೊಡ್ಡ ಸೇನಾಪಡೆ ಭಾರತದ್ದೇ. ಇದರ ಸಾಕಷ್ಟು ದೊಡ್ಡ ಪ್ರಮಾಣದ ಮಿಲಿಟರಿ ಸೌಕಯರ್ಯಗಳು ಲಭ್ಯವಾಗುವುದು ಅಮೆರಿಕಾಕ್ಕೆ ಒಂದು ದೊಡ್ಡ ಲಾಭವೇ ಆಗಿದೆ.

ಔಪಚಾರಿಕ ಮಿಲಿಟರಿ ಮಿತ್ರ

ಮೋದಿಯವರ ಈ ಹಿಂದಿನ ಅಮೆರಿಕಾ ಭೇಟಿ ಕಾಲದಲ್ಲಿ ಭಾರತವನ್ನು ಅಮೆರಿಕಾದ 'ಪ್ರಮುಖ ರಕ್ಷಣಾ ಭಾಗೀದಾರ" ಎಂದು ಕರೆದಿರುವುದು ಮೋದಿ ಸರಕಾರಕ್ಕೆ ರೋಮಾಂಚನ ಉಂಟು ಮಾಡಿದೆ. ಈ ಹುದ್ದೆಯನ್ನು ತಾನು ಸಾಗಣೆ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಗಳಿಸಿದ್ದೇನೆ ಎಂದು ಅದು ಸಾಬೀತು ಮಾಡ ಬಯಸುತ್ತಿದೆ. ಇದರೊಂದಿಗೆ ಭಾರತ ಅಮೆರಿಕಾದ ಒಂದು ಮಿಲಿಟರಿ ಮಿತ್ರ ಎಂಬ ಔಪಚಾರಿಕ ಸ್ಥಾನಮಾನವನ್ನು ಪಡೆದಿದೆ. ಅದೀಗ ಕಳೆದ ವರ್ಷ ಅಧ್ಯಕ್ಷ ಒಬಾಮರ ಭಾರತ ಭೇಟಿ ಕಾಲದಲ್ಲಿ ಸಹಿ ಹಾಕಿದ "ಏಶ್ಯ–ಶಾಂತಸಾಗರ ಮತ್ತು ಹಿಂದೂ ಮಹಾಸಾಗರ ಪ್ರದೇಶಕ್ಕೆ ಜಂಟಿ ಕಣ್ಣೋಟ ಹೇಳಿಕೆ" ಯಲ್ಲಿ ಅಧಿಕೃತಗೊಳಿಸಿದ ಅಮೆರಿಕಾ–ಏಶ್ಯ ಶಾಂತಸಾಗರ ಸಮರತಂತ್ರದ ಭಾಗವಾಗಿ ಬಿಟ್ಟಿದೆ.

ಅಮೆರಿಕನ್ ಸಮರಚಕ್ರದಲ್ಲಿ ಭಾರತ ಒಂದು ಕಂಬಿಹಲ್ಲು ಆಗಲು ಸಿದ್ಧವಿದೆ ಎಂಬುದು ಜಪಾನ್ ,ಅಮೆರಿಕ, ಭಾರತ ತ್ರಿಪಕ್ಷೀಯ ಭದ್ರತಾ ಮೈತ್ರಿಯನ್ನು ಬೆಸೆದಾಗಲೂ ಕಾಣಬಂದಿತ್ತು. ಈ ಜೂನ್ ತಿಂಗಳಲ್ಲಿ ದಕ್ಷಿಣ ಚೀನಾ ಸಮುದ್ರದಲ್ಲಿ ನಡೆದ ಒಂದು ಕವಾಯತಿಗೆ ಭಾರತ ತನ್ನ ನಾಲ್ಕು ಯುದ್ಧನೌಕೆಗಳನ್ನು ಕಳಿಸಿ ಚೀನಾದ ವಿರುದ್ಧ ಅಮೆರಿಕಾ ಮತ್ತು ಜಪಾನಿನ ನಡೆಗಳೊಂದಿಗೆ ಹೆಜ್ಜೆ ಹಾಕುವ ಸಂಕೇತವನ್ನು ನೀಡಿತ್ತು.

ಈ ಒಪ್ಪಂದದ ಟೀಕಾಕಾರರು ಉದ್ದೇಶ ಪೂರ್ವಕವಾಗಿಯೇ ಇದು ಮಿಲಿಟರಿ ನೆಲೆಗಳ ಸೌಕರ್ಯಗಳನ್ನು ಒದಗಿಸುವಂತದ್ದು ಎಂದು ಗೊಂದಲ ಮಾಡಿಕೊಳ್ಳುತ್ತಿದ್ದಾರೆ ಎಂದು ಪರಿಕ್ಕರ್ ಹೇಳಿದ್ದಾರೆ. ಎಲ್ಎಸ್ಎ ಭಾರತದಲ್ಲಿ ಅಮೆರಿಕನ್ ನೆಲೆಗಳನ್ನು ಸ್ಥಾಪಿಸುವುದಕ್ಕೆ ಸಂಬಂಧಪಟ್ಟದ್ದಲ್ಲ, ಬದಲಿಗೆ ಭಾರತದ ಮಿಲಿಟರಿ ನೇಲೆಗಳನ್ನು ಅಮೆರಿಕನ್ ಸಶಸ್ತ್ರ ಪಡೆಗಳು ಬಳಸುವುದಕ್ಕೆ ಸಂಬಂಧಪಟ್ಟದ್ದು ಎಂಬುದು ನಮಗೆಲ್ಲರಿಗೂ ಗೊತ್ತಿದೆ. ಇದು ಪರಸ್ಪರ ಸೌಲಭ್ಯ , ಅಂದರೆ ಭಾರತೀಯ ಸಶಸ್ತ್ರ ಪಡೆಗಳು ಕೂಡ ಅಮೆರಿಕನ್ ಮಿಲಿಟರಿ ಸೌಲಭ್ಯಗಳನ್ನು ಬಳಸಿಕೊಳ್ಳಬಹುದು ಎಂಬ ಮಾತಿನ ಬಗ್ಗೆ ಹೇಳುವುದಾದರೆ, ಭಾರತೀಯ ನೌಕಾಪಡೆ ಯಾವುದೇ ಕೆಲಸಕ್ಕೆ ಬರಬಹುದಾದ ಮಿಲಿಟರಿ ಕಾರ್ಯಾಚರಣೆಗೆ ಸಾನ್ ಡಿಯಾಗೊ, ಗುವಂ ಅಥವ ಒಕಿನಾವದಲ್ಲಿನ ಅಮೆರಿಕನ್ ನೌಕಾನೆಲೆಗಳನ್ನು ಬಳಸಿಕೊಳುವ ಪ್ರಶ್ನೆಯಿಲ್ಲ ಎಂಬುದು ಅಲ್ಪ–ಸ್ವಲ್ಪ ಸಾಮಾನ್ಯ ಜ್ಞಾನ ಇರುವ ಯಾರಿಗಾದರೂ ತಿಳಿಯುವ ಸಂಗತಿ.

ಮೋದಿ ಸರಕಾರಕ್ಕೆ ಇರುವ ಮುಂದಿನ ಹೆಜ್ಜೆ ಎಂದರೆ ಬುನಾದಿ ಒಪ್ಪಂದಗಳೆಂದು ಹೇಳಲಾಗುವ 'ಸಂಪರ್ಕ ಮತ್ತು ಮಾಹಿತಿ ಭದ್ರತಾ ಒಪ್ಪಂದ ಮನವಿ ಪತ್ರ '(ಸಿಐಎಸ್ಎಂಒಎ) ಮತ್ತು 'ಮೂಲ ವಿನಿಮಯ ಮತ್ತು ಸಹಕಾರ ಒಪ್ಪಂದ'(ಬಿಇಸಿಎ). ಕ್ಕೆ ಸಹಿ ಹಾಕುವುದು. ಅಮೆರಿಕಾ ಈಗ ಭಾರತ–ಕ್ಕೆ ಪ್ರಧಾನ ಶಸ್ತ್ರಾಸ್ತ್ರ ಮತ್ತು ರಕ್ಷಣಾ ಸಾಧನಗಳ ಪೂರೈಕೆದಾರನಾಗಿ ಬಿಟ್ಟಿರುವುದರಿಂದಾಗಿ ಭಾರತ ರಕ್ಷಣಾ ತಂತ್ರಜ್ಞಾನವನನು ಪಡೆದುಕೊಳ್ಳುವ ಹೆಸರಿನಲ್ಲಿ ಈ ಎರಡೂ ಒಪ್ಪಂದಗಳಿಗೆ ಸಹಿ ಹಾಕಲೇ ಬೇಕಾಗಿದೆ. ಈ ಎರಡು ಒಪ್ಪಂದಗಳಿಗೆ ಸಹಿ ಹಾಕಿದಾಗ ರಕ್ಷಣಾ ಚೌಕಟ್ಟು ಒಪ್ಪಂದ ದಷ್ಟಪುಷ್ಟವಾಗುತ್ತದೆ.

ಈ ಹಿಂದೆ 2009ರಲ್ಲಿ ಯುಪಿಎ ಸರಕಾರದ ಅಡಿ 'ಅಂತಿಮ ಬಳಕೆದಾರ ಒಪ್ಪಂದ' ಕ್ಕೆ ಸಹಿ ಹಾಕಲಾಗಿತ್ತು. ಈ ಒಪ್ಪಂದದಲ್ಲಿ ಅಮೆರಿಕನ್ ಇನ್ಸ್‌ಪೆಕ್ಟರುಗಳು ಭಾರತ ಖರೀದಿಸಿದ ಶಸ್ತ್ರಾಸ್ತ್ರಗಳು ಮತ್ತು ಉಪಕರಣಗಳನ್ನು ಅದನ್ನು ಖರೀದಿಸಿದ ಉದ್ದೇಶಕ್ಕಾಗಿಯೇ ಬಳಸಲಾಗುತ್ತಿದೆಯೇ ಎಂದು ಪರೀಕ್ಷಿಸಲು ಅವಕಾಶ ಕೊಟ್ಟಿತು. ಈಗ ಎಲ್ಇಎಂಒಎ ಒಪ್ಪಂದ ಬಂದಿರುವುದರಿಮದ ಅಮೆರಿಕನ್ ಸಶಸ್ತ್ರ ಪಡೆಗಳ ಸಿಬ್ಬಂದಿ ನಿರ್ದಿಷ್ಟ ಭಾರತೀಯ ಮಿಲಿಟರಿ ಸೌಲಭ್ಯಗಳಲ್ಲಿ ಇರುತ್ತಾರೆ. ಇದಿಲ್ಲದೆ ಇಂಧನ ತುಂಬಿಸಿಕೊಳ್ಳುವುದು, ಪೂರೈಕೆಗಳು, ರಿಪೇರಿ ಮತ್ತು ಮೆಂಟೆನೆನ್ಸ್ ನಡೆಸಲು ಸಾಧ್ಯವಿಲ್ಲ.

ಸಾರ್ವಭೌಮತೆಗೆ ಧಕ್ಕೆ

ಮೋದಿ ಸರಕಾರ ಈ ಒಪ್ಪಂದಕ್ಕೆ ಸಹಿ ಹಾಕಿ ಇಷ್ಟು ವರ್ಷ ಯಾವುದೇ ಮಿಲಿಟರಿ ಕೂಟಗಳ ಭಾಗವಾಗಲು ನಿರಾಕರಿಸಿ ಭಾರತ ರಕ್ಷಿಸಿಕೊಂಡು ಬಂದಿದ್ದ ಭಾರತೀಯ ಸಾರ್ವಭೌಮತೆಗೆ ಧಕ್ಕೆ ತಂದಿದೆ. ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳುವಲ್ಲಿ ಭದ್ರ ಬುನಾದಿಯಾದ ನಮ್ಮ ಸಾಮರಿಕ ಸ್ವಾಯತ್ತತೆಯನ್ನೂ ಬಿಟ್ಟುಕೊಡಲಾಗಿದೆ.

ಭಾರತದ ವಿದೇಶಾಂಗ ಧೋರಣೆ ಮತ್ತು ಸಾಮರಿಕ ಕಣ್ಣೋಟ ಸಂಪೂರ್ಣ ತಲೆಕೆಳಗಾಗುತ್ತಿದೆ ಎಂಬುದು ವೆನೆಜುವೆಲಾದ ರಾಜಧಾನಿ ಕರಕಾಸ್‌ನಲ್ಲಿ ಸಪ್ಟಂಬರ್ ಮೂರನೇ ವಾರದಲ್ಲಿ ನಡೆಯಲಿರುವ ಅಲಿಪ್ತ ರಾಷ್ಟ್ರಗಳ ಶೃಂಗ ಸಭೆಯಲ್ಲಿ ಪ್ರಧಾನ ಮಂತ್ರಿ ಮೋದಿ ಭಾಗವಹಿಸುತ್ತಿಲ್ಲ ಎಂಬ ಸಂಗತಿಯಿಂದಲೂ ಸ್ಪಷ್ಟವಾಗುತ್ತದೆ. ಕೇವಲ ಆರು ತಿಂಗಳು ಹಂಗಾಮಿ ಸರಕಾರದ ಮುಖ್ಯಸ್ಥರಾಗಿದ್ದ ಚರಣ್ ಸಿಂಗ್ ಬಿಟ್ಟರೆ ಮೋದಿ ಒಂದು ಅಲಿಪ್ತ ಶೃಂಗ ಸಭೆಯಲ್ಲಿ ಭಾಗವಹಿಸದೇ ಇರುವ ಮೊದಲ ಭಾರತೀಯ ಪ್ರಧಾನ ಮಂತ್ರಿಯಾಗುತ್ತಾರೆ. ಇದರ ಹಿಂದಿರುವ ಸಂದೇಶ ಸ್ಪಷ್ಟ. ಭಾರತ ಈಗ ಅಲಿಪ್ತವಲ್ಲ, ಅದೀಗ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಒಂದು ಅಡಿಯಾಳು ಮಿತ್ರ ಆಗಿಬಿಟ್ಟಿದೆ. ●



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಈ ಸಮಾವೇಶ 'ಡಾ. ಕಲಬುರ್ಗಿ, ಕಾ. ಪನ್ಸಾರೆ, ಡಾ. ದಾಭೋಲ್ಕರ್ ಹತ್ಯೆಗಳಲ್ಲಿ ನ್ಯಾಯ'ಕ್ಕಾಗಿ ತನ್ನ ದನಿ ಎತ್ತಿದೆ. ಅವರ ಹತ್ಯೆಗೈದವರನ್ನು 30 ದಿನಗಳೊಳಗೆ ಬಂಧಿಸಬೇಕೆಂದು ಒತ್ತಾಯಿಸಿದೆ. ಆದರೆ ಇವರ ಹತ್ಯೆಗೈದವರು ಕೇವಲ ಕೆಲವು ವ್ಯಕ್ತಿಗಳಲ್ಲ. ಅವರ ಹಿಂದೆ ನಿರ್ದಿಷ್ಟ ಶಕ್ತಿಗಳು ಸಂಘಟನೆಗಳು ಸಿದ್ಧಾಂತಗಳೂ ಕೆಲಸ ಮಾಡುತ್ತಿವೆ. ಅವುಗಳನ್ನು ಗುರುತಿಸಿ ಎದುರಿಸುವುದೂ ಅಗತ್ಯ. ಲೇಖಕರ ಕಲಾವಿದರ ಬುದ್ಧಿಜೀವಿಗಳ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬಂದಿರುವ ಅಪಾಯಗಳ ಬಗ್ಗೆ ಮಾತ್ರ ಸಮಾವೇಶ ದನಿ ಎತ್ತುತ್ತಿಲ್ಲ. ಅಂತಿಮವಾಗಿ ದಲಿತರು, ಅಲ್ಪಸಂಖ್ಯಾತರು, ರೈತ–ಕಾರ್ಮಿಕರು, ಕೃಷಿ ಕೂಲಿಕಾರರು ಮುಂತಾದ ಎಲ್ಲಾ ದಮನಿತರು ಅಥವಾ ಅವರ ಪರವಾಗಿ ಯಾರೂ ದನಿ ಎತ್ತದಂತೆ ಮಾಡಲು ಈ ಶಕ್ತಿಗಳು ಹೊರಟಿವೆ. ಈ ಶಕ್ತಿಗಳನ್ನು ಹಿಮ್ಮೆಟ್ಟಿಸುವುದು ಅಗತ್ಯ



'ನೀವು ಒಬ್ಬ ಕಲಬುರ್ಗಿಯನ್ನು ಕೊಂದಿರಿ, ನೋಡಿ ಸಾವಿರಾರು ಕಲುಬುರ್ಗಿಗಳು ಹುಟ್ಟಿದ್ದಾರೆ'

ವಸಂತ



'ಡಾ. ಕಲಬುರ್ಗಿ, ಕಾ.ಪನ್ಸಾರೆ, ಡಾ. ದಾಭೋಲ್ಕರ್ ಹತ್ಯೆಗಳಲ್ಲಿ ನ್ಯಾಯ ಸಿಗುವವರೆಗೆ ವಿಶ್ರಮಿಸುವುದಿಲ್ಲ' ಇದು ಧಾರವಾಡದಲ್ಲಿ ಅಗಸ್ಟ್ 31ರಂದು ಧಾರವಾಡದಲ್ಲಿ ಸೇರಿದ್ದ ಹತ್ತು ಸಾವಿರದಷ್ಟು ಜನರ ಕೂಗು ಮತ್ತು ಮನದಾಳದ ಮಾತು ಆಗಿತ್ತು. ಅಂದು ಡಾ. ಕಲಬುರ್ಗಿ ಅವರ ಬರ್ಬರ ಹತ್ಯೆಯ ಮೊದಲ ವಾರ್ಷಿಕ. ಒಂದು ವರ್ಷದ ನಂತರವೂ ತನಿಖೆಯಲ್ಲಿ ಯಾವುದೇ ಪ್ರಗತಿ ಕಂಡಿಲ್ಲ. ರಾಜ್ಯ ಸರಕಾರದ ನಿರ್ಲಕ್ಷ, ನಿರಾಸಕ್ತಿ ಮತ್ತು ಅದಕ್ಷತೆ ಬಗ್ಗೆ ಆಕ್ರೋಶ ಧಾರವಾಡದ ಬೀದಿಗಳಲ್ಲಿ ಹರಿದಿತ್ತು. ರಾಜ್ಯ ಮತ್ತು ದೇಶದ ಮೂಲೆ ಮೂಲೆಗಳಿಂದಲೂ ಬಂದ ಸಾವಿರಾರು ಲೇಖಕರು, ಪತ್ರಕರ್ತರು, ವಿಜ್ಞಾನಿಗಳು, ಬುದ್ಧಿಜೀವಿಗಳು, ವಿದ್ಯಾರ್ಥಿಗಳು ಹಾಗೂ ಜನತೆ ಅಂದು ನಡೆದ ಮೌನ ಮೆರವಣಿಗೆ ಮತ್ತು ಸಮಾವೇಶದಲ್ಲಿ ಭಾಗವಹಿಸಿದ್ದರು. ಅದೊಂದು ರಾಜ್ಯದ ಏಕೆ ದೇಶದ ಪ್ರಜಾಸತ್ತಾತ್ಮಕ ಚಳುವಳಿಯ ಚಾರಿತ್ರಿಕ ಕ್ಷಣವಾಗಿತ್ತು.

'ಬಂದೂಕಿನೆದುರು ಜನದನಿ–ರಾಷ್ಟ್ರೀಯ ಜನಜಾಥಾ'

ಮೌನ ಮೆರವಣಿಗೆ ಬೆಳಿಗ್ಗೆ ಡಾ. ಕಲಬುರ್ಗಿ ಅವರ ಮನೆ 'ಸೌಜನ್ಯ'ದಿಂದ 10 ಗಂಟೆಗೆ ಆರಂಭವಾಗಿ ಧಾರವಾಡದ ಹಲವು ಬೀದಿಗಳಲ್ಲಿ ಹಲವು ಕಿ.ಮಿ. ಕ್ರಮಿಸಿ ಸಮಾವೇಶದ ತಾಣ–ಕ್ಕೆ ಬಂದು ಸೇರಿತ್ತು. ಮೌನ ಮೆರವಣಿಗೆಯನ್ನು 'ಬಂದೂಕಿನೆದುರು ಜನದನಿ–ರಾಷ್ಟ್ರೀಯ ಜನಜಾಥಾ' ಎಂದು ಕರೆಯಲಾಗಿತ್ತು. ಸಮಾವೇಶವನ್ನು 'ಅಭಿವ್ಯಕ್ತಿ–ಪರ ರಾಷ್ಟ್ರೀಯ ಸಮಾವೇಶ' ಎಂದು ಕರೆಯಲಾಗಿತ್ತು. ಇವನ್ನು ಸಾಂಸ್ಕೃತಿಕ/ಸಾಹಿತ್ಯಕ, ವಿದ್ಯಾರ್ಥಿ, ಯುವಜನ, ಮಹಿಳಾ ಮತ್ತಿತರರ ನೂರಕ್ಕೂ ಹೆಚ್ಚು ಸಂಘಟನೆಗಳ ಕೂಟವಾದ 'ಡಾ. ಕಲಬುರ್ಗಿ, ಕಾ.ಪನ್ಸಾರೆ, ಡಾ. ದಾಭೋಲ್ಕರ್ ಹತ್ಯಾ–ವಿರೋಧಿ ಹೋರಾಟ ಸಮಿತಿ' ಸಂಘಟಿಸಿತ್ತು. ಇವುಗಳಲ್ಲಿ ಮೂರೂ ಮಹಾನ್ ವ್ಯಕ್ತಿಗಳ ಹೆಂಡತಿ, ಮಕ್ಕಳು ಕುಟುಂಬದವರು ಭಾಗವಹಿಸಿದ್ದರು. ಪ್ರಸಿದ್ಧ ಭಾಷಾತಜ್ಞ ಪ್ರೊ. ಜಿ. ಎನ್. ದೇವಿ ಅವರು ಸಮಿತಿಯ ಮತ್ತು ಇಡೀ ಕಾರ್ಯಕ್ರಮದ ಸಂಚಾಲಕತ್ವ ವಹಿಸಿದ್ದರು.

'ಈ ಸಾವು ನ್ಯಾಯವೇ?', 'ನೀವು ಒಬ್ಬ ಕಲಬುರ್ಗಿಯನ್ನು ಕೊಂದಿರಿ, ನೋಡಿ ಸಾವಿರಾರು ಕಲುಬುರ್ಗಿಗಳು ಹುಟ್ಟಿದ್ದಾರೆ', ಸಜ್ಜನರೇ..ನಿಮ್ಮ ಮೌನ ಕೊಲೆಗಾರರಿಗೆ ಪ್ರೇರಕ', 'ಡಾ. ಕಲಬುರ್ಗಿ, ಕಾ.ಪನ್ಸಾರೆ, ಡಾ. ದಾಭೋಲ್ಕರ್ ಹತ್ಯೆಗಳಲ್ಲಿ ನ್ಯಾಯ ಸಿಗುವವರೆಗೆ ವಿಶ್ರಮಿಸುವುದಿಲ್ಲ', ಕೋಮುವಾದವೇ ದೇಶದ ಮೊದಲ ಶತ್ರು', 'ವ್ಯಕ್ತಿಗಳನ್ನು ಕೊಲ್ಲಬಹುದು, ಚಿಂತನೆಗಳನ್ನಲ್ಲ', ಮುಂತಾದ ಘೋಷಣೆಗಳು ಬ್ಯಾನರುಗಳು ಪೋಸ್ಟರುಗಳಲ್ಲೂ ನೋಡಬಹುದಾಗಿತ್ತು.

ರಾಜ್ಯದ ಮತ್ತು ದೇಶದ ಇತರೆಡೆಗಳಿಂದ (ಮುಖ್ಯವಾಗಿ ಮಹಾರಾಷ್ಟ್ರದಿಂದ) ಜಾಥಾಗಳು ಪೂರ್ವಭಾವಿಯಾಗಿ ನಡೆದು ಧಾರವಾಡದ ಜನಜಾಥಾಕ್ಕೆ ಬಂದು ಸೇರಿಕೊಂಡವು. ಬೆಂಗಳೂರಿನಿಂದ ಬಂದ ಮುಖ್ಯ ಜಾಥಾ ತುಮುಕೂರು, ದಾವಣಗೆರೆ, ಚಿತ್ರದುರ್ಗ ಮುಂತಾದ ಕಡೆ ಸಭೆಗಳನ್ನು ನಡೆಸಿ ಧಾರವಾಡ ತಲುಪಿತ್ತು. ಈ ಜಾಥಾದ ನಾಯಕತ್ವವನ್ನು ಪ್ರೊ. ಚಂದ್ರಶೇಖರ ಪಾಟೀಲ, ಕಾ. ಜಿ.ಎನ್. ನಾಗರಾಜ್, ಡಾ. ಸಿದ್ದಗೌಡನ ಪಾಟೀಲ ಮುಂತಾದವರು ವಹಿಸಿದ್ದರು.

30 ದಿನಗಳಲ್ಲಿ ಕಲಬುರ್ಗಿ ಹಂತಕರನನ್ನು ಬಂಧಿಸಿ

ಕೊನೆಗೆ ಪ್ರೊ. ಜಿ.ಎನ್. ದೇವಿ ಮತ್ತು ಪ್ರೊ. ರಾಜೇಂದ್ರ ಚೆನ್ನಿ ಅವರು (ಅನುಕ್ರಮವಾಗಿ ಇಂಗ್ಲೀಷ್ ಮತ್ತು ಕನ್ನಡದಲ್ಲಿ) ಮಂಡಿಸಿದ ಹಕ್ಕೊತ್ತಾಯವೊಂದನ್ನು ರಾಷ್ಟ್ರೀಯ ಸಮಾವೇಶ ಅಂಗೀಕರಿಸಿತು. ಸಮಾವೇಶ 'ಕಲಬುರ್ಗಿ ಅವರ ಹತ್ಯೆಯ ತನಿಖೆಯಲ್ಲಿ ಯಾವ ಪ್ರಗತಿಯೂ ಆಗಿಲ್ಲ. ಇಂತಹ ಮಹತ್ವಪೂರ್ಣ ವಿದ್ಯಮಾನದ ಬಗ್ಗೆ ಸರಕಾರ ತೋರಿಸಿದ ನಿರಾಸಕ್ತಿಯ ಧೋರಣೆ ಬಗ್ಗೆ ಕಳವಳ' ಮತ್ತು "ಆತಂಕ' ವ್ಯಕ್ತ ಪಡಿಸಿತು.

"ಕರ್ನಾಟಕ ಸರಕಾರವು ಕಲಬುರ್ಗಿಯವರ ಹತ್ಯೆಯ ಬಗ್ಗೆ ನಡೆಸುತ್ತಿರುವ ತನಿಖೆಯನ್ನು ಅದರ ತಾರ್ಕಿಕ ಅಂತ್ಯಕ್ಕೆ ತರುವುದರ ಬಗ್ಗೆ ತನ್ನ ಪ್ರಾಮಾಣಿಕ ಬದ್ಧತೆಯನ್ನು ವ್ಯಕ್ತಪಡಿಸುವ ಹಾಗೂ ಅದನ್ನು ಸೂಕ್ತ ಅವಧಿಯಲ್ಲಿ ಅಂದರೆ ಎರಡು ವಾರಗಳಲ್ಲಿ ಪೂರೈಸುವಿಕೆಗೆ ತಾನು ಬದ್ಧವಾಗಿದೆ ಎಂಬ ಖಚಿತ ಹೇಳಿಕೆಯನ್ನು ನೀಡಬೇಕು' ಎಂದು ಸಮಾವೇಶ ಒತ್ತಾಯಿಸಿದೆ. "ಡಾ. ಕಲಬುರ್ಗಿಯವರ ಕುಟುಂಬದವರಿಗೆ ಹಾಗೂ ಬರಹಗಾರರು ಮತ್ತು ಬುದ್ಧಿಜೀವಿಗಳಿಗೆ ಸರಕಾರವು ಈ ತನಿಖೆಯ ಕುರಿತು ಖಚಿತ ಮಾಹಿತಿ ಕೊಡಬೇಕು" ಎಂದೂ ಸಮಾವೇಶ ಒತ್ತಾಯಿಸಿದೆ. ಇಲ್ಲದಿದ್ದರೆ 'ಆಂದೋಲನವನ್ನು ಸಂವಿಧಾನಾತ್ಮಕವಾಗಿ ಶಾಂತಿಯುತವಾಗಿ ತಮಗೆ ಸಾಧ್ಯವಿರುವ ಎಲ್ಲಾ ವಿಧಾನಗಳ ಮೂಲಕ ತೀವ್ರಗೊಳಿಸುತ್ತೇವೆ' ಎಂದೂ ಸಮಾವೇಶ ಎಚ್ಚರಿಸಿದೆ.

ಇದಕ್ಕಿಂತ ಮುನ್ನ ಪ್ರೊ. ಜಿ.ಎನ್. ದೇವಿ, ಮುಕ್ತಾ ದಾಬೋಲ್ಕರ್, ಮೇಘಾ ಪನ್ಸಾರೆ, ಶ್ರೀವಿಜಯ ಕಲಬುರ್ಗಿ, ಚಮನ್ ಲಾಲ್, ಅಂತರಾ ದೇವ್ ಸೇನ್, ಸಿದ್ದಾರ್ಥ ವರದರಾಜನ್, ಕುಮಾರ್ ಕೇತ್ಕರ್, ಅಂಜುಮ್ ರಾಜಬಲಿ, ದಾಮೋದರ ಮಾಂಜೋ, ರಾಜೇಂದ್ರ ಚೆನ್ನಿ, ಚಂದ್ರಶೇಖರ ಪಾಟೀಲ, ಗುರುಲಿಂಗ ಕಾಪಸೆ, ನರಹಳ್ಳಿ ಬಾಲಸುಬ್ರಹ್ಮಣ್ಯ, ಅರವಿಂದ ಮಾಲಗತ್ತಿ, ನೀಲಾ, ಸಿದ್ದನಗೌಡ ಪಾಟೀಲ, ಮುಂತಾದವರು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. 'ನಾನು ಕಲಬುರ್ಗಿ' ಎಂಬ ಲಡಾಯಿ ಪ್ರಕಾಶನ ಪ್ರಕಟಿಸಿದ ವಾಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಈ ಸಮಾವೇಶ 'ಡಾ. ಕಲಬುರ್ಗಿ, ಕಾ. ಪನ್ಸಾರೆ, ಡಾ. ದಾಭೋಲ್ಕರ್ ಹತ್ಯೆಗಳಲ್ಲಿ ನ್ಯಾಯ'ಕ್ಕಾಗಿ ತನ್ನ ದನಿ ಎತ್ತಿದೆ. ಅವರ ಹತ್ಯೆಗೈದವರನ್ನು 30 ದಿನಗಳೊಳಗೆ ಬಂಧಿಸಬೇಕೆಂದು ಒತ್ತಾಯಿಸಿದೆ. ಆದರೆ ಇವರ ಹತ್ಯೆಗೈದವರು ಕೇವಲ ಕೆಲವು ವ್ಯಕ್ತಿಗಳಲ್ಲ. ಅವರ ಹಿಂದೆ ನಿರ್ದಿಷ್ಟ ಶಕ್ತಿಗಳು ಸಂಘಟನೆಗಳು ಸಿದ್ಧಾಂತಗಳೂ ಕೆಲಸ ಮಾಡುತ್ತಿವೆ. ಅವುಗಳನ್ನು ಗುರುತಿಸಿ ಎದುರಿಸುವುದೂ ಅಗತ್ಯ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬಂದಿರುವ ಅಪಾಯಗಳ ಬಗ್ಗೆ ಸಹ ಸಮಾವೇಶ ದನಿ ಎತ್ತಿದೆ. ಲೇಖಕರ ಕಲಾವಿದರ ಬುದ್ಧಿಜೀವಿಗಳ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬಂದಿರುವ ಅಪಾಯಗಳ ಬಗ್ಗೆ ಮಾತ್ರ ಸಮಾವೇಶ ದನಿ ಎತ್ತುತ್ತಿಲ್ಲ. ಅಂತಿಮವಾಗಿ ದಲಿತರು, ಅಲ್ಪಸಂಖ್ಯಾತರು, ರೈತ–ಕಾರ್ಮಿಕರು, ಕೃಷಿ ಕೂಲಿಕಾರರು ಮುಂತಾದ ಎಲ್ಲಾ ದಮನಿತರು ಅಥವಾ ಅವರ ಪರವಾಗಿ ಯಾರೂ ದನಿ ಎತ್ತದಂತೆ ಮಾಡಲು ಈ ಶಕ್ತಿಗಳು ಹೊರಟಿವೆ. ಈ ಶಕ್ತಿಗಳನ್ನು ಹಿಮ್ಮೆಟ್ಟಿಸುವುದು ಅಗತ್ಯ ಎಂಬುದು ಹಲವು ಭಾಷಣಕಾರರ ಮಾತಿನ ಸಾರವಾಗಿತ್ತು.

ಕಳೆದ ಒಂದು ವರ್ಷದಿಂದಲೂ ಕೇಳಿ ಬರುತ್ತಿರುವ ಮುಖ್ಯಮಂತ್ರಿ ಮತ್ತು ಗೃಹ ಮಂತ್ರಿಗಳ 'ಸದ್ಯದಲ್ಲೇ ಕಲಬುರ್ಗಿ ಹಂತಕರನ್ನು ಬಂಧಿಸುತ್ತೇವೆ' ಎಂಬ ರಾಗವನ್ನು ಪುನಃ ಆಡಿದ್ದಾರೆ. ಆದರೆ ಅದಕ್ಕೆ ಧಾರವಾಡದಲ್ಲಿ ಸಿಕ್ಕ ತಿರಸ್ಕಾರದಿಂದ ಸ್ವಲ್ಪವಾದರೂ ಎಚ್ಚೆತ್ತು ಸೆಪೆಂಬರ್ 6 ರಂದು ಕುಟುಂಬದವರು ಮತ್ತು ಸಮಾವೇಶದ ಪ್ರತಿನಿಧಿಗಳನ್ನು ಮಾತುಕತೆಗೆ ಆಹ್ವಾನಿಸಿದ್ದಾರೆ ಎಂಬ ಸುದ್ದಿ ಬಂದಿದೆ. ಅದೇ ದಿನ 'ಹಿಂದೂ ಸಂಘಟನೆ'ಗಳ ಪ್ರತಿ–ಪ್ರತಿಭಟನೆಯ ಪ್ರಹಸನ ಸಹ ಧಾರವಾಡದಲ್ಲೇ ನಡೆಯಿತು.

ಡಾ. ಧಾಬೋಲ್ಕರ್ ಮತ್ತು ಕಾ. ಪನ್ಸಾರೆ ಅವರ ಹತ್ಯೆಗಳ ತನಿಖೆಯಲ್ಲಿ ಹೈಕೋರ್ಟು ಮೇಲುಸ್ತುವಾರಿ ಆರಂಭಿಸುವವರೆಗೆ ಯಾವುದೇ ಪ್ರಗತಿ ಇರಲಿಲ್ಲ. ಆ ನಂತರವೇ ಸ್ವಲ್ಪವಾದರೂ ಪ್ರಗತಿ ಆಗಿದೆ. ಆದ್ದರಿಂದ ಡಾ. ಕಲಬುರ್ಗಿ ಅವರ ಹತ್ಯೆಯ ತನಿಖೆಯಲ್ಲೂ ಯಾವುದೇ ಪ್ರಗತಿ ಸಾಧಿಸಲು ಅದನ್ನು ಹೈಕೋರ್ಟು ಮೇಲುಸ್ತುವಾರಿಯಲ್ಲಿ ನಡೆಸಬೇಕೆಂದು ಹೈಕೋರ್ಟು ಮೆಟ್ಟಲು ಹತ್ತಬೇಕಾಗಿದೆ.

– ಮೇಘಾ ಪನ್ಸಾರೆ

ಡಾ. ಧಾಬೋಲ್ಕರ್ ಅವರನ್ನು ಅವರ ಮನೆಯಿಂದ ಕೆಲವು ನೂರು ಮೀಟರುಗಳ ದೂರದಲ್ಲಿ ಕೊಲ್ಲಲಾಯಿತು. ಕಾ. ಪನ್ಸಾರೆ ಅವರನ್ನು ಅವರ ಮನೆಯ ಹತ್ತಿರವೇ ಕೊಲ್ಲಲಾಯಿತು. ಡಾ. ಕಲಬುರ್ಗಿ ಅವರನ್ನು ಅವರ ಮನೆಯೊಳಗೆ ಕೊಲ್ಲಲಾಯಿತು. ಸರಕಾರಗಳ ನಿರಾಸಕ್ತಿ ಮಂದಗತಿ ಮತ್ತು ನಮ್ಮ ಮೌನ ಈ ಕೊಲೆಗಡುಕ ಶಕ್ತಿಗಳಿಗೆ ಧೈರ್ಯ ತಂದಿದೆ. ಈ ಪ್ರಕರಣಗಳಲ್ಲಿ ನ್ಯಾಯ ಒದಗಿಸುವ ಬಗ್ಗೆ ಕಾಂಗ್ರೆಸ್ ಅಥವಾ ಬಿಜೆಪಿ ರಾಜ್ಯ ಅಥವಾ ಕೇಂದ್ರ ಸರಕಾರಗಳ ನಿರಾಸಕ್ತಿ ಅಥವಾ ಮುತುವರ್ಜಿಯ ಅಭಾವದಲ್ಲಿ ಯಾವುದೇ ವ್ಯತ್ಯಾಸ ಇಲ್ಲ. ಆದ್ದರಿಂದ ನಾವು ಅತ್ಯಂತ ಹೆಚ್ಚಿನ ಒತ್ತಡ ಹೇರಬೇಕಾಗಿದೆ.

– ಮುಕ್ತಾ ಧಾಬೋಲ್ಕರ್

ನನ್ನ ತಂದೆಯವರಿಗೆ ಹೇಡಿಗಳು ಹೊಡೆದ ಗುಂಡಿನ ಗಾಯ ಇನ್ನೂ ಮನದಲ್ಲಿ ಹಸಿಯಾಗಿದೆ. ಭೌತಿಕವಾಗಿ ಅವರು ನಮ್ಮ ಜತೆ ಇರದಿದ್ದರೂ ಅವರ ಮಾತು ಹಾಗೂ ಅಕ್ಷರಗಳ ರೂಪದಲ್ಲಿ ಭಿತ್ತಿ ಹೋದ ಚಿಂತನೆಗಳು ಜೀವಂತವಾಗಿವೆ. ಅವರ ಸಿದ್ಧಾಂತಗಳ ಮೂಲಕವೇ ಅವರ ಹಂತಕರ ವಿರುದ್ಧ ಹೋರಾಡುತ್ತೇವೆ.

– ಶ್ರೀವಿಜಯ ಕಲಬುರ್ಗಿ







ಆರ್.ಎಸ್.ಎಸ್. ಮುಕ್ತ ಭಾರತಕ್ಕಾಗಿ ಸಶಕ್ತ ಮಹಿಳಾ ಚಳುವಳಿ ಬೆಳೆಯಲಿ

ಉಳಿಸುತ್ತೇವೆ ಉಳಿಸುತ್ತೇವೆ ಐಕ್ಯ ಭಾರತ ಉಳಿಸುತ್ತೇವೆ ... ಮೆಟ್ಟುತ್ತೇವೆ ಮೆಟ್ಟುತ್ತೇವೆ ಕೋಮುವಾದವ ಮೆಟ್ಟುತ್ತೇವೆ.. ..





ಕೆ.ಎಸ್. ವಿಮಲ

ಕಿಲೋಮೀಟರ್ ಗಟ್ಟಲೇ ನಡೆದು ಬಂದ ಮಹಿಳಾ ಸಾಗರದ ಕಂಠದಿಂದ ಕೇಳಿ ಬರುತ್ತಿದ್ದ ಘೋಷಣೆಗಳಿವು. ಕೋಲಾರದ ಬೀದಿ ಬೀದಿಗಳಲ್ಲಿ ಸಂಚರಿಸಿದ ಮೆರವಣಿಗೆ ಸರ್ಕಾರೀ ಶಾಲಾ ಮೈದಾನಕ್ಕೆ ಬರುವಾಗ ಮಧ್ಯಾಹ್ನ ಮೀರಿತ್ತು. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಕರ್ನಾಟಕ 9ನೇ ರಾಜ್ಯ ಸಮ್ಮೇಳನ ಕೋಲಾರದಲ್ಲಿ ಆಗಸ್ಟ್ 26 ರಿಂದ 28 ರ ವರೆಗೆ ನಡೆಯಿತು. ಕೋಮುವಾದಿ, ಫ್ಯಾಸಿಸ್ಟ್ ಧೋರಣೆಯ ಮೋದಿ ನೇತೃತ್ವದ ಎನ್.ಡಿ.ಎ ಸರ್ಕಾರ ಅಭಿವೃದ್ದಿಯ ಮುಖವಾಡ ಧರಿಸಿ ದೇಶದುದ್ದಗಲಕ್ಕೂ ಹರಡುತ್ತಿರುವ ಕೋಮು ದ್ವೇಷ, ದೇಶ ಭಕ್ತಿಯ ಹುಸಿ ನೋಟಗಳನ್ನು ಯುವಜನರಲ್ಲಿ ತುಂಬುತ್ತ ದೇಶದ್ರೋಹಕ್ಕೆ ತಮ್ಮದೇ ವ್ಯಾಖ್ಯಾನ ಕೊಡುತ್ತ ಮಹಿಳೆಯರು ಮತ್ತು ದಲಿತರನ್ನು ಬರ್ಬರವಾಗಿ ಹಿಂಸಿಸುತ್ತಿರುವ ಹೊತ್ತಿನಲ್ಲಿ ನಡೆದ ಸಮ್ಮೇಳನವಿದು. ಇದೇ ವರ್ಷಾಂತ್ಯದ ಡಿಸೆಂಬರ್ 10 ರಿಂದ 14 ರ ವರೆಗೆ ಮಧ್ಯಪ್ರದೇಶದ ಭೋಪಾಲ್ ನಲ್ಲಿ ನಡೆಯಲಿರುವ ಅಖಿಲ ಭಾರತ ಸಮ್ಮೇಳನದ ಪೂರ್ವಭಾವೀ ರಾಜ್ಯ ಸಮ್ಮೇಳನವಿದು.

"ಸಮಾನತೆ ಮತ್ತು ಸಹಬಾಳ್ವೆ" ಧಕ್ಕೆ ತರುವ, ಎಲ್ಲ ವ್ಯಕ್ತಿ ಶಕ್ತಿಗಳನ್ನು ನಿಶ್ಶಕ್ತಗೊಳಿಸುವತ್ತ

ಮಹಿಳಾ ವಿಷಯವೆಂದರೆ ಅತ್ಯಾಚಾರ, ದೌರ್ಜನ್ಯ, ಕೌಟುಂಬಿಕ ಸಮಸ್ಯೆಗಳು ಮಾತ್ರ ಎಂಬ ಅಭಿಪ್ರಾಯಕ್ಕೆ ಜನವಾದಿಯ ಸಹಮತವಿಲ್ಲ. ಸಮಾಜದ ಒಟ್ಟು ಸಮಸ್ಯೆಗಳ ಭಾಗವಾಗಿಯೇ ಮಹಿಳೆಯರ ಸಮಸ್ಯೆಯೂ ಕೂಡ ಹಾಗೂ ಮಹಿಳೆಯರ ಸಮಸ್ಯೆಯ ಪರಿಹಾರವೂ ಒಟ್ಟು ಸಮಾಜದ ಪಾಲ್ಗೊಳ್ಳುವಿಕೆಯಿಂದಲಷ್ಟೇ ಎಂಬ ಸ್ಪಷ್ಟ ನಿಲುವಿನೊಂದಿಗೆ ಕಳೆದ ಮೂರೂವರೆ ದಶಕದಿಂದ ಅಖಿಲ ಭಾರತ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದೆ. ಹಾಗೆಂದೇ ಪ್ರತಿ ಸಮ್ಮೇಳನವನ್ನೂ ಅಂಥಹ ಒಂದು ವಿಶಾಲ ಘೋಷಣೆಗಳ ಜೊತೆ ಮಹಿಳಾ ವಿಷಯಗಳನ್ನು ಸಮಗ್ರೀಕರಿಸಿ ನಡೆಸುತ್ತದೆ ಮತ್ತು ತನ್ನ ಮುಂದಿನ ಅವಧಿಗೆ ತನ್ನ ಕಾರ್ಯಕರ್ತರ ಪಡೆಯನ್ನು ಸಜ್ಜುಗೊಳಿಸುತ್ತದೆ. 11ನೇ ರಾಷ್ಟ್ರೀಯ ಮತ್ತು 9 ನೇ ರಾಜ್ಯ ಸಮ್ಮೇಳನದ ಘೋಷವಾಕ್ಯ ದೇಶದ ಸಂವಿಧಾನದ ಮೂಲ ಆಶಯವಾದ "ಸಮಾನತೆ ಮತ್ತು ಸಹಬಾಳ್ವೆ". ಇದಕ್ಕೆ ಧಕ್ಕೆ ತರುವ, ಇದರ ವಿರುದ್ಧವಾಗಿ ನಡೆದುಕೊಳ್ಳುವ ಎಲ್ಲ ವ್ಯಕ್ತಿ ಶಕ್ತಿಗಳನ್ನು ದೇಶದ ಎಲ್ಲ ಜೀವ ಪರ ಜನವಿಭಾಗಗಳ ಸಹಕಾರ ಸಹಯೋಗದೊಂದಿಗೆ ನಿಶ್ಯಕ್ತಗೊಳಿಸಲು ಮಹಿಳಾ ಸಮೂಹಕ್ಕೆ ಕರೆಕೊಡುವ ನಿಟ್ಟಿನಲ್ಲಿ ಈ ಸಮ್ಮೇಳನ ನಡೆದಿದೆ. ಒಟ್ಟಾರೆ ಸಮಾಜದ ಮೂಲ ಗುಣವಾಗಿ ಎಲ್ಲರ ಬದುಕಿನಲ್ಲಿ ಅಂತರ್ಗತವಾಗಿ ಪ್ರವಹಿಸಬೇಕಾದ ಈ ಆಶಯಗಳ ಜೊತೆಯೇ ಬದುಕಲು ಅತೀವ ಅಗತ್ಯವಾದ ಜೀವ ಜಲ – ನೀರು, ಇದನ್ನು ರಕ್ಷಿಸುವ, ಎಲ್ಲರಿಗೂ ದೊರಕುವಂತೆ ಮಾಡುವ ಭೂಮಿಯನ್ನು ಬರಮುಕ್ತಗೊಳಿಸುವ ಆಶಯವನ್ನೂ ಮುಂದಿಟ್ಟುಕೊಂಡು ಮೂರು ದಿನಗಳ ಸಮ್ಮೇಳನ ಕೋಲಾರದಲ್ಲಿ ಯಶಸ್ವಿಯಾಗಿ ನಡೆದಿದೆ.

ಕರ್ನಾಟಕದ ಹಲವು ಜಿಲ್ಲೆಗಳು ಬರಪೀಡಿತ ಜಿಲ್ಲೆಗಳು. ನೀರಾವರಿ ಜಿಲ್ಲೆಯೆನಿಸಿಕೊಂಡಿದ್ದ ಮಂಡ್ಯ, ಮಳೆಯ ತವರು ಮಲೆನಾಡು ಕೂಡ ಈ ಬಾರಿ ಮಳೆ ಕೊರತೆಯಿಂದ ನಲುಗುತ್ತಿದೆ. ಸಮ್ಮೇಳನ ನಡೆದ ಕೋಲಾರವಂತೂ ಬರಗಾಲದ ನಾಡೇ ಆಗಿಬಿಟ್ಟಿದೆ. ಅತಿ ಹೆಚ್ಚು ಕೆರೆಗಳನ್ನು ಹೊಂದಿ, ಒಂದು ಕಾಲದಲ್ಲಿ ಕೆರೆಗಳು ತುಂಬಿ ತುಳುಕುತ್ತಿದ್ದವಂತೆ ಎಂದು ಕಥೆ ಹೇಳುವಂತೆ ಈ ನಾಡಾಗಿದೆ. ನಮ್ಮ ನೆಲೆ ನಮ್ಮ ಕೆರೆ ನಮ್ಮ ಕಾಲುವೆಗಳನ್ನು ರಕ್ಷಿಸುವ ಜವಾಬ್ದಾರಿಯಿಂದ ಸ್ಥಳೀಯ ಆಡಳಿತ, ಸರ್ಕಾರಗಳು ವಿಫಲರಾದಾಗ ಅವರನ್ನು ಎಚ್ಚರಿಸುವ, ಸಾಮಾಜಿಕ ಹೊಣೆಗಾರಿಕೆಯನ್ನು ಅರ್ಥಮಾಡಿಸುವ ನಾಗರೀಕರ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸುವ ಕೆಲಸವನ್ನು ಕೈಗೆತ್ತಿಕೊಳ್ಳಲು ಸಂಘಟನೆ ನಿರ್ಧರಿಸಿತು. ಹಾಗೆಂದೇ ಕೋಲಾರದ ಕೆರೆ ಕಲ್ಯಾಣಿಗಳನ್ನು ರಕ್ಷಿಸುವ ಘೋಷಣೆಯನ್ನು ಸಮ್ಮೇಳನದ ಸ್ಥಳಿಯ ಘೋಷಣೆಯಾಗಿ ನೀಡಲಾಯಿತು. ಮತ್ತು ಕೋಟ್ಯಾಂತರ ಕೂಲಿಕಾರರ ಬದುಕಿಗೆ ಕಿಂಚಿತ್ ನೆರವು ನೀಡಬಹುದಾದ ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕಾನೂನನ್ನು ಸಮರ್ಪಕವಾಗಿ ಬಳಸಿ ಕೆರೆ ಕಾಲುವೆಗಳ ಹೂಳೆತ್ತುವ, ಮನೆಗೊಂದು ಸಸಿ ನೆಟ್ಟು ಹಸಿರು ಕೋಲಾರ ಮಾಡುವ ಕನಸು ಬಿತ್ತಲಾಯಿತು.



ದೇವಿ ಖಜಾಂಚಿ, ವಿ. ಗೀತಾ ಅಧ್ಯಕ್ಷರು, ಗೌರಮ್ಮ ಪ್ರಧಾನ ಕಾರ್ಯದರ್ಶಿ

ಜಿಲ್ಲೆಯ ಪ್ರಗತಿಪರ ಲೇಖಕರು, ಚಿಂತಕರು, ಶಿಕ್ಷಕರು, ದಲಿತ ಚಳುವಳಿಗಳ ಮುಂದಾಳುಗಳು, ಜನಪರ ಸಂಘಟನೆಗಳು, ಕಾರ್ಮಿಕ ಚಳುವಳಿಗಳ ಪ್ರತಿನಿಧಿಗಳನ್ನೊಳಗೊಂಡ ಸ್ವಾಗತ ಸಮಿತಿ ಹಗಲಿರುಳೂ ಶ್ರಮಿಸಿ ಉತ್ತಮ ಸಮ್ಮೇಳನ ನಡೆಯಿತು.

ಸಮ್ಮೇಳನದ ಉದ್ಘಾಟನಾ ಮೆರವಣಿಗೆ ಮತ್ತು ಬಹಿರಂಗ ಸಭೆ ಮುಂದಿನ ಎರಡು ದಿನ ನಡೆಯಲಿರುವ ಸಮ್ಮೇಳನದ ಕಲಾಪಗಳ ಮುನ್ನುಡಿಯಾಯಿತು. ಕೋಲಾರದ ನೂರಾರು ಹಳ್ಳಿಗಳಿಂದ ಬಂದ ಸಾವಿರಾರು ಮಹಿಳೆಯರು ಸಮ್ಮೇಳನಕ್ಕಾಗಿಯೇ ಸಿದ್ಧಪಡಿಸಿದ ಸಮವಸ್ತ್ರ ಧರಿಸಿ ಪಟ್ಟಣದುದ್ದಕ್ಕೂ ಘೋಷಣೆಗಳ ಮೂಲಕ ಸಾಗಿ ಬಂದಾಗ ಜನ ಅಚ್ಚರಿಯಿಂದ ಇಕ್ಕೆಲಗಳಲ್ಲಿ ನೋಡುತ್ತ ನಿಂತರು. ದೇಶದ ಐಕ್ಯತೆ ಸಮಗ್ರತೆಯನ್ನುಳಿಸುವ, ಕೋಮುವಾದವನ್ನು ಮೆಟ್ಟುವ, ಕೆರೆ ಕಾಲುವೆಗಳನ್ನು ಉಳಿಸುವ ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಧಿಕ್ಕಾರ ಹೇಳುವ ಘೋಷಣೆಗಳನ್ನು ಕೂಗುತ್ತ ಬಂದ ಮಹಿಳಾ ಸಾಗರಕ್ಕೆ ದಾರಿಯುದ್ದಕ್ಕೂ ವಿದ್ಯಾರ್ಥಿ,ಯುವಜನ ಕಾರ್ಮಿಕ ರೈತ ಸಂಘಟನೆಗಳು ಹೂ ಎರಚಿ ಆತ್ಮೀಯ ಸ್ವಾಗತ ನೀಡಿದರು. ಜನವಾದಿಯ ರಾಜ್ಯ ಮುಖಂಡರ ನೇತೃತ್ವದಲ್ಲಿ ಪ್ರಾರಂಭವಾದ ಮೆರವಣಿಗೆಗೆ ಜನಪದ ಕಲಾವಿದರ ಪ್ರಾರಂಭವಾದ ಮೆರವಣಿಗೆಗೆ ಜನಪದ ಕಲಾವಿದರ ನೃತ್ಯ ಕುಣಿತಗಳಿಂದ ಮೆರಗುಗಟ್ಟಿತ್ತು. ದೆಹಲಿಯಿಂದ ಬಂದ ರಾಷ್ಟ್ರೀಯ ನಾಯಕಿ ಬೃಂದಾ ಕಾರಟ್ ಮೆರವಣಿಗೆಯ ಜೊತೆ ಹೆಜ್ಜೆ ಹಾಕಿ ಇಡೀ ಮೆರವಣಿಗೆಗೆ ಹೊಸ ಉತ್ಸಾಹ ತುಂಬಿದರು.

ವಿಧವೆಯರ ಬದಲು ಗೋವಿಗೆ ಪಿಂಚಣಿ!

ಬಹಿರಂಗ ಸಭೆಯನ್ನುದ್ದೇಶಿಸಿ ಉದ್ಘಾಟನಾ ಭಾಷಣ ಮಾಡಿದ ಕಾಮ್ರೇಡ್ ಬೃಂದಾ ಕಾರಟ್ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನವಿರೋಧೀ ನೀತಿಗಳನ್ನು ತೀವ್ರವಾಗಿ ಖಂಡಿಸಿದರು.

'ಬೇಟಿ ಬಚಾವ್ ಬೇಟಿ ಪಡಾವ್' ಎನ್ನುವ ಮೋದಿ ನಿಜವಾದ ಅರ್ಥದಲ್ಲಿ ಮಹಿಳೆಯರ ಅಭಿವೃದ್ದಿಗೆ ಏನೂ ಮಾಡು ತ್ತಿಲ್ಲ. ಎಡ ಪಕ್ಷಗಳ ಬೆಂಬಲದೊಂದಿಗೆ ಆಡಳಿತ ನಡೆಸಿದ ಯು.ಪಿ.ಎ. ಒಂದರ ಅವಧಿಯಲ್ಲಿ ಎಡಪಕ್ಷಗಳ ಒತ್ತಾಯದಿಂದಾಗಿ ಬಂದ ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು ಬಲಹೀನಗೊಳಿಸಲು ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪ್ರಯತಿಸುತ್ತಿದೆ. ಬಜೆಟ್ ನಲ್ಲಿ ಅದಕ್ಕೆ ಮೀಸಲಿಡುವ ಹಣವನ್ನು ಕಡಿತ ಮಾಡಿದ್ದಲ್ಲದೇ ಈಗ ಕೇಂದ್ರ ಸರ್ಕಾರವೇ ಕೂಲಿಕಾರರ ಖಾತೆಗೆ ನೇರವಾಗಿ ಸಂದಾಯಮಾಡುತ್ತದೆ ಎಂದು ನಿಯಮ ತಂದಿದೆ. ರಾಷ್ಟ್ರವ್ಯಾಪೀ ರೇಗಾ ಅಡಿ ಕೆಲಸ ಮಾಡಿದ ಕೂಲಿಕಾರರಿಗೆ ಸಂದಾಯವಾಗಬೇಕಾದ ಬಾಕಿ ಇರುವ ಹಣ ಸುಮಾರು 6861 ಕೋಟಿ ರೂ. ಗಳಾಗಿದ್ದು ಮೋದಿಯವರ ಅಪ್ಪನ ಹಣವಲ್ಲ ಇದು. ಜನರ ತೆರಿಗೆಯಿಂದ ಜನರಿಗೇ ಸೇರಬೇಕಾದ ಅಧಿಕಾರಯುಕ್ತ ಕೂಲಿಯನ್ನು ಕೊಡದೇ ಸತಾಯಿಸುತ್ತಿರುವುದರ ಬಗ್ಗೆ ಕಿಡಿಕಾರಿದರು. ಹಾಗೆಯೇ ಕರ್ನಾಟಕದಲ್ಲಿ ಬಾಕಿ ಇರುವ ಕೂಲಿ ಹಣ 415 ಕೋಟಿ ರೂಪಾಯಿಗಳಾಗಿದ್ದು ಅದರಲ್ಲಿ ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ವಿವಿಧ ಜಿಲ್ಲೆಗಳಲ್ಲಿ ಕೆಲಸ ಮಾಡಿದ ಹಣವೂ ಸೇರಿದೆ.

ಬಡವರ ಬಗ್ಗೆ ಮೊಸಳೆ ಕಣ್ಣೀರು ಸುರಿಸುವ ಮೋದಿ ರಾಜ್ಯದಲ್ಲಿ ದಲಿತರ ಮೇಲಿನ ದೌರ್ಜನ್ಯ ಮೇರೆ ಮೀರಿದೆ. ಸತ್ತ ಹಸುವಿನ ಚರ್ಮ ಸುಲಿದರೆಂಬ ಕಾರಣಕ್ಕೆ ದಲಿತ ಯುವಕರ ಮೇಲೆ ನಡೆಸಿದ ದೌರ್ಜನ್ಯವನ್ನು ನೋಡಿದರೆ ಹಿಂದುತ್ವದ ಹೆಸರಿನಲ್ಲಿ ನಡೆಸುತ್ತಿರುವ ಕ್ರೌರ್ಯವೇನೆಂಬುದು ಅರ್ಥವಾಗುತ್ತದೆ. ಈಗ ಗುಜರಾತಿನಲ್ಲಿ ದಲಿತರು ಸತ್ತ ಪ್ರಾಣಿಗಳನ್ನು ಎತ್ತುವುದಿಲ್ಲ, ಚರ್ಮ ಸುಲಿಯುವುದಿಲ್ಲವೆಂದು ಹೋರಾಟ ನಡೆಸುತ್ತಿದ್ದಾರೆ. ಜನವಾದಿ ಅದನ್ನು ಬೆಂಬಲಿಸುತ್ತದೆ ಎಂದರು. ದೇಶದ ರೈತರು ಜನಸಾಮಾನ್ಯರು ಮೋದಿಯಿಂದ ಅಥವಾ ಅವರ ಗೂಂಡಾ ಪರಿವಾರದಿಂದ ಗೋರಕ್ಷಣೆ–ಯ ಪಾಠ ಕಲಿಯಬೇಕಿಲ್ಲ. ಈ ಸಭೆಯಲ್ಲಿರುವ ಬಹುತೇಕ ಎಲ್ಲ ಮಹಿಳೆಯರೂ ಗೋ ಪಾಲಕರು. ಮೋದೀ ಮತ್ತು ಅವರ 'ಹಿಂದುತ್ವ'ದ ವಾರಸುದಾರರು ಯಾವತ್ತಾದರು ಒಂದು ಗೋವಿಗೆ ಹುಲ್ಲು ಹಾಕಿದ್ದಾರಾ, ಅದರ ಗಂಜಲ ಬಾಚಿದ್ದಾರಾ? ನಮ್ಮ ಮಹಿಳೆಯರಿಗೆ ಈ ಕೆಲಸವನ್ನು ಅವರಿಂದ ಕಲಿಯಬೇಕಿರುವ ಅಗತ್ಯವಿಲ್ಲ. ಗೋರಕ್ಷಣೆಯ ಹೆಸರಿನಲ್ಲಿ ಕೋಟ್ಯಾಂತರ ವೆಚ್ಚ ಮಾಡುತ್ತಿರುವ

ಪುಟ 10 ಕ್ಕೆ



ಆರ್.ಎಸ್.ಎಸ್. ಮುಕ್ತ ಭಾರತಕ್ಕಾಗಿ ಸಶಕ್ತ ಮಹಿಳಾ ಚಳುವಳಿ ಬೆಳೆಯಲಿ........

ಪುಟ 9 ರಿಂದ


ಇವರು ಹಿಂದುತ್ವದ ಹೆಸರಿನಲ್ಲಿ ದೇಶದ ಶಾಂತಿ ಮತ್ತು ಐಕ್ಯತೆಯನ್ನು ಕದಡುತ್ತಿದ್ದಾರೆ. ಗೋವುಗಳನ್ನು ಕಾಪಾಡುವ ಲಕ್ಷಾಂತರ ಮಹಿಳೆಯರಿಗೆ ವಿಧವಾ ವೇತನ, ವೃದ್ಧಾಪ್ಯ ವೇತನಗಳನ್ನು ನೀಡದ ಇವರು ಗೋವುಗಳಿಗೆ ಪಿಂಚಣಿ ನೀಡಲು ಹೊರಟಿದ್ದಾರೆ ಎಂದು ವ್ಯಂಗ್ಯವಾಡಿದರು. ಗೋವಿನ ಸಂತತಿಯ ನಿಜವಾದ ರಕ್ಷಣೆಯ ಯಾವುದೇ ಕೆಲಸವನ್ನು ಇವರು ಮಾಡುತ್ತಿಲ್ಲ. ಬದಲಿಗೆ ಗೋ ಹೆಸರಿನ ರಾಜಕೀಯ ಮಾಡಿ ಹಿಂದುತ್ವದ ಹೆಸರಿನಲ್ಲಿ ದೇಶ ಒಡೆಯುತ್ತಿದ್ದಾರೆಂದು ಆರೋಪಿಸಿದರು.

ಹಿಂದೂ ಧರ್ಮದ ವಿರುದ್ಧ ನಾವಿಲ್ಲ. ಜನರ ನಂಬಿಕೆಗನುಗುಣವಾಗಿ ಯಾವ ಧರ್ಮವನ್ನು ಪಾಲಿಸುವ ಪಾಲಿಸದಿರುವ ಹಕ್ಕು ಜನರಿಗಿದೆ. ಆದರೆ ಹಿಂದುತ್ವ ವಾದದ ಹೆಸರಿನಲ್ಲಿ ದೇಶದ ಸಾಮರಸ್ಯಕ್ಕೆ ಧಕ್ಕೆ ತರುತ್ತಿರುವವರೇ ದೇಶದ್ರೋಹಿಗಳು ಎಂದ ಅವರು ಕನ್ನಡದ ನಟಿ ಮತ್ತು ಮಾಜಿ ಸಂಸದೆ ರಮ್ಯಾ ಹೇಳಿದ ಮಾತುಗಳಲ್ಲಿ ಯಾವುದೇ ತಪ್ಪಿಲ್ಲ. ಅವರ ವಿರುದ್ಧ ಎ.ಬಿ.ವಿ.ಪಿ ನಡೆಸುತ್ತಿರುವ ಹೋರಾಟ ಗೂಂಡಾಗಿರಿಯಾಗಿದೆ ಎಂದರು ಮತ್ತು ರಮ್ಯಾರವರನ್ನು ಜನವಾದಿ ಮಹಿಳಾ ಸಂಘಟನೆ ಬೆಂಬಲಿಸುತ್ತದೆ ಎಂದರು. ಅಮ್ನೆಸ್ಟಿ ಇಂಟರ್ ನ್ಯಾಷನಲ್ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಿದ್ದನ್ನು ಅವರು ವಿರೋಧಿಸಿ ರಾಜ್ಯದ ಕಾಂಗ್ರೆಸ್ ಸರ್ಕಾರ ಕೋಮುವಾದೀ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಬೇಕಾದ ರಾಜಕೀಯ ದೃಢತೆ ತೋರುತ್ತಿಲ್ಲ. ಹಾಗಾಗಿಯೇ ರಾಜ್ಯದಲ್ಲಿ ಎ.ಬಿ.ವಿ.ಪಿ ಯಂಥಹ ಸಂಘಟನೆಗಳು ದಾಂಧಲೆ ನಡೆಸುತ್ತಿದ್ದು ಸರ್ಕಾರ ಅವರ ತಾಳಕ್ಕೆ ಕುಣಿದು ವಿದ್ಯಾರ್ಥಿಗಳ ಮೇಲೆ ದೇಶದ್ರೋಹದ ಕೇಸ್ ದಾಖಲಿಸುತ್ತಿದೆ. ಭಾರತ್ ಮಾತಾ ಕೀ ಜೈ ಎನ್ನುವ ಇವರು ಭಾರತದ ಮಹಿಳೆಯರಿಗೆ ಸಿಗುತ್ತಿದ್ದ ಅಲ್ಪ ಸ್ವಲ್ಪ ಸೌಲಭ್ಯಗಳನ್ನೂ ಕಿತ್ತುಕೊಂಡಿದೆ. ಆರ್.ಎಸ್.ಎಸ್ ಎನ್ನುವುದು ರಾಷ್ಟ್ರೀಯ ಸರ್ವನಾಶ ಸಮಿತಿಯಾಗಿದ್ದು ಇದು ಇಡೀ ದೇಶದಲ್ಲಿ ಒಡಕನ್ನು ಹುಟ್ಟುಹಾಕುತ್ತಿದೆ ಎಂದರು.

ಬೆಲೆ ಏರಿಕೆಯ ಬಿಸಿ ಎಲ್ಲ ವಿಭಾಗಗಳನ್ನು ಸುಡುತ್ತಿದೆ. ರಾಜ್ಯ ಕೇಂದ್ರ ಸರ್ಕಾರಗಳಿಗೆ ಇದರ ಪರಿವೆ ಇಲ್ಲ ಎಂದ ಅವರು ಜನಪರ ಪರ್ಯಾಯ–ಕ್ಕೆ ಉದಾಹರಣೆಯಾಗಿ ಪಕ್ಕದ ಕೇರಳ ರಾಜ್ಯವನ್ನು ಉದಾಹರಿಸಿದರು. ಕಳೆದ ಚುನಾವಣೆಯಲ್ಲಿ ಗೆದ್ದು ಬಂದ ಎಡ ರಂಗ ಸರ್ಕಾರ ತಕ್ಷಣವೇ ಮಾವೆಳ್ಳಿ ಸ್ಟೋರ್ಸ್‌ಗಳನ್ನು ತೆರೆದು ಜನರಿಗೆ ಕಡಿಮೆ ದರದಲ್ಲಿ ಧಾನ್ಯ ಕಾಳು ಬೇಳೆಗಳನ್ನು ಪೂರೈಸುತ್ತಿದೆ ಎಂದರು. ಕರ್ನಾಟಕದಲ್ಲಿ ತೊಗರೀ ಬೇಳೆ 180 ರೂ.ಗಳಾದರೆ ಪಕ್ಕದ ಕೇರಳದಲ್ಲಿ 84 ರೂ.ಗಳಿಗೆ ಸರ್ಕಾರದ ಕ್ರಮದಿಂದಾಗಿ ಸಿಗುತ್ತಿದೆ. ಮೋದಿಯ ದರ್ಬಾರಿನಲ್ಲಿ ಬೇಳೆ ಇಲ್ಲದೇ ಸಾಂಬಾರ್ ಮಾಡುವುದನ್ನು ಜನ ಕಲಿಯಬೇಕಾಗಿದೆ ಎಂದರು. ಗೋವಿನ ಹೆಸರಿನಲ್ಲಿ ರಾಜಕೀಯ ಮಾಡಿ ಜನರ ಬಡತನವನ್ನು ಲೇವಡಿ ಮಾಡುತ್ತಿರುವ ಸರ್ಕಾರಕ್ಕೆ ಧಿಕ್ಕಾರವಿರಲಿ ಎಂದ ಅವರು ಮಹಿಳಾ ಸಂಘಟನೆ ಇದರ ವಿರುದ್ಧ ಸಶಕ್ತ ಹೋರಾಟ ರೂಪಿಸಲಿದೆ ಎಂದರು.

ಬಿ.ಜೆ.ಪಿ ಸರ್ಕಾರಕ್ಕೆ ದೇಶದ ಮನುಷ್ಯರಿಗಿಂತ ಹಸು ದೊಡ್ಡದಾಗಿದ್ದು ದೇಶವನ್ನೇ ಭಕ್ಷಣೆ ಮಾಡುತ್ತಿದೆ ಎಂದು ಜನವಾದಿ ಕರ್ನಾಟಕ ರಾಜ್ಯ ಉಪಾಧ್ಯಕ್ಷೆ ಕೆ. ನೀಲಾ ದೂರಿದರು. ಅಭಿವೃದ್ಧಿಯ ಹೆಸರಿನಲ್ಲಿ ಓಟು ಗಳಿಸಿ ಈಗ ಆರ್ಥಿಕ ಮುಗ್ಗಟ್ಟು ಹೆಚ್ಚಾದಂತೆಲ್ಲ ತನ್ನ ಕೋಮುವಾದೀ ಫ್ಯಾಸಿಷ್ಟ್ ಅಜೆಂಡಾವನ್ನು ಹರಿಬಿಟ್ಟು ಜನರ ಮಧ್ಯೆ ಒಡಕುಂಟುಮಾಡುತ್ತಿದೆ. ಜನವಾದಿ ಮಹಿಳಾ ಸಂಘಟನೆ ಇದರ ವಿರುದ್ಧ ನಿರಂತರ ಹೋರಾಟ ರೂಪಿಸುತ್ತದೆ ಎಂದರು.

ಸಮ್ಮೇಳನದ ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾದ ಪ್ರಗತಿಪರ ಚಿಂತಕ ಬರಹಗಾರ ಲಕ್ಷ್ಮೀಪತಿ ಕೋಲಾರ ಮಾತನಾಡಿ ಭಾರತ ಮಾತೆ, ಮಾತೃಭೂಮಿ ಎಂದು ಕರೆಯುವ ನಮ್ಮ ಭಾರತದ ಸಮಾಜದಲ್ಲಿ ಇತಿಹಾಸ ಪುರಾಣ ಎಲ್ಲದರಲ್ಲೂ ನಿರಂತರವಾಗಿ ಮಹಿಳೆಯರಿಗೆ ದ್ರೋಹ ಬಗೆಯಲಾಗುತ್ತಿದೆ. ತ್ರಿಮೂರ್ತಿಗಳಲ್ಲಿ ಒಬ್ಬರೂ ಮಹಿಳೆಯರಿಲ್ಲ, ವೇದ ಉಪನಿಷತ್ ಪುರಾಣಗಳನ್ನು ರಚಿಸಿದವರೆಲ್ಲ ಗಂಡಸರೇ, ಜಗತ್ತಿನ ಯಾವ ಧರ್ಮದ ಸಂಸ್ಥಾಪಕರೂ ಹೆಂಗಸರಲ್ಲ, ಜೈನ ಧರ್ಮದ ಒಬ್ಬ ತೀರ್ಥಂಕರರೂ ಮಹಿಳೆಯಲ್ಲ, ಮಣ್ಣು ನೀರು ಅಗ್ನಿ ಪ್ರಕೃತಿಯನ್ನು ಹೆಣ್ಣಿಗೆ ಹೋಲಿಸುತ್ತಾರೆ ಆದರೆ ಅವರಿಗೆ ಹಣ, ಅಧಿಕಾರ ಘನತೆ ಅಂತಸ್ತು ಕೊಡಲು ನಿರಾಕರಿಸುತ್ತಾರೆ. ಪುರುಷರ ದಾರ್ಷ್ಟ್ಯವನ್ನು ವಿರೋಧಿಸುವುದೆಂದರೆ ಪರಿಸರವನ್ನು ಗೌರವಿಸಿದಂತೆ ಎಂದರು. ಸಮ್ಮೇಳನ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರು ಪ್ರಗತಿ ಪರ ಚಿಂತಕರೂ ಆದ ಎಂ.ವಿ.ನಾರಾಯಣ ಸ್ವಾಮಿ ಮಾತನಾಡಿ ಸಶಕ್ತ ಸಂಘಟನೆಯ ಅವಶ್ಯಕತೆಯ ಬಗ್ಗೆ ಹೇಳಿದರು. ಕೋಲಾರದ ಬರ ನೀಗಿಸಲು ಕೆರೆ ಕಾಲುವೆಗಳನ್ನು ಉಳಿಸುವ ಕೆಲಸಕ್ಕೆ ಮುಂದಾಗಬೇಕೆಂದು ಕರೆ ನೀಡಿದರು.



ಹೋರಾಟಗಾರರ ಅಭಿನಂದನೆ

ಬೃಹತ್ ಬಹಿರಂಗ ಸಭೆಯ ನಂತರ ಉತ್ಸಾಹೀ ಪ್ರತಿನಿಧಿಗಳು ಸಂಘಟನೆಯ ಧ್ವಜ ಹಾರಿಸಿ ಹುತಾತ್ಮರಿಗೆ ಗೌರವ ಸಮರ್ಪಿಸುವ ಮೂಲಕ ಸಮ್ಮೇಳನಕ್ಕೆ ಅಧಿಕೃತ ಚಾಲನೆ ನೀಡಲಾಯಿತು. ಸಂಘಟನೆ ಪಾಲಿಸಿಕೊಂಡು ಬಂದ ಹೋರಾಟಗಾರರ ಅಭಿನಂದನೆಯ ಕಾರ್ಯಕ್ರಮದಲ್ಲಿ ಈ ಸಮ್ಮೇಳನ ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಟ ಮಾಡಿ 16 ವರ್ಷ ಜೈಲು ವಾಸ ಅನುಭವಿಸಿದ ಕಾಮ್ರೇಡ್ ಆರ್.ಶ್ರೀನಿವಾಸ್ ಮತ್ತು ರಾಜೇಶ್ವರಿ, ರಾಘವೇಶ್ವರನಿಂದ ವಂಚನೆಗೊಳಗಾಗಿ ಅತ್ಯಾಚಾರದ ವಿರುದ್ಧ ಹೋರಾಡುತ್ತಿರುವ ಪ್ರೇಮಲತಾ ದಿವಾಕರ ಶಾಸ್ತ್ರಿ, ರೇಗಾ ಅಡಿಯಲ್ಲಿ ಕೆರೆಗೆ ನೀರು ತುಂಬಿಸಿದ ಮಂಡ್ಯ ಜಿಲ್ಲೆಯ ವರದೇವಿ, ಕಲ್ಬುರ್ಗಿಯ ನಂದಾ ಮಂಗೊಂಡಿ ಮತ್ತು ಚಂದಮ್ಮ ಗೋಳಾ ಹಾಗೂ ಹಾಸನದಲ್ಲಿ ಜಾತಿ ದೌರ್ಜನ್ಯದ ವಿರುದ್ಧ ಹೋರಾಡುತ್ತಿರುವ ಸಿಗರನಹಳ್ಳಿಯ ತಾಯಮ್ಮ ಮತ್ತು ಪದ್ಮಮ್ಮರವರನ್ನು ಅಭಿನಂದಿಸಲಾಯಿತು. ಅಭಿನಂದನೆ ಸ್ವೀಕರಿಸಿ ಮಾತನಾಡಿದ ಆರ್.ಶ್ರೀನಿವಾಸ್ ತಾನು ಜೈಲಿಗೆ ಹೋಗಿದ್ದು 16 ವರ್ಷ ಸೆರೆವಾಸ ಅನುಭವಿಸಿದ್ದು ದೊಡ್ಡ ತ್ಯಾಗವೇನಲ್ಲ. ಇದು ಸಂಘರ್ಷದ ಬದುಕಿನ ಭಾಗ. ಪ್ರಜಾಸತ್ತಾತ್ಮಕ ಚಳುವಳಿಗಳು ಗಟ್ಟಿಯಾಗಿ ಬೆಳೆದಾಗ ಹಲವು ಸಮಸ್ಯೆಗಳಿಗೆ ಪರಿಹಾರ ಪಡೆಯಲು ಸಾಧ್ಯವೆಂದು ಬಲಿಷ್ಟ ಮಹಿಳಾ ಚಳುವಳಿ ಕಟ್ಟಿ ಬೆಳೆಸಲು ಕರೆ ನೀಡಿದರು.

ಅಭಿನಂದನೆಗೆ ಉತ್ತರವಾಗಿ ಪ್ರೇಮಲತಾ ದಿವಾಕರ್ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪರವರ 'ಯಾವ ಹಾಡು ಹಾಡಲಿ ಯಾವ ಹಾಡಿನಿಂದ ನಿಮಗೆ ನೆಮ್ಮದಿಯನು ನೀಡಲಿ' ಕವನವನ್ನು ಅರ್ಥಗರ್ಭಿತವಾಗಿ ಹಾಡಿದರು.

ಬಡವರಾಗಿ ಮತ್ತು ದಲಿತರಾಗಿ ಹುಟ್ಟಿದ ಕಾರಣದಿಂದಲೇ ತಾವು ಎದುರಿಸುತ್ತಿರುವ ಅಸ್ಪ್ರಶ್ಯತೆ, ದೌರ್ಜನ್ಯಗಳನ್ನು ತಾಯಮ್ಮ ಸಿಗರನಹಳ್ಳಿಯ ಹೋರಾಟದ ನೋವಿನ ಕಥೆಯನ್ನು ಎಳೆ ಎಳೆಯಾಗಿ ಬಿಚ್ಚಿಟ್ಟರು. ಜನವಾದಿಯಂಥಹ ಸಂಘಟನೆಯ ಬೆಂಬಲವಿದ್ದರೆ ತಾವು ಯಾವುದಕ್ಕೂ ಅಂಜದೇ ಅಳುಕದೇ ಹೋರಾಟವನ್ನು ಮುನ್ನಡೆಸುತ್ತೇವೆಂದು ಹೇಳಿದರು.

ಕಲ್ಬುರ್ಗಿ ಮತ್ತು ಮಂಡ್ಯ ಜಿಲ್ಲೆಯಲ್ಲಿ ರೇಗಾ ಮೂಲಕ ಕೆರೆಗಳ ಹೂಳೆತ್ತಿ ನೀರು ತಂದ ಬಗೆಯನ್ನು ನಂದಾ ಮಂಗೊಂಡಿ ಮತ್ತು ವರದೇವಿ ವಿವರಿಸಿ ಹೇಳುತ್ತಿದ್ದರೆ ಪ್ರತಿನಿಧಿಗಳು ತಮ್ಮ ಜಿಲ್ಲೆಯಲ್ಲಿ ಇದನ್ನು ಹೇಗೆ ಜಾರಿ ಮಾಡುವುದೆಂಬ ಲೆಕ್ಕಾಚಾರಕ್ಕೆ ಶುರುಮಾಡಿದ್ದರು.

ಪರಿಸರ ಪ್ರಜ್ಞೆಯ ವಿಶೇಷ ಗೋಷ್ಠಿ

ಜನವಾದಿಯೇ ಹೊಸತು, ಸಮ್ಮೇಳನ ಹೊಸತು ಮಹಿಳಾ ಚಳುವಳಿಯಲ್ಲಿ ಹಲವು ವರ್ಷಗಳ ಅನುಭವ ಹೀಗೆ ಮಿಶ್ರ ಪ್ರತಿನಿಧಿಗಳನ್ನು ಹೊಂದಿದ್ದ ಸಮ್ಮೇಳನದ ಪ್ರತಿನಿಧಿಗಳು ವೇದಿಕೆಗೆ ಬಂದು ಮಾತನಾಡುವಾಗ ತಮ್ಮ ನೋವು, ಸಾಧನೆಗಳು, ಸಮಸ್ಯೆಗಳು ಅದನ್ನು ಅವರು ಬಿಡಿಸಿಕೊಳ್ಳುವ ರೀತಿ, ಸಂಘಟನೆ ಬೆಳೆಸಲು ಇರುವ ಸಾಧ್ಯತೆ ಸಮಸ್ಯೆಗಳ ಬಗ್ಗೆ ಹಲವು ಆಯಾಮಗಳು ತೆರೆದುಕೊಳ್ಳುತ್ತಿದ್ದವು.

ಇಡೀ ಸಮಾಜವನ್ನು ಆವರಿಸಿರುವ ಕೋಮುವಾದ, ಜಾಗತೀಕರಣದ ಅಪಾಯಗಳು, ಮಹಿಳೆಯರ ಮೇಲಿನ ದೌರ್ಜನ್ಯ ಅತ್ಯಾಚಾರಗಳ ಬಗ್ಗೆ ವರದಿ ವಿಸ್ತ್ರತವಾಗಿ ಚರ್ಚಿಸಿದರೆ, ಮೂರನೇ ದಿನ ಪರಿಸರ ಪ್ರಜ್ಞೆಯ ನೆಲೆಯಲ್ಲಿ ಮೂರು ವಿಶೇಷ ಗೋಷ್ಟಿಗಳನ್ನು ನಡೆಸಲಾಯಿತು. ಭಾರತ ಜ್ಞಾನ ವಿಜ್ಞಾನ ಸಮಿತಿ ರಾಜ್ಯ ಸಮಿತಿಯ ನೆರವಿನಿಂದ ನಡೆಸಿದ ಗೋಷ್ಟಿಗಳಲ್ಲಿ ಪರಿಸರ. ನೀರು, ಮತ್ತು ಕಸ ನಿರ್ವಹಣೆಗಳ ಕುರಿತು ವಿಶೇಷ ಉಪನ್ಯಾಸಗಳನ್ನು ನಡೆಸಲಾಯಿತು. ಉಪಯುಕ್ತ ಟಿಪ್ಪಣಿಗಳೊಂದಿಗೆ ನಡೆದ ಗೋಷ್ಟಿಗಳ ಆಧಾರದಲ್ಲಿ ಮುಂದಿನ ದಿನಗಳಲ್ಲಿ ಜಿಲ್ಲೆಗಳಲ್ಲಿ ಈ ವಿಷಯಗಳ ಆಧಾರದಲ್ಲಿ ಕಮ್ಮಟಗಳನ್ನು ನಡೆಸುವ ಮತ್ತು ಜೀವ ಸಂಕುಲಗಳ ಉಳಿವಿಗಾಗಿ ಪರಿಸರ ಸಂರಕ್ಷಣೆಯ ಭಾಗವಾಗಿ ಜಲ, ಕಸ ನಿರ್ವಹಣೆಗಳ ಆಂದೋಲನಗಳನ್ನು ನಡೆಸಲು ತೀರ್ಮಾನಿಸಲಾಯಿತು.

'ಜಲವೇ ಜೀವನ, ಜೀವನಕ್ಕಾಗಿ ಉದ್ಯೋಗ ಖಾತ್ರಿ' ಆಂದೋಲನ

ಸಮ್ಮೇಳನದ ವೀಕ್ಷಕರಾಗಿ ಕೇಂದ್ರ ಸಮಿತಿಯಿಂದ ಬಂದ ಕರ್ನಾಟಕ ರಾಜ್ಯದ ಮೇಲುಸ್ತುವಾರಿ ಜವಾಬ್ದಾರಿಯನ್ನೂ ಹೊತ್ತಿರುವ ಯು. ವಾಸುಕಿಯವರು ಮಾತನಾಡುತ್ತ ಸಂಘಟನೆಯಲ್ಲಿ ಸದಸ್ಯತ್ವದ ಪ್ರಾಮುಖ್ಯತೆ, ಹಿಂದಿನ ವರ್ಷ ನೋಂದಾಯಿಸಿದ ಸದಸ್ಯರನ್ನು ನವೀಕರಣಗೊಳಿಸುತ್ತಲೇ ಹೊಸ ಸದಸ್ಯತ್ವವನ್ನೂ ವರ್ಷದಿಂದ ವರ್ಷಕ್ಕೆ ಹೆಚ್ಚಿಸ ಬೇಕು. ಆಗ ಮಾತ್ರ ಬಲಿಷ್ಟ, ಸಶಕ್ತ ಸಂಘಟನೆಯನ್ನು ಕಟ್ಟಲು ಸಾಧ್ಯವೆಂದರು. ಮಹಿಳೆಯರ ಬದುಕಿನ ಸ್ಥಿತಿ ಗತಿಯನ್ನು ಉತ್ತಮಗೊಳಿಸುವತ್ತ ನಿರಂತರವಾಗಿ ಶ್ರಮಿಸುತ್ತಿರುವ ಜನವಾದಿ ಬಿ.ಜೆ.ಪಿ ಸರ್ಕಾರವನ್ನು ಯಾಕೆ ವಿರೋಧಿಸುತ್ತದೆ ಎಂದು ವಿವರಿಸಿದರು. ಬಿ.ಜೆ.ಪಿ ಸರ್ಕಾರ ಅನುಸರಿಸುವ ಮೂಲಭೂತವಾದಿ ಧೋರಣೆ ಮಹಿಳೆಯರ ವಿರೊಧವಾಗಿಯೇ ಯಾವಾಗಲೂ ಇರುತ್ತದೆ. ಮಹಿಳಾ ಸಮಾನತೆಯ ಕಲ್ಪನೆಗಳನ್ನು ಮೂಲದಲ್ಲಿಯೇ ಒಪ್ಪದ ಅವರು ಮಹಿಳೆಯರನ್ನು ಚೌಕಟ್ಟಿನಲ್ಲಿ ಬಂಧಿಸಿಡಲು ಸದಾ ಪ್ರಯತ್ನಿಸುತ್ತಾರೆ. ಇದರ ಜೊತೆಯೇ ಆರ್ಥಿಕ ನೆಲೆಯಲ್ಲಿ ಕೂಡ ಕಾಂಗ್ರೆಸ್ ಸರ್ಕಾರಕ್ಕಿಂತ ಭಿನ್ನವಲ್ಲದ ಬಗ್ಗೆ ವಿವರಿಸುತ್ತ ವರ್ಷದಿಂದ ವರ್ಷಕ್ಕೆ ಜನ ಕಲ್ಯಾಣ ಯೋಜನೆಗಳಿಗೆ ಹಣ ಕಡಿತ ಮಾಡುತ್ತಿರುವುದು, ರೇಗಾ ದಂತಹ ಯೋಜನೆಗಳನ್ನು ದುರ್ಬಲಗೊಳಿಸಲು ಎಲ್ಲ ಕ್ರಮ ಕೈಗೊಳ್ಳುತ್ತಿರುವುದನ್ನು ಉದಾಹರಿಸಿದರು. ಪ್ರಜಾಪ್ರಭುತ್ವದ ಕಗ್ಗೊಲೆಯಾಗುತ್ತಿರುವುದನ್ನು ಅವರು ಹರ್ಯಾಣಾದ ಅಸೆಂಬ್ಲಿಯಲ್ಲಿ ಆಗ ತಾನೇ ನಡೆದ ಘಟನೆಯೊಂದನ್ನು ವಿವರಿಸಿದರು. ಹರ್ಯಾಣಾದ ಅಸೆಂಬ್ಲಿಯಲ್ಲಿ ಜೈನ ದಿಗಂಬರ ಮುನಿಯೊಬ್ಬರನ್ನು ಆಹ್ವಾನಿಸಿ ಸಭಾಧ್ಯಕ್ಷರಿಗಿಂತ ಉನ್ನತ ಆಸನದಲ್ಲಿ ಕುಳ್ಳಿರಿಸಿ ಅವರಿಂದ ಪ್ರವಚನ ಕೊಡಿಸಿರುತ್ತಾರೆ. ಅವರು ಧರ್ಮ ಎನ್ನುವುದು ಗಂಡನಿದ್ದಂತೆ ಮತ್ತು ರಾಜಕೀಯ ಹೆಂಡತಿಯಂತೆ, ಪತಿಯ ಮಾತನ್ನು ಪತ್ನಿ ಕೇಳಬೇಕು ಎಂಬುದು ನಮ್ಮ ಪರಂಪರೆಯೆಂದು ವ್ಯಾಖ್ಯಾನಿಸಿದ ಆಕ್ಷೇಪಾರ್ಹ ಮಾತುಗಳನ್ನು ಆಡಿರುವುದನ್ನು ಜನವಾದಿ ಮಹಿಳಾ ಸಂಘಟನೆ ಖಂಡಿಸುತ್ತದೆ. ಇದು ಬಿ.ಜೆ.ಪಿ.ಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲವೆಂದು ಸ್ಪಷ್ಟವಾಗುತ್ತದೆ. ಎಂದರು. ಮಹಿಳೆಯರು ಸ್ವತಂತ್ರ ಸ್ವಾಭಿಮಾನಿಗಳಾಗಿ ಬದುಕುವುದನ್ನು ಆರ್.ಎಸ್.ಎಸ್ ಒಪ್ಪುವುದಿಲ್ಲ. ಆರ್.ಎಸ್.ಎಸ್.ನ ಸೂಚನೆಯಂತೆ ಮೋದಿ ಸರ್ಕಾರ ಹೆಣ್ಣುಮಕ್ಕಳ ಹಕ್ಕುಗಳನ್ನು ಮೊಟಕುಗೊಳಿಸಲು ಎಲ್ಲ ಪ್ರಯತ್ನ ನಡೆಸುತ್ತಿದೆ ಎಂದರು.

ಸಂಘಟನೆಯ ಮುಂದಿನ ಕಾರ್ಯಸೂಚಿಯಾಗಿ ಸಮ್ಮೇಳನದ ಕರೆಯಾಗಿ 'ಜಲವೇ ಜೀವನ, ಜೀವನಕ್ಕಾಗಿ ಉದ್ಯೋಗ ಖಾತ್ರಿ' ಹೆಸರಿನಲ್ಲಿ ಆಂದೋಲನಗಳನ್ನು ಕೈಗೆತ್ತಿಕೊಳ್ಳಲು ಕರೆ ನೀಡಲಾಯಿತು. ಜಿಲ್ಲಾ ಮಟ್ಟ ಗಳ ಕಾರ್ಯಾಗಾರಗಳನ್ನು ನಡೆಸಿ ಅಕ್ಟೋಬರ್ ಕೊನೆಯ ದೀಪಾವಳಿಯ ಹೊತ್ತಿಗೆ ನೀರು ಮತ್ತು ಉದ್ಯೋಗ ಖಾತ್ರಿಯ ಕೆಲಸಕ್ಕೆ ಘಟಕಗಳಲ್ಲಿ ಮಹಿಳೆಯರನ್ನು ಸಜ್ಜುಗೊಳಿಸಲು ತೀರ್ಮಾನಿಸಲಾಯಿತು. ಉದ್ಯೋಗ ಖಾತ್ರಿ ಕಾಯ್ದೆಯನ್ನು ದುರ್ಬಲಗೊಳಿಸುವ ಕೇಂದ್ರ ಸರ್ಕಾರದ ಸಂಚನ್ನು ವಿಫಲಗೊಳಿಸುವ ಪ್ರಚಾರ ನಡೆಸಬೇಕೆಂದು ತೀರ್ಮಾನಿಸಲಾಯಿತು.

ಮುಂದಿನ ಅವಧಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ವಿ. ಗೀತಾರವರು ಅಧ್ಯಕ್ಷರಾಗಿ ಮುಂದುವರೆದರೆ ಸಂವಿಧಾನದ ನಿಯಮದಂತೆ ಮೂರು ಅವಧಿಯನ್ನು ಪೂರೈಸಿದ ಕೆ.ಎಸ್.ಲಕ್ಷ್ಮಿ ಮತ್ತು ಸುನಂದಾ ರವರ ಸ್ಥಾನದಲ್ಲಿ ಗೌರಮ್ಮ ರವರನ್ನು ಪ್ರಧಾನ ಕಾರ್ಯದಶಿಯಾಗಿಯೂ, ದೇವಿಯವರನ್ನು ಖಜಾಂಚಿಯಾಗಿಯೂ ಸಮ್ಮೇಳನ ಸರ್ವಾನುಮತದಿಂದ ಆಯ್ಕೆ ಮಾಡಿತು. ಪ್ರಧಾನ ಕಾರ್ಯದರ್ಶಿಯಾಗಿ ಖಜಾಂಚಿಯಾಗಿ ಮತ್ತು ಉಪಾಧ್ಯಕ್ಷರಾಗಿ ಸಲ್ಲಿಸಿದ ಸೇವೆಯನ್ನು ಶ್ಲಾಘಿಸುತ್ತ ಕೆ.ಎಸ್.ಲಕ್ಷ್ಮಿ, ಸುನಂದಾ ಮತ್ತು ಕೆ.ಎಸ್.ಶಾರದಾ ರವರುಗಳನ್ನು ಪ್ರೀತಿಯಿಂದ ಅಭಿನಂದಿಸಲಾಯಿತು.

ಸಮಾರೋಪ ನುಡಿಗಳನ್ನಾಡಿದ ಸಂಘಟನೆಯ ಉಪಾಧ್ಯಕ್ಷರಲ್ಲೊಬ್ಬರಾದ ಡಾ.ಮೀನಾಕ್ಷಿ ಬಾಳಿ ಆರ್.ಎಸ್.ಎಸ್.ಮುಕ್ತ ಬಿ.ಜೆ.ಪಿ ಮುಕ್ತ ಭಾರತ ನಿರ್ಮಿಸಲು ಸಂಘಟನೆಯನ್ನು ಬಲಗೊಳಿಸಬೇಕೆಂದು ಕರೆ ಇತ್ತರು.

37 ಜನರ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಿದ ಸಮ್ಮೇಳನ ರಾಜ್ಯದಲ್ಲಿ ಪ್ರಬಲ ಮಹಿಳಾ ಸಂಘಟನೆಯ ಮೂಲಕ ಸಶಕ್ತ ಮಹಿಳಾ ಚಳುವಳಿಯನ್ನು ಬೆಳೆಸಲು ತೀರ್ಮಾನಿಸಿತು. ●

ಅಗಸ್ಟ್ 31ರಂದು ಭಾರತದ ಸಾಮಾಜಿಕ ಕಾರ್ಯಕರ್ತ ಬೆಜವಾಡ ವಿಲ್ಸನ್ ಮತ್ತು ಕರ್ನಾಟಕ ಸಂಗೀತಗಾರ ಟಿ.ಎಂ. ಕೃಷ್ಣ ಮ್ಯಾಗಸೆಸೆ ಪ್ರಶಸ್ತಿ ಸ್ವೀಕರಿಸಿದ್ದಾರೆ. ಈ ಸಂದರ್ಭದಲ್ಲಿ ಅವರ ಬಗ್ಗೆ ಕಿರು ಲೇಖನಗಳು:

ಸ್ವಚ್ಛ ಭಾರತ ಮಿಷನ್ ಪಾಯಿಖಾನೆಗಳನ್ನ ಸ್ವಚ್ಛಗೊಳಿಸೋರು ಯಾರು?: ಬೆಜವಾಡ ವಿಲ್ಸನ್

ಸಫಾಯಿ ಕರ್ಮಚಾರಿ ಆಂದೋಲನದ ರಾಷ್ಟ್ರೀಯ ಸಂಚಾಲಕರಾದ ಸಾಮಾಜಿಕ ಕಾರ್ಯಕರ್ತ ಬೆಜವಾಡ ವಿಲ್ಸನ್ ದೆಹಲಿಯ ಝಾಕಿರ ಹುಸೇನ್ ಕಾಲೇಜ್'ನಲ್ಲಿ ಜಾತೀಯತೆ ಮತ್ತು ತಾರತಮ್ಯ ವಿಷಯದ ಕುರಿತು ಉಪನ್ಯಾಸ ನೀಡುತ್ತಾ ಆಡಿದ ಮಾತುಗಳನ್ನು 'ದಿ ಹಿಂದೂ' ದೆಹಲಿ ಆವೃತ್ತಿ ಪ್ರಕಟಿಸಿದ್ದು, ಅದರ ಕನ್ನಡಾನುವಾದ ಇಲ್ಲಿದೆ:



(ಕೃಪೆ: ಮಾಧ್ಯಮ ನೆಟ್. ಕಾಂ)

ಮಲಬಾಚುವ ಪದ್ಧತಿಯನ್ನು ನಿರ್ಮೂಲನಗೊಳಿಸುವಲ್ಲಿ ಸರ್ಕಾರದ ಇಚ್ಛಾಶಕ್ತಿಯ ಕೊರತೆಯನ್ನು ಮ್ಯಾಗ್ಸೆಸ್ಸೆ ಪ್ರಶಸ್ತಿ ಪುರಸ್ಕೃತ ಬೆಜವಾಡ ವಿಲ್ಸನ್ ಪ್ರಶ್ನಿಸಿದ್ದಾರೆ. ಸ್ವಚ್ಛ ಭಾರತ ಮಿಷನ್ ಹೆಸರಿನ ಮಹತ್ವಾಕಾಂಕ್ಷೆಯ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿರುವ ಕೇಂದ್ರ ಸರ್ಕಾರ 20 ಕೋಟಿ ಹೊಸ ಪಾಯಿಖಾನೆಗಳ ನಿರ್ಮಾಣಕ್ಕೆ ಮುಂದಾಗಿದೆ. ಅವುಗಳನ್ನು ಸ್ವಚ್ಛ ಮಾಡೋರು ಯಾರು? ಎಂಬ ಪ್ರಶ್ನೆಯನ್ನೂ ಅವರು ಎತ್ತಿದ್ದಾರೆ.

ಈ ಪಾಯಿಖಾನೆಗಳನ್ನು ಸ್ವಚ್ಛಗೊಳಿಸಲು ಯಾವ ತಂತ್ರಜ್ಞಾನವನ್ನೂ ಅಭಿವೃದ್ಧಿ ಪಡಿಸಲಾಗಿಲ್ಲ. ಅದಕ್ಕಾಗಿ ಮತ್ತೆ ಮನುಷ್ಯರನ್ನೇ ಅವಲಂಬಿಸಬೇಕಾಗುತ್ತದೆ ಅನ್ನೋದು ವಿಲ್ಸನ್ ಚಿಂತನೆ. 'ಹೀರು ಕೊಳವೆಗಳನ್ನೇ ಸ್ಥಾಪಿಸದೆ ಮಲದ ತೊಟ್ಟಿಗಳನ್ನು ಶುಚಿಗೊಳಿಸೋದಾದರೂ ಹೇಗೆ?' ಎಂದು ಪ್ರಶ್ನಿಸಿರುವ ವಿಲ್ಸನ್, "ಕ್ರಯೋಜನಿಕ್ ಎಂಜಿನ್ನುಗಳನ್ನು ನಿರ್ಮಿಸಬಲ್ಲ, ಚಂದ್ರನ ಮೇಲೆ ರಾಕೆಟ್ಟುಗಳನ್ನು ಇಳಿಸಬಲ್ಲ ವೈಜ್ಞಾನಿಕ ಕ್ಷಮತೆಗಳಿಸಿಕೊಂಡಿರುವ ಇಂಡಿಯಾ ದೇಶಕ್ಕೆ ಮಾನವ ಮಲವನ್ನು ಮನುಷ್ಯರೇ ಬಳಿಯ ಬೇಕಿರುವ ಪರಿಸ್ಥಿತಿಯನ್ನು ಕೊನೆಗಾಣಿಸುವ ತಂತ್ರಜ್ಞಾನ ಕಂಡುಹಿಡಿಯಲು ಹಣ ಹೂಡುವ ಇಚ್ಛೆ ಇಲ್ಲ" ಎಂದುಆರೋಪಿಸಿದ್ದಾರೆ.

ಮಲಬಾಚುವವರ ಬಗ್ಗೆ ಸಮಾಜಕ್ಕೆ ಸರಿಯಾದ ಪರಿಚಯವನ್ನೇ ಮಾಡಿಸಲಾಗಿಲ್ಲ ಎನ್ನುವ ಅಂಶವನ್ನು ಒತ್ತಿ ಹೇಳಿದ ವಿಲ್ಸನ್, ಶಾಲಾಪುಸ್ತಕಗಳನ್ನು ನೆನೆಯುತ್ತಾ, "ಅಸ್ಪೃಶ್ಯತೆ ಕುರಿತು ಅಂಬೇಡ್ಕರ್ ಏನು ಹೇಳ್ತಾರೆ ಅಂತ ನಮ್ಮ ಶಾಲಾ ಪಠ್ಯಪುಸ್ತಕಗಳು ತಿಳಿಸಲಿಲ್ಲ. ಆದರೆ ಮತ್ತೊಬ್ಬರ ಮಲಬಳಿದು ಸಾಗಿಸುವ ಹೆಣ್ಣು ಮಕ್ಕಳನ್ನು ಮಕ್ಕಳ ಮಲ ತೊಳೆಯುವ ತಾಯಂದಿರಿಗೆ ಹೋಲಿಸಿದ ಗಾಂಧಿಯ ಮಾತುಗಳನ್ನು ಹೇಳುತ್ತವೆ. ಮತ್ತೊಬ್ಬರ ಮಲ ಬಳಿವ ಕೆಲಸಕ್ಕೆ ಒಂದು ಜನಾಂಗವನ್ನೇ ನೇಮಿಸಿ ಬಿಟ್ಟಿದ್ದೇವೆ. ಆ ಜನಾಂಗದ ಮಾನವ ಘನತೆ ಮಣ್ಣು ಪಾಲಾಗಿರುವ ಸಂಗತಿಯನ್ನು ಕನಿಷ್ಠ ಪಕ್ಷ ಹೌದೆಂದು ಗುರುತಿಸಲಾರದಷ್ಟು ನಾವು ಕ್ರೂರಿಗಳೂ ಅಮಾನುಷರೂ ಆಗಿದ್ದೇವೆ" ಎಂದಿದ್ದಾರೆ.

"ಭಯೋತ್ಪಾದಕ ದಾಳಿಗಳಿಗೆ ಬಲಿಯಾಗಿರುವುದಕ್ಕಿಂತ ನಾಲ್ಕು ಪಟ್ಟು ಹೆಚ್ಚು ಮಂದಿ ಮಲದ ಗುಂಡಿಗಳನ್ನು ಸ್ವಚ್ಛಮಾಡಲು ಇಳಿದು ಸತ್ತಿದ್ದಾರೆ ಭಾರತ ದೇಶದಲ್ಲಿ... ಆದರೆ ಭಯೋತ್ಪಾದನೆ ಎದುರಿಸಲು ಹೂಡಿರುವ ಅರ್ಧದಷ್ಟು ಸಮಯ ಸಂಪನ್ಮೂಲಗಳನ್ನು ಕೂಡ ಈ ಬಡಪಾಯಿಗಳ ಸಾವಿನ ಸಮಸ್ಯೆ ನಿವಾರಣೆಗೆ ಖರ್ಚು ಮಾಡಲು ನಮ್ಮ ಸರ್ಕಾರ ತಯಾರಿಲ್ಲ" ಎಂದು ವಿಲ್ಸನ್ ವಿಷಾದ ಪಟ್ಟಿದ್ದಾರೆ.

ಇಂಡಿಯಾ ಜಾತೀಯತೆ ಮತ್ತು ಪಿತೃ ಪ್ರಾಧಾನ್ಯಗಳೆಂಬ ಎರಡು ಮಹಾವೈರಸ್'ಗಳ ದಾಳಿಗೆ ಸಿಕ್ಕು ನರಳುತ್ತಿದೆ. ಆದರೆ ಯಾವೊಬ್ಬ ರಾಜಕಾರಣಿಗೂ ಈ ಬಗ್ಗೆ ಮುಕ್ತವಾಗಿ ಮಾತಾಡೋದು ಬೇಕಿಲ್ಲ ಎಂದಿರುವ ವಿಲ್ಸನ್, "ನಾವು ಕೇವಲ ಜಾತೀಯತೆ ಅಥವಾ ಕೇವಲ ಪಿತೃ ಪ್ರಧಾನ ವ್ಯವಸ್ಥೆಯ ಬಗ್ಗೆ ಮಾತಾಡೋದು ಸಾಧ್ಯವಿಲ್ಲ. ಪ್ರತಿಸಂಘರ್ಷದಲ್ಲೂ ಅವೆರಡನ್ನು ಒಟ್ಟಿಗೆ ಗುರಿಯಾಗಿಟ್ಟುಕೊಂಡು ಹೋರಾಡುವ ಅಗತ್ಯವಿದೆ" ಎಂದು ಕರೆ ನೀಡಿದ್ದಾರೆ.

"ಮಲಬಾಚುವ ಪಿಡುಗು ಇಂಡಿಯಾದ ಸಮಸ್ಯೆಗಳ ಪಟ್ಟಿಯಲ್ಲಿ ಅತ್ಯಂತ ಸಣ್ಣದಾಗಿರಬಹುದು, ಆದರೆ ಸ್ವಾತಂತ್ರ್ಯ ಪಡೆದು 70 ವರ್ಷಗಳನ್ನು ಪೂರೈಸಿರುವ ಒಂದು ರಾಷ್ಟ್ರವಾಗಿ ನಾವು ಇದನ್ನೇ ಈವರೆಗೆ ನಿರ್ವಹಿಸೋಕೆ ಸಾಧ್ಯವಾಗಿಲ್ಲ. ಅಂದಮೇಲೆ, ಮೂಲಭೂತವಾದದಂಥ ಮಹಾ ಸಮಸ್ಯೆಯನ್ನು ಹೇಗೆ ತಾನೆ ನಿಭಾಯಿಸಬಲ್ಲೆವು?" ಎಂದು ಪ್ರಶ್ನಿಸಿರುವ ವಿಲ್ಸನ್, "44%ರಷ್ಟು ಜನಸಂಖ್ಯೆ ಅಪೌಷ್ಟಿಕತೆಯಿಂದ ಸೊರಗಿರುವ ಸನ್ನಿವೇಶದಲ್ಲಿ ಜನ ಏನು ತಿನ್ನಬಾರದು ಎಂದು ಪ್ರಭುತ್ವಗಳು ಫರ್ಮಾನು ಹೊರಡಿಸುವ ವಿಪರ್ಯಾಸವನ್ನು ನಾವು ನೋಡುತ್ತಿದ್ದೇವೆ. ಒಂದು ದೊಡ್ಡಸಂಖ್ಯೆಯ ಸಮುದಾಯದ ಬಳಿತೊಡಲು ಸರಿಯಾದ ಬಟ್ಟೆಯೇ ಇಲ್ಲದಿರುವಾಗ ಇಂಥದನ್ನೇ ತೊಡಬೇಕು ಎಂದು ಆದೇಶ ನೀಡುವ ವಿಚಿತ್ರಕ್ಕೆ ಸಾಕ್ಷಿಯಾಗುತ್ತಿದ್ದೇವೆ. ನಮಗೆ ಇಷ್ಟ ಬಂದುದನ್ನು ಉಣ್ಣುವ ಸ್ವಾತಂತ್ರ್ಯವಿಲ್ಲದ, ಇಷ್ಟ ಬಂದುದನ್ನು ಉಡುವ ಸ್ವಾತಂತ್ರ್ಯವಿಲ್ಲದ, ಸಾಂವಿಧಾನಿಕ ಚೌಕಟ್ಟಿನಲ್ಲಿಯೇ ನಮಗನಿಸಿದ್ದನ್ನು ಆಡಲಾಗದ ಸನ್ನಿವೇಶದಲ್ಲಿ ನಾವಿದ್ದೇವೆ. ಹೀಗಿರುವಾಗ ಈ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆಯೆಂದರೆ ಏನರ್ಥ!?" ಎಂದೂ ಕೇಳಿದ್ದಾರೆ.

ಬೆಜವಾಡ ವಿಲ್ಸನ್ ಸಾಧನೆ (ಮ್ಯಾಗಸೆಸೆ ಪ್ರಶಸ್ತಿ ಪತ್ರದಿಂದ)

50 ವರ್ಷದ ಬೆಜವಾಡ ವಿಲ್ಸನ್ ತಮ್ಮ ಜೀವನದ 32 ವರ್ಷಗಳಷ್ಟು ದೀರ್ಘ ಕಾಲ, ಭಾರತದಲ್ಲಿರುವ ಕೈಯಿಂದ ಮಲ ಬಾಚುವ ಹೀನ ವ್ಯವಸ್ಥೆ ವಿರುದ್ಧ ತಮ್ಮ ಯುದ್ಧವನ್ನು ನೈತಿಕ ರೋಷ ಮಾತ್ರವಲ್ಲ ಸಾಮೂಹಿಕ ಸಂಘಟನೆಯ ಕೌಶಲ್ಯ ಬಳಸಿ ಹಾಗೂ ಭಾರತದ ಸಂಕೀರ್ಣ ಕಾನೂನು ವ್ಯವಸ್ಥೆಯೊಳಗೆ ಜಾಣ್ಮೆಯಿಂದ ಕೆಲಸ ಮಾಡಿದ್ದಾರೆ. ಅವರ ಸಫಾಯಿ ಕರ್ಮಚಾರಿ ಆಂದೋಲನ ಸಂಘಟನೆ ಭಾರತದ 500 ಜಿಲ್ಲೆಗಳಲ್ಲಿ 7 ಸಾವಿರ ಸದಸ್ಯರ ಜಾಲವಾಗಿ ಬೆಳೆದಿದೆ. ಭಾರತದ ಮಲ ಬಾಚುವ 6 ಲಕ್ಷ ಸಫಾಯಿ ಕರ್ಮಚಾರಿಗಳಲ್ಲಿ ಸುಮಾರು 3 ಲಕ್ಷ ಕರ್ಮಚಾರಿಗಳನ್ನು ಅವರು ವಿಮೋಚನೆಗೊಳಿಸಿದ್ದಾರೆ.

ಕೈಯಿಂದ ಮಲ ಬಾಚುವ ಹೀನ ವ್ಯವಸ್ಥೆಯನ್ನು ಕೊನೆಗೊಳಿಸಿ ದಲಿತರ ಜನ್ಮ ಸಿದ್ಧವಾದ ಮಾನವ ಘನತೆಯ ಹಕ್ಕನ್ನು ಅವರಿಗೆ ಪುನಃ ದೊರಕಿಸಲು ಒಂದು ತಳಸ್ಪರ್ಶಿ ಚಳುವಳಿಯ ನಾಯಕತ್ವ ವಹಿಸುವಲ್ಲಿ ಅವರು ತೋರಿಸಿರುವ ನೈತಿಕ ಶಕ್ತಿ ಹಾಗೂ ಅಗಾಧ ಕೌಶಲ್ಯವನ್ನು ಗುರುತಿಸಲಾಗಿದೆ.

ಟಿ.ಎಂ.ಕೃಷ್ಣ : ಸಾಂಸ್ಕೃತಿಕ ಎಲ್ಲೆಗಳನ್ನು ವಿಸ್ತರಿಸಿದ ಧೀಮಂತ

ಎಂ. ಜಿ. ವೆಂಕಟೇಶ್

ಸಾಂಸ್ಕೃತಿಕ ವಲಯಗಳನ್ನು ಬಲಪಂಥೀಯ ಚಿಂತನೆಗಳು ಆವರಿಸಿಕೊಂಡಿರುವಾಗ ವಿದ್ವಾನ್ ಟಿ.ಎಂ. ಕೃಷ್ಣರವರಿಗೆ ಮ್ಯಾಗಸೇಸೆ ಪ್ರಶಸ್ತಿ ಬಂದಿರುವುದು ಅರ್ಥಪೂರ್ಣ. ಈ ಸಂದರ್ಭದಲ್ಲಿ ಅವರ ಚಿಂತನೆಗಳು ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಅವರ ಕೊಡುಗೆಯ ಪರಿಚಯ ಮಾಡಿಕೊಳ್ಳುವ ಅಗತ್ಯವಿದೆ. ಟಿ. ಎಂ. ಕೃಷ್ಣ ಕರ್ನಾಟಕ ಸಂಗೀತ ಪ್ರಕಾರದ ಅಪ್ರತಿಮ ಸಂಗೀತಗಾರರು. ಇವರ ಆಸಕ್ತಿ ಬಹುಮುಖಿಯಾಗಿದ್ದು ತಮ್ಮ ಮೊನಚಾದ ಮಾತುಗಳಿಂದ, ತೀಕ್ಷ್ಣ ಮಾತುಕತೆಯಿಂದ ಜಡ್ಡುಗಟ್ಟಿರುವ ಸಮಾಜದಲ್ಲಿ ಸಂಚಲನ ಉಂಟು ಮಾಡಿದ್ದಾರೆ. ಬಲಪಂಥೀಯರನ್ನು, ಸಂಪ್ರದಾಯವಾದಿಗಳನ್ನು ಶಾಸ್ತ್ರೀಯ ಪರಂಪರೆ, ಸಂಸ್ಕೃತಿ ಮತ್ತು ಧರ್ಮ ಹೀಗೆ ಹಲವಾರು ವಿಚಾರಗಳಲ್ಲಿ ನೇರವಾದ ಮಾತುಗಳಿಂದ ಟಿ.ಎಂ. ಕೃಷ್ಣ ಮುಖಾಮುಖಿಯಾಗಿದ್ದಾರೆ.



1976ರಲ್ಲಿ ಹುಟ್ಟಿದ ಇವರು ಅವರು ನೆಹರುರವರ ಸಂಪುಟದಲ್ಲಿ ಹಣಕಾಸು ಸಚಿವರಾಗಿದ್ದ ಟಿ.ಟಿ. ಕೃಷ್ಣಮಾಚಾರಿಯವರ ಕುಟುಂಬಕ್ಕೆ ಸೇರಿದವರು. ಅವರು ಕಲಿತಿದ್ದು ಜಿಡ್ಡು ಕೃಷ್ಣಮೂರ್ತಿಯವರ ಶಾಲೆಯಲ್ಲಿ. ಸಹಜವಾಗಿ ಆ ದರ್ಶನದ ಪ್ರಭಾವವಿದೆ. ಅವರ ಕುಟುಂಬ ಸಂಗೀತ ಪ್ರೇಮಿಯಾಗಿತ್ತು. ಸಂಗೀತದಲ್ಲಿ ಅವರ ಅಪಾರ ಆಸಕ್ತಿ ಗುರುತಿಸಿ ಅವರ ಸಂಗೀತ ಅಭ್ಯಾಸ 6ನೇ ವಯಸ್ಸಿನಲ್ಲೇ ಆರಂಭವಾಯಿತು. ವಿದ್ವಾನ್ ಸೀತಾರಾಮ ಶರ್ಮ, ಚಂಗಲ್‌ಪೇಟೆ ರಂಗನಾಥನ್, ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್‌ರವರಂಥಹ ದಿಗ್ಗಜರಿಂದ ಸಂಗೀತ ಕಲಿತದ್ದರಿಂದ ಸಹಜವಾಗಿಯೇ ಶಾಸ್ತ್ರೀಯ ಸಂಗೀತವನ್ನೇ ಕಲಿತಿದ್ದರು. ಅವರು ತಮ್ಮ 12ನೇ ವಯಸ್ಸಿನಲ್ಲೇ ಮೊದಲ ಸಂಗೀತ ಕಚೇರಿ ಕೊಟ್ಟಿದ್ದರು. ಅಂದಿನಿಂದ ಅವರು ವಿದೇಶಗಳಲ್ಲಿ ಸೇರಿದಂತೆ 2 ಸಾವಿರಕ್ಕೂ ಹೆಚ್ಚು ಸಂಗೀತ ಕಚೇರಿಗಳನ್ನು ನಡೆಸಿದ್ದಾರೆ. ಅವರು ಹಲವು ಅಂತರ್‌ರಾಷ್ಟ್ರೀಯ ಸಂಗೀತ ಉತ್ಸವಗಳಲ್ಲಿ ಭಾಗವಹಿಸಿದ್ದು ಸಿಡ್ನಿ ಒಪೆರಾ, ಕೆನೆಡಿ ಸೆಂಟರ್ ನಂತಹ ಪ್ರತಿಷ್ಠಿತ ಸಂಗೀತ ಕೇಂದ್ರಗಳಲ್ಲಿ ಕಚೇರಿ ನಡೆಸಿದ್ದಾರೆ. ಅವರ 40ಕ್ಕೂ ಹೆಚ್ಚು ಸಂಗೀತ ಅಲ್ಬಮುಗಳು ಪ್ರಕಟಿತವಾಗಿವೆ. ಪ್ರತಿಭಾವಂತ ಯುವ ಸಂಗೀತಕಾರರಲ್ಲಿ ಒಬ್ಬರಾಗಿರುವ ಅವರ ಮಡದಿ ಸಹ ಒಬ್ಬ ಸಂಗೀತಕಾರ್ತಿ.



ಕಲಾವಿದರು ಅದರಲ್ಲೂ ಸಂಗೀತಗಾರರು ಬರೆಯುವುದು ಅಪರೂಪ. ಆದರೆ ಕೃಷ್ಣ ಇದಕ್ಕೆ ಅಪವಾದ. ಅವರು ಸಂಗೀತ, ಕ್ರಿಕೆಟ್ ರಾಜಕೀಯ ಮುಂತಾದ ಹಲವಾರು ವಿಷಯಗಳ ಬಗ್ಗೆ ಬರೆದಿದ್ದಾರೆ. ಹಲವಾರು ಪುಸ್ತಕಗಳನ್ನು ರಚಿಸಿದ್ದಾರೆ. ಅವರು ನಡೆಸಿರುವ ಕಾರ್ಯಾಗಾರಗಳು, ಸೋದಾಹರಣ ಭಾಷಣಗಳು ಅಸಂಖ್ಯ.

ಅವರಿಗೆ ಸಂದಿರುವ ಮ್ಯಾಗಸೇಸೆ ಪ್ರಶಸ್ತಿಯಲ್ಲಿ "ಸಮಾಜದ ಬದಲಾವಣೆಗಾಗಿ ಕಲಾತ್ಮಕ ಯಾಜಮಾನ್ಯವನ್ನು ಕಳಚಿ ಬರಹಗಾರನಾಗಿ ಭಾಷಣಕಾರನಾಗಿ, ಕಾರ್ಯಕರ್ತನಾಗಿ" ಅವರ ಕೊಡುಗೆಯನ್ನು ಗುರುತಿಸಿದೆ. ಆಚರಣೆಯಲ್ಲಿರುವ ಧರ್ಮ, ಭಾಷೆ, ಜಾತಿ, ಲಿಂಗ ಮುಂತಾದ ತಾರತಮ್ಯಗಳನ್ನು ವಿಮರ್ಶಿಸುತ್ತಾ, ಕರ್ನಾಟಕ ಸಂಗೀತಕ್ಕೆ ಎಲ್ಲ ಜಾತೀಯವರ, ಎಲ್ಲ ಸಮುದಾಯಗಳವರ ಕೊಡುಗೆಯಿರುವುದರಿಂದ ಎಲ್ಲರಿಗೂ ಸೇರಬೇಕಿದೆ ಎನ್ನುವುದು ಇವರ ಖಚಿತ ನಿಲುವು. ಇವರು 'ರಾಮನನ್ನು ಕುರಿತು ಹಾಡುವಾಗ ನಾನು ಕಲಾತ್ಮಕವಾಗಿ ರಾಮ ಶಬ್ದವನ್ನು ಪ್ರಸ್ತುತ ಪಡಿಸುವುದೇ ಹೊರತು ರಾಮನ ವಿಗ್ರಹ ಪೋಟೋ ಅಲ್ಲ' ಎಂದು ನೇರವಾಗಿ ಹೇಳಿ ಬಲ ಪಂಥೀಯರ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

ಟಿ.ಎಂ. ಕೃಷ್ಣ ಏನನ್ನುತ್ತಾರೆ?

ಅವರ ಬರಹಗಳಿಂದ ಆಯ್ದ ಕೆಲವು ಭಾಗಗಳನ್ನು ಕೊಡಲಾಗಿದೆ. ಅವು ಅವರ ಚಿಂತನೆಯನ್ನು ಪ್ರಖರವಾಗಿ ವ್ಯಕ್ತಗೊಳಿಸುತ್ತವೆ:

ಸಂಗೀತ ಮತ್ತು ಧಾರ್ಮಿಕ ನೆಲೆಗಟ್ಟು

ಕರ್ನಾಟಕದ ಸಂಗೀತವು ಭಕ್ತಿ ಸಂಗೀತದಿಂದ ಉಗಮಗೊಂಡಿತು. ಆದರೆ ನಿಧಾನವಾಗಿ ಅದು ಕಲಾ ಸಂಗೀತವಾಗಿ ಮಾರ್ಪಾಡಾಯಿತು. ಅದರ ವಸ್ತು ಮಾತ್ರ ಬದಲಾಗಲಿಲ್ಲ; ಪಾಶ್ಚಾತ್ಯ ಸಂಗೀತವೂ ಚರ್ಚ್ ಸಂಗೀತದಿಂದಲೇ ಉಗಮಗೊಂಡಿತು. ಆದರೆ ಕ್ರಮೇಣ ಅದರ ಸ್ವರೂಪ ಸಂಪೂರ್ಣ ಬದಲಾಯಿತು. ಅದೊಂದು ಸ್ವತಂತ್ರ ಕಲಾ ಪ್ರಕಾರವಾಯಿತು. ಆದರೆ ಕರ್ನಾಟಕ ಸಂಗೀತದಲ್ಲಿ ಹೀಗಾಗಲಿಲ್ಲ.

ಈ ಧಾರ್ಮಿಕ ಹಿನ್ನೆಲೆಯು ಇತರೆ ಸಮುದಾಯದ ಜನ ಕರ್ನಾಟಕ ಸಂಗೀತದ ಸಮೀಪಕ್ಕೆ ಬಾರದಂತೆ ಅವರನ್ನು ಈ ಕಲೆಯಿಂದ ಹೊರಗಿಟ್ಟಿದೆ. ಭಾರತದಲ್ಲಿ ಉಳಿದ ಕ್ಷೇತ್ರಗಳಲ್ಲಾಗುವಂತೆ ಸಂಗೀತಕ್ಕೆ ಪವಿತ್ರ ಎನ್ನುವ ಹಣೆಪಟ್ಟಿ ಹಚ್ಚಿ ಇದನ್ನೊಂದು ಧಾರ್ಮಿಕ

ಪುಟ 13 ಕ್ಕೆ

ಕಾರ್ಮಿಕರ, ರೈತರ ಆದಾಯ ಉತ್ತಮಗೊಳಿಸದ ಒಳ್ಳೆಯ ದಿನಗಳಲ್ಲಿ ಈಗ ಜಿಡಿಪಿ ಬೆಳವಣಿಗೆ ದರದಲ್ಲೂ ದಾಖಲೆ ಇಳಿಕೆ

ಇತ್ತೀಚೆಗೆ ಪ್ರಕಟವಾದ ಅಂಕಿ–ಅಂಶಗಳ ಪ್ರಕಾರ ಜಿಡಿಪಿ ಬೆಳವಣಿಗೆ ದರ ಎಪ್ರಿಲ್–ಜೂನ್ ತ್ರೈಮಾಸಿಕ ಅವಧಿಯಲ್ಲಿ 7.1%ಕ್ಕೆ ಇಳಿದಿದೆ. ಇದು ಕಳೆದ ಆರು ತ್ರೈಮಾಸಿಕಗಳಲ್ಲೇ ಅತಿ ಕಡಿಮೆ ಮಟ್ಟ ಎನ್ನಲಾಗಿದೆ. ಕಳೆದ ತ್ರೈಮಾಸಿಕದಲ್ಲಿ ಇದು 7.9% ಇತ್ತು. ಕಳೆದ ವರ್ಷದ ಈ ತ್ರೈಮಾಸಿಕದಲ್ಲಿ 7.5% ಇತ್ತು.

ಇದು ಮೋದಿ ಸರಕಾರ ತಂದ ಜಿಡಿಪಿಯ ಹೊಸ ಸರಣಿಯ ಪ್ರಕಾರ–ಹಳೆಯ ಸರಣಿಯ ಪ್ರಕಾರ ಇದು ಇನ್ನೂ ಕಳಮಟ್ಟಕ್ಕಿಳಿದಿದೆ ಎಂಬುದನ್ನು ಗಮನಿಸಬೇಕು. ಈ ತ್ರೈಮಾಸಿಕದಲ್ಲಿ ಸರಕಾರೀ ಖರ್ಚುಗಳ ಪ್ರಮಾಣ 18.8%ದಷ್ಟು ಹೆಚ್ಚಿದರೂ ಜಿಡಿಪಿ ಬೆಳವಣಿಗೆ ದರ ಇಳಿದಿರುವುದು ಜಿಡಿಪಿವಾಲಾಗಳೂ ತಲೆ ಕೆರೆದುಕೊಳ್ಳುವಂತೆ ಮಾಡಿದೆ.

ಒಟ್ಟು ನಿಗದಿತ ಬಂಡವಾಳ ನಿರ್ಮಾಣವೂ 1.1%ದಷ್ಟು ಇಳಿದಿದೆ, ಅಂದರೆ ಒಟ್ಟಾರೆಯಾಗಿ ಬಂಡವಾಳ ಹೂಡಿಕೆಗಳಲ್ಲಿ ಇಳಿಕೆಯಾಗಿದೆ. ಇದು ಕಳೆದ ತ್ರೈಮಾಸಿಕದಲ್ಲೂ ಇಳಿದಿತ್ತು, ಈಗ ಮತ್ತಷ್ಟು ಇಳಿದಿದೆ, ಅಂದರೆ ಆರ್ಥಿಕ ನಿಧಾನಗತಿಗೆ ಇಳಿಯುತ್ತಿದೆ.

ಕೈಗಾರಿಕಾ ಉತ್ಪಾದನೆಯ ಸೂಚ್ಯಂಕದಲ್ಲಿ ಕೇವಲ 0.6% ಹೆಚ್ಚಳವಾಗಿದೆ, ಸರಕು ತಯಾರಿಕಾ ವಲಯದಲ್ಲಂತೂ 18% ಇಳಿಕೆಯಾಗಿದೆ. ಕೃಷಿ ಉತ್ಪಾದನೆಯಲ್ಲಿಯೂ ಒಟ್ಟಾರೆ 1.5% ಎಚ್ಚಳ ಕಂಡರೂ ಅದು ಕೂಡ ಬಂದಿರುವುದು ಪಶು ಮತ್ತು ಮೀನು ಉತ್ಪಾದನೆಯಲ್ಲಿ ಹೆಚ್ಚಳದಿಂದಷ್ಟೇ, ಬೆಳೆಗಳ ಉತ್ಪನ್ನಗಳಲ್ಲಿ ವಾಸ್ತವವಾಗಿ ಇಳಿಕೆಯಾಗಿದೆ. ಗಣಿಗಾರಿಕೆಯಲ್ಲೂ 0.4% ಇಳಿಕೆಯಾಗಿದೆ.

ಈ ಎಲ್ಲದರ ನಡುವೆ ಜಿಡಿಪಿ ದರ 7.1%ವಾದರೂ ಹೆಚ್ಚಿದ್ದರೆ ಅದು ಉಳ್ಳವರ ಖಾಸಗಿ ಬಳಕೆಯಲ್ಲಿನ ಹೆಚ್ಚಳದಿಂದ ಮಾತ್ರ. ಆದ್ದರಿಂದ ಈ ಕಳಪೆ ಹೆಚ್ಚಳದ ಗುಣಮಟ್ಟವೂ ಕಳಪೆಯೇ, ಅಂದರೆ ಜನಸಾಮಾನ್ಯರ ದೃಷ್ಟಿಯಿಂದ ಅರ್ಥವಿಲ್ಲದ್ದು ಎಂಬುದನ್ನು ಇದು ಸೂಚಿಸುತ್ತದೆ ಎನ್ನುತ್ತಾರೆ ಆರ್ಥಿಕ ತಜ್ಞರು.

ಮೋದಿ ಸರಕಾರ ಸತತವಾಗಿ 'ಸುಗಮ ವ್ಯಾಪಾರ'ಕ್ಕೆ ಕ್ರಮಗಳನ್ನು ಕೈಗೊಳ್ಳುತ್ತಿದ್ದರೂ ರಾಷ್ಟ್ರೀಯ ಆರ್ಥಿಕ ಸಂಶೋಧನಾ ಮಂಡಳಿ (ಎನ್‌ಸಿಎಇಆರ್) ರೂಪಿಸಿರುವ 'ವ್ಯಾಪಾರ ವಿಶ್ವಾಸ ಸೂಚ್ಯಂಕ' ಜನವರಿ 2015ರಲ್ಲಿ 148.4 ಇದ್ದದ್ದು ಎಪ್ರಿಲ್ 2016ರಲ್ಲಿ 121.6ಕ್ಕೆ ಇಳಿದಿದೆ.

ಕೇವಲ ದೊಡ್ಡ ಬಂಡವಾಳಿಗರ ಪ್ರಯೋಜನದ ಮೇಲೆಯೇ ಗಮನ ಕೇಂದ್ರೀಕರಿಸುವ ಧೋರಣೆಗಳಿಂಥ ಆರ್ಥಿಕ ಗತಿಯನ್ನು ಎತ್ತರಿಸುವುದು ಸಾಧ್ಯವಿಲ್ಲ ಎಂಬುದನ್ನು ಇದು ಮತ್ತೆ ತೋರಿಸಿಕೊಡುತ್ತಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಈ ಅಂಕಿ–ಅಂಶಗಳನ್ನು ವಿಶ್ಲೇಷಿಸುತ್ತ ಹೇಳಿದ್ದಾರೆ. ಆರ್ಥಿಕ ವ್ಯವಸ್ಥೆಯಲ್ಲಿ ಬಳಕೆದಾರರ ಬೇಡಿಕೆ ಪ್ರಮಾಣ ಹೆಚ್ಚದೆ ಚಟುವಟಿಕೆಗಳು ಹೆಚ್ಚಲಾರವು. **ಬೇಡಿಕೆ ಪ್ರಮಾಣ ಹೆಚ್ಚಬೇಕಾದರೆ ಜನಗಳ ಕೊಳ್ಳುವ ಶಕ್ತಿ ಹೆಚ್ಚಬೇಕು,** ಅಂದರೆ ರೈತರಿಗೆ ಯೋಗ್ಯ ಪ್ರತಿಫಲ ಸಿಗಬೇಕು, ಅದಕ್ಕೆ ಕನಿಷ್ಟ ಬೆಂಬಲ ಬೆಲೆಗಳನ್ನು ಹೆಚ್ಚಿಸಬೇಕು, ಕೃಷಿ ಕೂಲಿಕಾರರಿಗೆ ಮತ್ತು ಇತರರಿಗೆ ಸರಿಯಾಗಿ ಕನಿಷ್ಟ ಕೂಲಿಯಾದರೂ ಸಿಗಬೇಕು, ಕಾರ್ಮಿಕರ ಶ್ರಮಕ್ಕೆ ತಕ್ಕ ಆದಾಯ ಸಿಗಬೇಕು. ಆದರೆ ಮೋದಿ ಸರಕಾರ ಇವಕ್ಕೆಲ್ಲ ಹಿಂದೇಟು ಹಾಕುತ್ತ ಬರುತ್ತಿದೆ ಎಂಬ ಸಂಗತಿಯತ್ತ ಅವರು ಗಮನ ಸೆಳೆಯುತ್ತಾರೆ.

ಉತ್ಪಾದನೆಯಲ್ಲಿ ಸ್ಥಗಿತತೆ, ಉದ್ಯೋಗ ನಿರ್ಮಾಣ ಇಲ್ಲ ಎಂಬ ವಾಸ್ತವತೆಯನ್ನು ಈ ಅಂಕಿ–ಅಂಶಗಳು ಬಿಂಬಿಸುತ್ತಿವೆ. ಈ ನಡುವೆ ತಮ್ಮ ಧೋರಣೆಗಳು 130 ಕೋಟಿ ಭಾರತೀಯರ ಮೇಲೆ ಗಂಭೀರ ದುಷ್ಪರಿಣಾಮ ಬೀರುವಂತಹ ಆರ್ಥಿಕ ನಿಧಾನಗತಿಯತ್ತ ದೇಶವನ್ನು ತಳ್ಳುತ್ತಿವೆ ಎಂಬುದನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಿರುವ ಸರಕಾರಂಅ ಅಬ್ಬರದ ಮಾತುಗಳಲ್ಲೇ ಮುಳುಗಿದೆ ಎಂದು ಯೆಚೂರಿ ಟಿಪ್ಪಣಿ ಮಾಡಿದ್ದಾರೆ.

ಜನಸಾಮಾನ್ಯರ ಆದಾಯಗಳನ್ನು ಹೆಚ್ಚಿಸಿ ಅವರ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸುವತ್ತ ಗಮನ ಹರಿಸದ ಸರಕಾರ, ಇನ್ನೊಂದೆಡೆಯಲ್ಲಿ ಹೆಚ್ಚೆಚ್ಚು ಸೆಸ್‌ಗಳನ್ನು ಹಾಕಿ, ಪೆಟ್ರೋಲ್, ಡೀಸೆಲ್ ದರಗಳನ್ನು ಹೆಚ್ಚಿಸಿ ಜನಗಳ ಕೊಳ್ಳುವ ಶಕ್ತಿಯನ್ನು ಮತ್ತಷ್ಟು ಇಳಿಸುತ್ತಿದೆ.

ಮತ್ತೆ ಡೀಸೆಲ್ ದರ ಏರಿಕೆ–ತರಕಾರಿಗಳ ಬೆಲೆಯೇರಿಕೆ

ಆಗಸ್ಟ್ 31ರಂದು ಪೆಟ್ರೋಲ್ ದರ ಲೀಟರಿಗೆ ರೂ.3.38 ಮತ್ತು ಡೀಸೆಲ್‌ಗೆ ರೂ.2.67ರಷ್ಟು ಮತ್ತೆ ಹೆಚ್ಚಿಸಲಾಗಿದೆ.

ಎರಡು ವರ್ಷಗಳ ಬರದ ನಂತರ ಈ ಬಾರಿ ತರಕಾರಿಗಳಲ್ಲಿ ಬಂಪರ್ ಬೆಳೆ ಬಂದಿದೆ. ಒಟ್ಟು ಉತ್ಪಾದನೆ 16.29 ಕೋಟಿ ಟನ್‌ನಿಂದ 16.65ಕೋಟಿ ಟನ್‌ಗೇರಿದೆ. ಆದರೂ ಇದರ ಪ್ರಯೋಜನ ಬೆಳೆಗಾರರಿಗೂ ದಕ್ಕಿಲ್ಲ, ಬಳಕೆದಾರರಿಗೂ ದಕ್ಕಿಲ್ಲ, ಅಂದರೆ ತರಕಾರಿಗಳ ಬೆಲೆಗಳಲ್ಲಿ ಭಾರೀ ಏರಿಕೆ ಮುಂದುವರೆದಿದೆ ಎಂದು 'ಮಿಂಟ್' ಪತ್ರಿಕೆ ವರದಿ ಮಾಡಿದೆ. ಇದಕ್ಕೆ ಕಾರಣ ಪೂರೈಕರ ವ್ಯವಸ್ಥೆಯಲ್ಲಿನ ಅಡೆ–ತಡೆಗಳು ಮತ್ತು ತರಕಾರಿಗಳನ್ನು ಕಾದಿಡುವ ವ್ಯವಸ್ಥೆಗಳಲ್ಲಿ ಇರುವ ಭಾರೀ ಕೊರತೆ, ಸರಕಾರ ಈ ಅಂಶದತ್ತ ಗಮನ ಹರಿಸುತ್ತಿಲ್ಲ ಎಂದು ಅದು ವಿಶ್ಲೇಷಿಸಿದೆ. ತರಕಾರಿಗಳಲ್ಲಿ ಸಾಮಾನ್ಯವಾಗಿ ಅತಿ ಹೆಚ್ಚು ಉತ್ಪಾದನೆಯ ಅವಧಿ ಮುಗಿದಿರುವುದರಿಂದ ಈ ವರ್ಷ ಅವುಗಳ ಬೆಲೆಗಳು ಇನ್ನಷ್ಟು ತೀವ್ರವಾಗಿ ಏರುವ ಸಾಧ್ಯತೆಯಿದೆ ಎಂದೂ ಅದು ವರದಿ ಮಾಡಿದೆ.



ಸಬ್ಸಿಡಿ ಆಹಾರಧಾನ್ಯ ಭಾರತದ ಎಲ್ಲ ಬಡವರಿಗೆ ತಲುಪುತ್ತಿಲ್ಲ –ಸುಪ್ರಿಂ ಕೋರ್ಟ್ ನೇಮಿತ ವಿಶೇಷ ಆಯುಕ್ತರುಗಳ ಟೀಕೆ

ಬಡವಾತಿಬಡವರಿಗೆ ಸಬ್ಸಿಡಿ ದರಗಳಲ್ಲಿ ಪ್ರತಿತಿಂಗಳು 35 ಕೆ.ಜಿ ಆಹಾರಧಾನ್ಯಗಳನ್ನು ಒದಗಿಸುವ 'ಅಂತ್ಯೋದಯ ಅನ್ನ ಯೋಜನಾ' (ಎಎವೈ)ದಲ್ಲಿ ಫಲಾನುಭವಿಗಳ ಸಂಖ್ಯೆ ರಾಜಸ್ತಾನ, ಝಾರ್ಖಂಡ, ಬಿಹಾರ, ಒಡಿಶ,ದಿಲ್ಲಿ ಮತ್ತು ಪಶ್ಚಿಮ ಬಂಗಾಲದಲ್ಲಿ ಕಡಿಮೆಯಾಗಿದೆ. ಇದು ಹಿಂದಿನ ಕೇಂದ್ರ ಸರಕಾರ ತಂದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಗೆ ವ್ಯತಿರಿಕ್ತವಾಗಿದೆ ಎಂದು ಸುಪ್ರಿಂ ಕೋರ್ಟ್ ನೇಮಿತ ವಿಶೇಷ ಆಯುಕ್ತರಾದ ಹರ್ಷ ಮಂದೆರ್ ಮತ್ತು ಎನ್‌ಸಿ ಸಕ್ಸೆನಾ ಈ ಆರು ರಾಜ್ಯಗಳ ಸರಕಾರಗಳ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದು ತಿಳಿಸಿದ್ದಾರೆ. ಈ ರೀತಿ ಮಾಡುವುದು ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತದೆಂದು ಅವರು ಎಚ್ಚರಿಸಿದ್ದಾರೆ ಎಂದು ವರದಿಯಾಗಿದೆ.

ಈ ಯೋಜನೆಯಲ್ಲಿನ ಮೇಲಣ ಮಿತಿಯ ಬಗ್ಗೆ ಗೊಂದಲದಿಂದಾಗಿ ಹೀಗಾಗಿದೆ ಎಂದಿರುವ ಆಯುಕ್ತರುಗಳು ಈ ಗೊಂದಲ ಉಂಟಾಗಿರುವುದು ಫಲಾನುಭವಿಗಳ ಸಂಖ್ಯೆಯನ್ನು ಇಳಿಸಿದ ಕೇಂದ್ರ ಸರಕಾರದ ಒಂದು ಅಧಿಸೂಚನೆಯಿಂದಾಗಿ ಎಂದೂ ಹೇಳಿದ್ದಾರೆ.

ಮನಬಂದಂತೆ ಈ ಯೋಜನೆಯ ಫಲವನ್ನು ನಿರಾಕರಿಸುವುದು ಸುಪ್ರಿಂ ಕೋರ್ಟಿನ ಆದೇಶ, ರಾಷ್ಟ್ರೀಯ ಆಹಾರ ಭದ್ರತಾ ಕಾನೂನು ಮತ್ತು ಫಲಾನುಭವಿಗಳ ಕಾನೂನು ಹಕ್ಕುಗಳ ಉಲ್ಲಂಘನೆಯಗುತ್ತದೆ ಎಂದೂ ಈ ಆಯುಕ್ತರುಗಳು ಎಚ್ಚರಿಸಿದ್ದಾರೆ ಎಂದು ವರದಿಯಾಗಿದೆ.

ಸಾರ್ವಜನಿಕ ಹಣದಿಂದ ಸುಸ್ತಿದಾರ ರಿಯಲ್ ಎಸ್ಟೇಟ್ ಕುಳಗಳನ್ನು ಪಾರು ಮಾಡುವ ಯೋಜನೆ?

ಹಣಕಾಸು ಸೇವೆಗಳ ಇಲಾಖೆ ಮತ್ತು ರಿಝರ್ವ್ ಬ್ಯಾಂಕ್ ರಿಯಲ್ ಎಸ್ಟೇಟ್ ವಲಯದ ಸುಸ್ತಿ ಸಾಲಗಳ ಬಗ್ಗೆ ಒಂದು ಸೂಕ್ತ ಏಕಕಾಲದ ಯೋಜನೆಯನ್ನು ರೂಪಿಸುತ್ತದೆ ಎಂದು ಗಣಕಾಸು ಉಲಾಖೆಯ ಫೇಸ್‌ಬುಕ್‌ನಲ್ಲಿ ಹೇಳಲಾಗಿದೆ. ಬ್ಯಾಂಕುಗಳು ಈ ವಲಯಕ್ಕೆ 3ಲಕ್ಷ ಕೋಟಿ ರೂ.ಗಳ ಸಾಲ ನೀಡಿದ್ದು ಅವುಗಳಲ್ಲಿ 45% ಸುಸ್ತಿಯಾಗಿವೆಯಂತೆ. ಅಂದರೆ ಸಾರ್ವಜನಿಕ ವಲಯದ ಬ್ಯಾಂಕುಗಳು ಈಗಾಗಲೇ ವಾಪಸು ಬರುವುದಿಲ್ಲವೆಂದು ಕಳೆದೆರಡು ವರ್ಷಗಳಲ್ಲಿ ಕೈಬಿಟ್ಟ 1.2ಲಕ್ಷ ಕೋಟಿರೂ. ಗಳ ಸಾಲಗಳನ್ನಲ್ಲದೆ ಸರಕಾರ ಇನ್ಯಾರನ್ನು ಪಾರು ಮಾಡಲು ಸಾರ್ವಜನಿಕ ಹಣವನ್ನು ಬಳಸುವ ಬಗ್ಗೆ ಯೋಚಿಸುತ್ತಿದೆ ಎಂದು ಸೀತಾರಾಮ್ ಯೆಚೂರಿಯವರು ಪ್ರಶ್ನಿಸಿದ್ದಾರೆ, ಇದನ್ನು ಒಪ್ಪಲು ಸಾಧ್ಯವಿಲ್ಲ, ಅದನ್ನು ಗುಟ್ಟಿನಲ್ಲಿ ಮಾಡಲು ಸಾಧ್ಯವಿಲ್ಲ ಎಂದಿರುವ ಅವರು ಜುಲೈ 7ರಂದು ಪ್ರಧಾನಿಗಳಿಗೆ ಬರೆದ ಪತ್ರದಲ್ಲಿ ಕೇಳಿರುವಂತೆ ಮೊದಲು ಬಾಕಿ ವಸೂಲಿಯಾಗಬೇಕು, ಆಮೇಲೆಯೇ ಅವರನ್ನೆಲ್ಲ ಪಾರು ಮಾಡುವ ಬಗ್ಗೆ ಯೋಚಿಸಬಹುದು ಎಂದು ಹೇಳಿರುವುದನ್ನು ನೆನಪಿಸಿದ್ದಾರೆ.

ಒಳ್ಳೆಯ ದಿನಗಳಲ್ಲಿ 'ದೇಶಪ್ರೇಮ': ಫ್ರಾನ್ಸ್, ಅಮೆರಿಕಾಗಳಲ್ಲಿ ಮಾದರಿಗಳ ಸೃಷ್ಟಿ!

ಇತ್ತೀಚೆಗೆ ನಮ್ಮ ರಕ್ಷಣಾಮಂತ್ರಿಗಳು ಬಹಳ ಸುದ್ದಿಯಲ್ಲಿದ್ದಾರೆ. ಕೆಲವು ದಿನಗಳ ಹಿಂದೆ ಅಮೀರ್ ಖಾನ್‌ರವರ 'ದೇಶದ್ರೋಹ'ದ ನೆನಪು ಮಾಡಿಕೊಟ್ಟ ಅವರು ನಮ್ಮ ನೆರೆದೇಶ ನರಕ ಎಂದು ಸರ್ಟಿಫಿಕೇಟ್ ಕೊಟ್ಟು 'ದೇಶಭಕ್ತಿ'ಯ ಹೊಸ ಮಾನದಂಡವನ್ನು ಪ್ರಸ್ತುತ ಪಡಿಸಿದರು. ಇದನ್ನು ಗಂಭೀರವಾಗಿ ತೆಗೆದುಕೊಂಡ ಅವರ ಪರಿವಾರದ ಕರ್ನಾಟಕದ ಹಿಂಬಾಲಕರು ಅಲ್ಲಿಗೆ ಭೇಟಿ ನೀಡಿ ಬಂದವರು ಆ ಸರ್ಟಿಫಿಕೇಟನ್ನು ಪ್ರಶ್ನಿಸುವ ಹೇಳಿಕೆ ನೀಡಿದಾಗ ಅವರ ಮೇಲೆ ಹರಿಹಾಯ್ದರು.

ಈ ವಾರ ಫ್ರಾನ್ಸ್ ದೇಶದ ರಕ್ಷಣಾ ಉದ್ದಿಮೆಯೊಂದು ನಮ್ಮ ನೌಕಾಪಡೆಗೆ ನಿರ್ಮಿಸಿ ಕೊಡುತ್ತಿರುವ ಸಬ್‌ಮೆರಿನ್ ಕುರಿತ ಮಾಹಿತಿ ಆಗಲೇ ಲೀಕ್ ಆಗಿದೆ, ಇದು ಭಾರತದ ರಕ್ಷಣೆಯಲ್ಲಿ ಈ ಸಬ್‌ಮೆರಿನ್‌ಗಳ ದಕ್ಷತೆಗೆ ಸಂಚಕಾರ ಒಡ್ಡ ಬಹುದು ಎಂಬ ಸುದ್ದಿ ಪ್ರಕಟವಾಗಿದೆ. ಈ ಲೀಕ್ ಫ್ರಾನ್ಸಿನಲ್ಲೇ ನಡೆದಿರುವ ಸಂಭವವೇ ಹೆಚ್ಚು ಎಂದೂ ಹೇಳಲಾಗಿದೆ.

ನಿಜವಾದ ದೇಶಪ್ರೇಮಿಗಳಿಗೆ ಆತಂಕ ಉಂಟು ಮಾಡಬಹುದಾಗಿದ್ದ ಈ ಸುದ್ದಿಯ ಬಗ್ಗೆ ಹೆಚ್ಚೇನೂ ಆತಂಕ ಪಡಬೇಕಾಗಿಲ್ಲ ಎಂದು ದೇಶದ ರಕ್ಷಣಾ ವ್ಯವಹಾರಗಳ ನಿರ್ವಹಣೆಯ ಹೊಣೆಯನ್ನೂ ಹೊತ್ತ ಈ 'ದೇಶಭಕ್ತ' ಮಂತ್ರಿಗಳು ಹೇಳಿದರು! ಆದರೆ ಅತ್ತ ದೇಶದ ನೌಕಾ ಪಡೆಯ ಮುಖ್ಯಸ್ಥರು ಇದೊಂದು ಬಹಳ ಗಂಭೀರವಾದ ಸಂಗತಿ, ಈ ಬಗ್ಗೆ ತನಿಖೆ ನಡೆಸಬೇಕಾಗಿದೆ ಎಂದರು!


ಈ ಹಿನ್ನೆಲೆಯಲ್ಲಿ ರಕ್ಷಣಾ ಮಂತ್ರಿಗಳ 'ದೇಶಭಕ್ತಿ'ಯ ನಿಜವಾದ ಅರ್ಥವೇನು ಎಂದು ಪ್ರಜಾಪ್ರಭುತ್ವವಾದಿಗಳು ತಲೆಕೆಡಿಸಿಕೊಳ್ಳುತ್ತಿರುವಂತೆಯೇ ಈ ಮಹಾನುಭಾವರು ವಾಶಿಂಗ್ಟನ್‌ಗೆ ಹಾರಿ ಹೋಗಿ ಅಲ್ಲಿ ನಮ್ಮ ಮಿಲಿಟರಿ ನೆಲೆಗಳನ್ನು ಜಗತ್ತಿನಲ್ಲೆಲ್ಲ ದಾದಾಗಿರಿ ತೋರಿಸುವ ಅಮೆರಿಕಾದ ಸಶಸ್ತ್ರ ಪಡೆಗಳಿಗೆ ತೆರೆದು ಕೊಡುವ ಒಪ್ಪಂದಕ್ಕೆ ಸಹಿ ಹಾಕಿ ಅತ್ಯಂರ ಬಲಿಷ್ಟ ದೇಶದ ರಕ್ಷಣಾ ಮಂತ್ರಿಯೊಂದಿಗೆ ಕೈಕುಲುಕಿದೆ ಎಂದು ಹೆಮ್ಮೆ ಪಟ್ಟುಕೊಳ್ಳುತ್ತಿದ್ದಾರೆ.

"ಈ ಮಕ್ಕಳಾಟ ಬೇಡ, ಭಾರತ ಎಂದೂ ಅಮೆರಿಕಾ ಇರುವ ಒಂದು ಚಿತ್ರದಲ್ಲಿ ಸ್ಟಾರ್ ಆಗಲು ಸಾಧ್ಯವಿಲ್ಲ. ಈ ಒಪ್ಪಂದಗಳು ಒಂದೆರಡು ಚಪ್ಪಾಳೆಗಳನ್ನು ಪಡೆಯಬಹುದಾದ ಸೈಡ್‌ಕಿಕ್‌ನ ರೋಲ್‌ಗೆ, ಅಥವ ನೇಪಥ್ಯದ ಪಾತ್ರಕ್ಕೆ, ಆಡಿಶನ್‌ಗಳಂತೆ ಅಷ್ಟೆ" ಎಂಬ ಒಬ್ಬ ರಕ್ಷಣಾ ವಿಶ್ಲೇಷಕರ ಟಿಪ್ಪಣಿ ನಮ್ಮ ರಕ್ಷಣಾ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ.

ಈ ನಡುವೆ ರಕ್ಷಣಾ ಮಂತ್ರಿಗಳ ತವರು ರಾಜ್ಯದಲ್ಲಿ ಬಿಜೆಪಿ ಸರಕಾರದ್ದು ಇಂಗ್ಲಿಷ್ ಮೋಹ ಎಂದು ವಿರೋಧಿಸುತ್ತಿರುವ ಅಲ್ಲಿನ ಆರೆಸ್ಸೆಸ್ ಮುಖ್ಯಸ್ಥರನ್ನು ಆತನ ಹುದ್ದೆಯಿಂದ ವಜಾ ಮಾಡಲಾಗಿದೆ ಎಂಬ ಸುದ್ದಿ ಬಂದಿದೆ!


ಒಡಿಶಾದ ಕಾಳಾಹಾಂಡಿಯಲ್ಲಿ ಕ್ಷಯರೋಗದಿಂದ ಸತ್ತ ತನ್ನ ಪತ್ನಿಯ ಹೆಣವನ್ನು 60 ಕಿ.ಮೀ ದೂರದಲ್ಲಿದ್ದ ತನ್ನ ಊರಿಗೆ ಸಾಗಿಸಲು ಶವವಾಹನದ ಸೇವೆ ಪಡೆಯಲು ಹಣವಿಲ್ಲದ ವ್ಯಕ್ತಿ ತಾನೇ ಹೊತ್ತು ನಡೆದ. –ಸುದ್ದಿ 1

ಭಾರತ ಜಗತ್ತಿನ ಏಳನೇ ಸಂಪದ್ಭರಿತ ದೇಶ –ಸುದ್ದಿ 2



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ,

ಹರಿಯಾಣದ ಶಿಕ್ಷಣ ಮಂತ್ರಿಗಳು ಜೈನ ದಿಗಂಬರ ಗುರು ತರುಣ್ ಸಾಗರ್ ಅವರನ್ನು ಹರಿಯಾಣ ವಿಧಾನಸಭೆಗೆ ಆಹ್ವಾನಿಸಿದರು. ಅವರು ಶಾಸಕರನ್ನು ಉದ್ದೇಶಿಸಿ ಮಾಡಿದ 40 ನಿಮಿಷಗಳ ಭಾಷಣದಲ್ಲಿ ಹೆಣ್ಣು ಭ್ರೂಣಹತ್ಯೆ, ಕ್ರಿಮಿನಲ್ ದಾಖಲೆಗಳಿರುವ ರಾಜಕಾರಣಿಗಳು, ಭಯೋತ್ಪಾದನೆ, ಪಾಕಿಸ್ತಾನ, ಧರ್ಮ ಮತ್ತು ರಾಜಕೀಯದ ಪತಿ–ಪತ್ನಿಸಂಬಂಧ ಇತ್ಯಾದಿಗಳ ಬಗ್ಗೆ ಮಾತಾಡಿ ಶಾಸಕರಿಗೆ ಹಲವು ಸಲಹೆಗಳನ್ನು ಕೊಡಮಾಡಿದರು –ಸುದ್ದಿ



ಖಂಡಿತಾ ನಂಗೊತ್ತು ಮಗಾ, ದಿಗಂಬರ ಸನ್ಯಾಸಿಯ ಭಾಷಣ ಕೇಳಿದ ಮೇಲೆ ಅವರು ನಮ್ಮ ಮಾತಿಗೂ ಕಿವಿಗೊಡುತ್ತಾರೆ!

ವ್ಯಂಗ್ಯ ಚಿತ್ರ: ಮಂಜುಲ್, ಡಿಎನ್‌ಎ

ಒಂದು ಸಮಗ್ರ ಕ್ರೀಡಾ ಧೋರಣೆ ರೂಪಿಸಿ

–ಪ್ರಕಾಶ ಕಾರಟ್

ಕ್ರೀಡೆಗಳಲ್ಲಿ ಉತ್ತಮ ಸಾಧನೆ ಮಾಡಲಾಗದಿರುವುದು ವೈಯಕ್ತಿಕವಾಗಿ ಕ್ರೀಡಾ ಪಟುಗಳ ವಿಫಲತೆಯಲ್ಲ, ಅದು ದೇಶದಲ್ಲಿ ಕ್ರೀಡಾ ಮೂಲರಚನೆಯ ಕಳಪೆ ಸ್ಥಿತಿ, ಕ್ರೀಡೆಗಳಿಗೆ ಸಾರ್ವಜನಿಕ ಹಣ ನೀಡಿಕೆಯಲ್ಲಿ ಕೊರತೆ ಮತ್ತು ಕ್ರೀಡಾ ಒಕ್ಕೂಟಗಳ ಮೇಲೆ ರಾಜಕಾರಣಿ–ಅಧಿಕಾರಶಾಹಿಗಳ ಬಿಗಿ ಹಿಡಿತ ಇವೆಲ್ಲವುಗಳ ಒಟ್ಟು ದುಷ್ಫಲ. ಇವನ್ನು ನಿವಾರಿಸುವ ಕ್ರೀಡೆಯನ್ನು ಯುವಜನರ ಸರ್ವತೋಮುಖ ಬೆಳವಣಿಗೆಯ ಮತ್ತು ಸಮಾಜದ ಕಲ್ಯಾಣದ ಭಾಗವೆಂದು ಕಾಣುವ ಒಂದು ಸಮಗ್ರ ಕ್ರೀಡಾ ಧೋರಣೆ ರೂಪಿಸಬೇಕಾಗಿದೆ.

ರಿಯೊ ಒಲಿಂಪಿಕ್ ಪಂದ್ಯಾವಳಿಯಲ್ಲಿ ಭಾರತಿಯ ಕ್ರೀಡಾಪಟುಗಳ ಕಳಪೆ ಪ್ರದರ್ಶನದ ಬಗ್ಗೆ ವ್ಯಾಪಕವಾದ ಟಿಪ್ಪಣಿಗಳು ಬಂದಿವೆ, ಅಂತರಾಷ್ಟ್ರೀಯ ಮಾಧ್ಯಮಗಳಲ್ಲೂ ಬಂದಿವೆ. 110 ಕೋಟಿ ಜನರಿರುವ, ಒಂದು ಬೆಳೆಯುತ್ತಿರುವ ಆರ್ಥಿಕ ಎಂಬ ಹೆಗ್ಗಳಿಕೆಯ ದೇಶವೊಂದು ಕೇವಲ ಒಂದು ಬೆಳ್ಳಿ ಮತ್ತು ಒಂದು ಕಂಚಿನ ಪದಕವಷ್ಟೇ ಗೆಲ್ಲಲು ಸಾಧ್ಯವಾಗಿರುವ ಬಗ್ಗೆ ಹಲವರಿಗೆ ಆಶ್ಚರ್ಯ ಉಂಟಾಗಿದೆ.

ಕ್ರೀಡೆಗಳಲ್ಲಿ ಉತ್ತಮ ಸಾಧನೆ ಮಾಡಲಾಗದಿರುವುದು ವೈಯಕ್ತಿಕವಾಗಿ ಕ್ರೀಡಾ ಪಟುಗಳ ವಿಫಲತೆಯಲ್ಲ, ಅದು ದೇಶದಲ್ಲಿ ಕ್ರೀಡಾ ಮೂಲರಚನೆಯ ಕಳಪೆ ಸ್ಥಿತಿ, ಕ್ರೀಡೆಗಳಿಗೆ ಸಾರ್ವಜನಿಕ ಹಣ ನೀಡಿಕೆಯಲ್ಲಿ ಕೊರತೆ ಮತ್ತು ಕ್ರೀಡಾ ಒಕ್ಕೂಟಗಳ ಮೇಲೆ ರಾಜಕಾರಣಿ–ಅಧಿಕಾರಶಾಹಿಗಳ ಬಿಗಿ ಹಿಡಿತ ಇವೆಲ್ಲವುಗಳ ಒಟ್ಟು ದುಷ್ಫಲ.

ಪಿ.ವಿ.ಸಿಂಧು, ಸಾಕ್ಷಿ ಮಲಿಕ್ ಮತ್ತು ದೀಪಾ ಕರ್ಮಕಾರ್‌ರಂತಹ ಮಹಿಳಾ ಕ್ರೀಡಾಪಟುಗಳು ಒಲಿಂಪಿಕ್ಸ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದರೆ ಅದು ಅವರ ವೈಯಕ್ತಿಕ ಪ್ರಯತ್ನಗಳು ಮತ್ತು ಎಲ್ಲ ಅಡೆ–ತಡೆಗಳನ್ನು ಮೀರಿ ನಿಂತ ಪರಿಶ್ರಮದಿಂದಲೇ. ಒಲಿಂಪಿಕ್ಸ್‌ಗೆ ಹೋಗಿರುವ ಮಹಿಳಾ ಕ್ರೀಡಾಳುಗಳ ಕತೆಗಳು, ರಿಕ್ಷಾ ನಡೆಸುವಾತನ ಮಗಳು ಬಿಲ್ಲುಗಾರ್ತಿ ದೀಪಿಕಾ ಕುಮಾರಿಯದ್ದಾಗಲೀ, ಒಂದು ಬಡ ರೈತ ಕುಟುಂಬದಿಂದ ಬಂದಿರುವ ಓಟಗಾರ್ತಿ ಲಲಿತಾ ಬಾಬರ್‌ದಾಗಲೀ ಬಡತನ ಮತ್ತು ಬೆಂಬಲದ ಕೊರತೆಯನ್ನು ಬರೀ ಗಟ್ಟಿ ಮನಸ್ಸು ಮತ್ತು ದೃಢ ನಿರ್ಧಾರದಿಂದ ಮೀರಿ ನಿಂತ ಕತೆಗಳು.

ಕಳಪೆ ಕ್ರೀಡಾಂಗಣಗಳು, ವ್ಯಾಯಾಮಶಾಲೆಗಳ ಮತ್ತು ಈಜುಕೊಳಗಳ ಅಭಾವ ಭಾರತದ ಕ್ರೀಡೆಗಳ ಶೋಚನೀಯ ಸ್ಥಿತಿಯ ದ್ಯೋತಕಗಳು. ಸರಿಯಾಗಿ ಹಣ ನೀಡದಿರುವುದು, ಅಲ್ಪ ಪ್ರಮಾಣದ ಸ್ಕಾಲರ್‌ಶಿಪ್‌ಗಳು ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಆಸಕ್ತಿ ಇರುವ ಯುವ ವಿದ್ಯಾರ್ಥಿಗಳಿಗೆ ಅವುಗಳಲ್ಲಿ ಗಂಭೀರವಾಗಿ ತೊಡಗಿಕೊಳ್ಳಲು ಉತ್ತೇಜನೆಗಳ ಅಭಾವ ಪರಿಸ್ಥಿತಿ ಇನ್ನಷ್ಟು ಹದಗೆಡುವಂತೆ ಮಾಡಿವೆ.

ರಾಷ್ಟ್ರೀಯ ಮಟ್ಟದ ಕೈಚೆಂಡು ಆಟಗಾರ್ತಿ 20 ವರ್ಷದ ಪೂಜಾಳ ಆತ್ಮಹತ್ಯೆ ಈ ಶೋಚನೀಯ ಪರಿಸ್ಥಿತಿಯನ್ನು ಎತ್ತಿ ತೋರಿದೆ. ಪಾಟಿಯಾಲಾದಲ್ಲಿ ಪೂಜಾಗೆ ಆಕೆಯ ಕಾಲೇಜಿನಲ್ಲಿ ಮುಕ್ಕಟೆ ಹಾಸ್ಟೆಲ್ ಸೌಲಭ್ಯವನ್ನು ನಿರಾಕರಿಸಿದ್ದರಿಂದ ಆತ್ಮಹತ್ಯೆಗೆ ಶರಣಾಗುವಂತಾಯಿತು. ರಿಯೊ ಡಿ ಜಾನೆರೋದಲ್ಲಿ ಒಲಿಂಪಿಕ್ಸ್ ಪಂದ್ಯಗಳು ನಡೆಯುತ್ತಿದ್ದಾಗಲೇ ಈ ದುರಂತ ನಡೆದಿದೆ.

ರಾಜ್ಯ ಸರಕಾರಗಳಿಂದ ಈಗ ಇಬ್ಬರು ಪದಕ ವಿಜೇತರಿಗೆ ಕೋಟ್ಯಂತರ ರೂಪಾಯಿಗಳು ಮತ್ತು ಪಾರಿತೋಷಕಗಳ ಸುರಿಮಳೆ ಆಗುತ್ತಿದೆ. ಇಂತಹ ವೈಯಕ್ತಿಕ ಪ್ರತಿಫಲಗಳು ಎಷ್ಟೇ ಅರ್ಹವಾಗಿದ್ದರೂ, ಮೂಲ ಸಮಸ್ಯೆಗೆ ಪರಿಹಾರವಾಗುವುದಿಲ್ಲ. ರಾಜ್ಯ ಸರಕಾರಗಳು ಮತ್ತು ಕೇಂದ್ರ ಸರಕಾರ ದೊಡ್ಡ ಪ್ರಮಾಣದಲ್ಲಿ ಕ್ರೀಡಾ ಮೂಲರಚನೆಗಳನ್ನು ನಿರ್ಮಿಸಲು, ಯುವ ಕ್ರೀಡಾ ಪ್ರತಿಭೆಗಳಿಗೆ ತರಬೇತಿಗೆ ಸಾಕಷ್ಟು ಹಣವನ್ನು ಒದಗಿಸುವ ಒಂದು ಯೋಜನೆಯನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಬೇರೆಲ್ಲ ಕ್ರೀಡೆಗಳನ್ನು ನಿರ್ಲಕ್ಷಿಸಿ ಕ್ರಿಕೆಟ್ ಮೇಲೆಯೇ ಹೆಚ್ಚಿನ ಒತ್ತು ಮತ್ತು ಅದಕ್ಕೆ ಕಾರ್ಪೊರೇಟ್ ಪ್ರಾಯೋಜಕತ್ವದ ನಿಲುವನ್ನು ಕೈಬಿಡಬೇಕು.

ಕ್ರೀಡಾ ಒಕ್ಕೂಟಗಳ ಆಮೂಲಾಗ್ರ ರಿಪೇರಿಯಾಗಬೇಕಾಗಿದೆ, ಅವನ್ನು ರಾಜಕೀಯ ಕೃಪಾಪೋಷಣೆಯಿಂದ ದೂರವಿಡಬೇಕಾಗಿದೆ. ಅವು ಕ್ರೀಡೆಗಳಲ್ಲಿ ತೊಡಗಿರುವವರ ಮಾತಿಗೆ ಹೆಚ್ಚಿನ ಅವಕಾಶ ಇರುವ ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಬೇಕಿದೆ. ಕ್ರೀಡೆಯನ್ನು ಯುವಜನರ ಸರ್ವತೋಮುಖ ಬೆಳವಣಿಗೆಯ ಮತ್ತು ಸಮಾಜದ ಕಲ್ಯಾಣದ ಭಾಗವೆಂದು ಕಾಣುವ ಒಂದು ಸಮಗ್ರ ಕ್ರೀಡಾ ಧೋರಣೆ ರೂಪಿಸಬೇಕಾಗಿದೆ.



ವ್ಯಂಗ್ಯ ಚಿತ್ರ: ಕೇಶವ, ದಿ ಹಿಂದು

ಸಾಂಸ್ಕೃತಿಕ ಎಲ್ಲೆಗಳನ್ನು ವಿಸ್ತರಿಸಿದ ಧೀಮಂತ......

ಪುಟ 11 ರಿಂದ

ವಿಧಿ ಮಾಡಿಬಿಡಬಾರದು.

ಸಂಗೀತ ಕ್ಷೇತ್ರದಲ್ಲಿರುವ ಮನಸ್ಥಿತಿಯನ್ನು ಈ ಧಾರ್ಮಿಕತೆಯ ನಂಟು ಪ್ರಭಾವಿಸುತ್ತದೆ. ಕೆಲವೊಮ್ಮೆ ಸಂಗೀತಕ್ಕಿಂತ ಧಾರ್ಮಿಕತೆಗೆ ಹೆಚ್ಚು ಒತ್ತು ನೀಡುತ್ತಾರೆ. ಕರ್ನಾಟಕ ಸಂಗೀತಕ್ಕೆ ಸ್ವತಃ ಗಂಭೀರವಾದ, ಆಳವಾದ ತೀವ್ರ ಕಲಾನುಭವ ನೀಡುವ ಸಾಮರ್ಥ್ಯವಿದೆ ಎನ್ನುವುದನ್ನೇ ನಾವು ಮರೆತು ಬಿಡುತ್ತೇವೆ?

ನಮ್ಮ ಸಂಗೀತದ ವಾಗ್ಗೇಯಕಾರರು ಅಸಾಧಾರಣ ಸಂಗೀತಗಾರರು. ಅವರಿಗೆ ಅಪಾರವಾದ ಸಂಗೀತ ಜ್ಞಾನವಿತ್ತು ಅವರು ವೈಯಕ್ತಿಕ ಧಾರ್ಮಿಕ ಒಲವುಗಳಿಂದ ಸಾಹಿತ್ಯ ರಚನೆ ಮಾಡಿರಬಹುದು. ಅವರ ಕೃತಿಗಳ ಶ್ರೇಷ್ಟತೆಗಾಗಿ ಸ್ವಲ್ಪಬೇಕಿದ್ದ ಹೆಗ್ಗಳಿಕೆಯನ್ನು ಅವರಿಗಿದ್ದ ದೈವೀಕೃಪೆಯಿಂದ ಹೀಗಾಯಿತು ಎನ್ನುವಂತೆ ಬಿಂಬಿಸಿಬಿಡುತ್ತೇವೆ.

ಇದಕ್ಕೆ ಸಂಬಂಧಿಸಿದ ಮತ್ತೊಂದು ವಿಚಾರವೆಂದರೆ ಭಕ್ತಿ. ಎಷ್ಟೋ ಕೇಳುಗರು ಕೆಲವು ನಿರ್ದಿಷ್ಟ ಕೃತಿಗಳನ್ನು ಆಲಿಸಿ, ತಮ್ಮೆದುರು ಸಾಕ್ಷಾತ್ ದೇವರೇ ಬಂದು ನಿಂತಂತಾಯ್ತು ಎಂದು ಹೇಳಿರುವುದುಂಟು. ಇಲ್ಲಿ ಸಂಗೀತದ ಪ್ಯಾಕೇಜಿನಲ್ಲಿ ದೈವಭಕ್ತಿಯನ್ನು ಕಾಣಬಹುದು.

ಸಿನಿಮಾದಲ್ಲಿ ಶಾಸ್ತ್ರೀಯ ಮತ್ತು ಜಾನಪದ ಸಂಗೀತ

ತಮ್ಮನ್ನು ಅಭಿಜಾತ ಕಲೆಗಳ ರಕ್ಷಕರು ಎಂದು ಭಾವಿಸಿದ್ದ ಉಚ್ಚವರ್ಗದವರೇ ಹೆಚ್ಚಾಗಿ ಸಿನಿಮಾವನ್ನು ನಿಯಂತ್ರಿಸುತ್ತಿದ್ದರು. ಹಾಗಾಗಿ ಆರಂಭದ ಭಾರತೀಯ ಸಿನಿಮಾಗಳ ಕಥಾನಕಗಳಲ್ಲಿ ಸಾಮಾನ್ಯವಾಗಿ ಶಾಸ್ತ್ರೀಯ ಸಂಗೀತವನ್ನು ಬಳಸುತ್ತಿದ್ದರು. ಇಲ್ಲಿ ಶಾಸ್ತ್ರೀಯವೆನ್ನುವುದು ಸಂಗೀತದ ಪ್ರಕಾರಕ್ಕಿಂತ ಹೆಚ್ಚಾಗಿ ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಸಾಮಾಜಿಕ ಅಸಮಾನತೆಯನ್ನು ಸೂಚಿಸುತ್ತದೆ. ಸಿನಿಮಾದಲ್ಲಿ ಸಂಗೀತದಲ್ಲಿ ಜನಪದ ಮಟ್ಟುಗಳು ಇವೆ. ಇಲ್ಲಿ ಜನಪದ ಎನ್ನುವುದು ಸಂಗೀತದ ಕಲ್ಪನೆ ಎನ್ನುವುದಕ್ಕಿಂತ ಸಾಮಾಜಿಕ ಪ್ರತ್ಯೇಕತೆಯ ಸೂಚಕವಾಗಿ ಗ್ರಹಿಸಿಕೊಳ್ಳಬೇಕು. ಇಲ್ಲಿ ಸಂಗೀತವು ಸಂವೇದನೆಗಿಂತ ಹೆಚ್ಚಾಗಿ ಇವುಗಳನ್ನು ಯಾರು ಸೃಷ್ಟಿಸುತ್ತಿದ್ದಾರೆ ಯಾವ ಮೂಲದವು ಎನ್ನುವುದನ್ನು ಸೂಚಿಸುವುದಕ್ಕಾಗಿ ಬಳಕೆಯಾಗುತ್ತಿದ್ದವು. ಜನಪದ ಸಂಗೀತವನ್ನು 'ಇತರೆ ವರ್ಗದ ಜನ' ಪ್ರಸ್ತುತಪಡಿಸುವ ಸಂಗೀತವಾಗಿ ಮತ್ತು ಶಾಸ್ತ್ರೀಯ ಸಂಗೀತವನ್ನು 'ಉಳ್ಳವರ ಸಂಗೀತ'ವನ್ನಾಗಿ ಕೇಳುತ್ತೇವೆ. ಸಮಾಜವನ್ನು ನಿಯಂತ್ರಿಸುವ ಗುಂಪುಗಳು ಸಂಗೀತವನ್ನು ನಿಯಂತ್ರಿಸುತ್ತದೆ."

ತಂತ್ರಜ್ಞಾನ ಮತ್ತು ಸಂಗೀತ

ತಂತ್ರಜ್ಞಾನದ ಪಾತ್ರವೇನು? ಈ ಪ್ರಶ್ನೆ ಸಿನಿಮಾ ಸಂಗೀತದಷ್ಟೇ ಇಂದಿನ ನಮ್ಮ ಬದುಕಿಗೂ ಪ್ರಸ್ತುತ. ನನ್ನ ದೃಷ್ಟಿಯಲ್ಲಿ ತಂತ್ರಜ್ಞಾನ ಎನ್ನುವುದು ನಮ್ಮನ್ನು ಸಶಕ್ತಗೊಳಿಸುವ ಸಾಧನ. ಅದು ಮಾನವ ಸ್ಫೂರ್ತಿಯ ಸ್ಥಾನವನ್ನು ಕಸಿದು ಕೊಳ್ಳಬಾರದು. ಇಂದಿನ ತಂತ್ರಜ್ಞಾನದ ಸಮಸ್ಯೆಯೆಂದರೆ ಅದು ಸಿನಿಮಾ ಸಂಯೋಜಕನ ಕೈಯಿಂದ ಸ್ಫೂರ್ತಿಯಿಂದ ಕೂಡಿದ ಸೃಜನಶೀಲತೆಯ ಪಾತ್ರವನ್ನು ಕಸಿದುಕೊಳ್ಳಲು ಪ್ರಯತ್ನಿಸುತ್ತಿದೆ."

ಲಿಂಗ ತಾರತಮ್ಯ

ಲಿಂಗ ತಾರತಮ್ಯ ಕರ್ನಾಟಕದ ಸಂಗೀತ ಸಮುದಾಯದಲ್ಲಿ ಇಂದಿಗೂ ಆಚರಣೆಯಲ್ಲಿದೆ. ಇಂದು ಕೂಡ ಹಲವು ಸಂಗೀತಗಾರರು ಮಹಿಳೆಯರಿಗೆ ಪಕ್ಕವಾದ್ಯ ನುಡಿಸುವುದಿಲ್ಲ. ಅಷ್ಟೇ ಅಲ್ಲ, ಮಹಿಳೆಯರು ತಮಗೆ ಪಕ್ಕವಾದ್ಯ ನುಡಿಸುವುದನ್ನೂ ವಿರೋಧಿಸುತ್ತಾರೆ. ಹಿಂದಿನಿಂದಲೂ ಸಮಾಜದಲ್ಲಿದ್ದ ನಿಷೇಧಗಳು ಮತ್ತು ಸಾಮಾಜಿಕ ಮನಸ್ಥಿತಿಗಳು ಇಂತಹ ಧೋರಣೆಗಳಿಗೆ ಕಾರಣವಾಗಿದ್ದವು. ಹಲವು ಪುರುಷ ಸಂಗೀತಗಾರರು ಒಂದು ಮಟ್ಟದ ಹೆಸರು ಮತ್ತು ಜನಪ್ರಿಯತೆ ದೊರಕುವ ತನಕ ಮಹಿಳೆಯರಿಗೆ ಪಕ್ಕವಾದ್ಯ ನುಡಿಸುತ್ತಾರೆ. ತಮಗೊಂದು ಸ್ಥಾನ ದೊರಕಿದ ಕೂಡಲೇ ಹೆಂಗಸರಿಗೆ ಪಕ್ಕವಾದ್ಯ ನುಡಿಸುವುದನ್ನು ನಿಲ್ಲಿಸಿಬಿಡುತ್ತಾರೆ. ನಾವು ಇನ್ನು ಮುಂದೆ ಹೆಂಗಸರಿಗೆ ನುಡಿಸುವುದಿಲ್ಲ ಎಂದು ಹೇಳಿಕೊಳ್ಳುವುದು ತಮ್ಮ ಬದುಕಿನ ಹೆಮ್ಮೆಯ ಕ್ಷಣ ಎಂದೂ ಭಾವಿಸುತ್ತಾರೆ. ಉಪಭೋಗ ಸಂಸ್ಕೃತಿಯಲ್ಲಿದ್ದಂತೆ 'ಬಳಸಿಕೊಂಡು ಬಿಸಾಡು' ಎನ್ನುವುದು ಅವರ ನೀತಿ.

(ಈ ಲೇಖನಕ್ಕೆ ಪ್ರಮುಖ ಆಧಾರ ಟಿ.ಎಂ. ಕೃಷ್ಣರವರ ಜೀವನ, ಚಿಂತನೆಗಳನ್ನು ಒಳಗೊಂಡ ಶೈಲಜಾ ಮತ್ತು ಟಿ.ಎಸ್. ವೇಣುಗೋಪಾಲ್ ಸಂಪಾದಿಸಿದ ರಾಗಮೂಲ ಪ್ರಕಟಿಸಿದ ಪುಸ್ತಕ)

ಸಾಂಸ್ಕೃತಿಕ ಆಸ್ತಿಯನ್ನೂ ಮುಕ್ತವಾಗಿ ಹಂಚಿಕೊಳ್ಳಬೇಕು

(ಮ್ಯಾಗಸೆಸೆ ಪ್ರಶಸ್ತಿ ಸ್ವೀಕಾರ ಭಾಷಣದಿಂದ)

ಯಾಜಮಾನ್ಯ ನಡೆಸುವ ಸಂಸ್ಕೃತಿ ತನ್ನನ್ನು ಶಕ್ತಿಶಾಲಿ ಎಂದು ಕರೆದುಕೊಳ್ಳಬಹುದು. ಶಕ್ತಿ ಅಥವಾ ಅಧಿಕಾರ ಅಧಿಕಾರದ ಬಗ್ಗೆ ಮಾತ್ರ ಇರುತ್ತದೆ. ಸಂಸ್ಕೃತಿ ಸಂಸ್ಕೃತಿ ಬಗ್ಗೆ ಇರುತ್ತದೆ. ಅತ್ಯಂತ ಅಂಚಿನಲ್ಲಿರುವ ಸಮುದಾಯ ಸೇರಿದಂತೆ ಪ್ರತಿಯೊಂದು ಸಮುದಾಯವೂ ತನ್ನದೇ ಉತ್ಕೃಷ್ಟವಾದ ಕಲೆ ಮತ್ತು ಹಲವು ವಿಧದ ಸಂಸ್ಕೃತಿಯನ್ನು ಸೃಷ್ಟಿಸಿರುತ್ತದೆ. ಅಧಿಕಾರಕ್ಕೆ ಅದರ ಗೋಪುರಗಳು ಇರುತ್ತವೆ. ಆದರೆ ಸಂಸ್ಕೃತಿ ಸಪಾಟಾದ ರಂಗಭೂಮಿಯಂತೆ. ಎತ್ತರದ ಗೋಪುರಗಳನ್ನು ಬೀಳಿಸಬೇಕು ಮತ್ತು ಅವಜ್ಞೆಗೆ ಒಳಗಾದ ಕಲಾ ಸಂಪ್ರದಾಯಗಳನ್ನು ರಂಗದ ಮಧ್ಯಕ್ಕೆ ತರಬೇಕು.

ಸಮಾಜದ ಆಸ್ತಿ – ಅದು ಭೌತಿಕವಾದ್ದ ಅಥವಾ ಸಾಂಸ್ಕೃತಿಕ ಆಸ್ತಿಯಾಗಿರಲಿ – ಅದನ್ನು ಮುಕ್ತವಾಗಿ ಹಾಗೂ ಗೌರವ ಮತ್ತು ಪ್ರೇಮದಿಂದ ಹಂಚಿಕೊಳ್ಳಬೇಕು ಎಂದು ಪ್ರಜಾಪ್ರಭುತ್ವ ಒತ್ತಾಯಿಸುತ್ತದೆ.

ಒಂದು ಕರ್ನಾಟಕ ಸಂಗೀತದ ಹಾಡಿನೊಂದಿಗೆ ನನ್ನ ಎರಡು ಮಾತು ಮುಗಿಸುತ್ತೇನೆ. ಇದು 6–7ನೇ ಶತಮಾನದ ದೇವಸ್ಥಾನ ಪ್ರವೇಶಿಸಿ ಹಾಡಬಯಸಿದ ದಲಿತ ಸಂತ ನಂದನಾರ್ ಬಗ್ಗೆ 19ನೇ ಶತಮಾನದಲ್ಲಿ ಗೋಪಾಲಕೃಷ್ಣ ಎಂಬುವರು ಬರೆದ ಸಂಗಿತ ನಾಟಕದ ಹಾಡು ..

21ನೇ ಶತಮಾನದ ಭಾರತದಲ್ಲಿ ದಲಿತರು ದೇವಾಲಯಗಳನ್ನು ಅವರಿಗೆ ತೆರೆಯಬೇಕು ಎಂದು ಮಾತ್ರ ಕೇಳುತ್ತಿಲ್ಲ. ಅವರು ಅವಕಾಶಗಳ, ಹಕ್ಕುಗಳ ಮತ್ತು ಅಧಿಕಾರ ಹಂಚಿಕೊಳ್ಳುವ ಕಟ್ಟೋಣಗಳೊಳಗೂ ಪ್ರವೇಶ ಕೇಳುತ್ತಿದ್ದಾರೆ. ಇವತ್ತಿನ 'ನಂದನಾರ್'ಗಳು ಹಿಂದಿಗಿಂತ ಬಲಶಾಲಿಯಾಗಿದ್ದಾರೆ. ಸಂಘಟಿತರಾಗಿದ್ದಾರೆ. ತಮ್ಮ ಹಕ್ಕುಗಳ ಬಗ್ಗೆ ಪ್ರಜ್ಞಾವಂತರಾಗಿದ್ದಾರೆ. ಪರಿಣಾಮಕಾರಿಯಾಗಿದ್ದಾರೆ. ಆದರೂ ರಾಜಕೀಯ, ಸಾಮಾಜಿಕ, ಧಾರ್ಮಿಕ ಮುಂತಾದ ಯಾವುದೇ ಜೀವನದ ವಲಯಗಳಲ್ಲಿ ಗೌರವ ಹಾಗೂ ಸಮಾನತೆ ಖಾತ್ರಿ ಪಡಿಸುವ ಜಗತ್ತಿನಾದ್ಯಂತ ಅಂಚಿನಲ್ಲಿರುವ ಸಮುದಾಯಗಳ ಹೋರಾಟಗಳಿಗೆ ಇನ್ನೂ ಬಾಗಿಲುಗಳು ತೆರೆದುಕೊಳ್ಳುತ್ತಿಲ್ಲ ಎಂಬುದು ದುರದೃಷ್ಟಕರ.



ಉಡುಪಿಯ ಜನಕ ಅಬ್ದುಲ್ಲಾ ಹಾಜಿ ಬಡವರ ಕಾಳಜಿ ಇಂದ ಉದಾರ ಕೊಡುಗೆ ಆಗಿ ನೀಡಿದ ಜಮೀನನ್ನು ಇಂದು ದುಬಾಯ್ ಮೂಲದ ಉದ್ಯಮಿ ಮಿಲ್ಯಾಧಿಪತಿ BR ಶೆಟ್ಟಿ ಎಂಬವನಿಗೆ ಬಿಟ್ಟು ಕೊಡುವುದೆಂದರೆ ಇದು ಯಾರಪ್ಪನ ಆಸ್ತಿ? ಇದನ್ನು ವಿರೋಧಿಸ ಬೇಕಾದ ರಾಜಕೀಯ ಪಕ್ಷದ ಮಂದಿ ಉದ್ಯಮಿಯೊಂದಿಗೆ ಶಾಮೀಲಾಗಿರುವ ಶಂಕೆ ಇದೆ. ಆದುದರಿಂದ ಎಡ ಪಂಥೀಯ ಸಂಘಟನೆಗಳು ಮತ್ತು ದಲಿತ ಸಂಘಟನೆಗಳು ಕೂಡಲೇ ಎಚ್ಚೆತ್ತು ಸರ್ಕಾರದ ಮೇಲೆ ಒತ್ತಡ ಹಾಕ ಬೇಕಾಗಿದೆ ಇದು ಅನಿವಾರ್ಯ. ಯಾರದ್ದೋ ಭೂಮಿಯಲ್ಲಿ ಶೆಟ್ಟರು ತಮ್ಮ ಅಧಿಕಾರ ಕಬಳಿಸಲು ಹೊರಟಿದ್ದಾರೆ. ಇದೊಂದು ಸಂಚು ಮತ್ತು ಜಿಲ್ಲೆಯ ಜನತೆ ತನು ಮನ ಧನದಿಂದ ಈ ಕಪಟತನವನ್ನು ವಿಫಲ ಗೊಳಿಸ ಬೇಕು.

– ಚೇತನ ಕೃಷ್ಣಪ್ಪ



ಕೇರಳದ ಎಲ್.ಡಿ.ಎಫ್ ಸರಕಾರ ತೋರಿದ ದಾರಿ- ಮುಚ್ಚಿದ್ದ 40 ಗೋಡಂಬಿ ಕಾರ್ಖಾನೆಗಳನ್ನು ತೆರೆದು 16,000 ಕಾರ್ಮಿಕರಿಗೆ ಮತ್ತೆ ಉದ್ಯೋಗ

ಕೇರಳ ರಾಜ್ಯದ ಗೋಡಂಬಿ ಅಭಿವೃದ್ಧಿ ಕಾರ್ಪೋರೇಶನ್ (ಕೆ.ಎಸ್.ಸಿ.ಡಿ.ಸಿ)ನ ಎಲ್ಲ 30 ಕಾಖಾನೆಗಳು ಮತ್ತು ಕೇರಳ ಗೋಡಂಬಿ ಕಾರ್ಮಿಕರ ಕೈಗಾರಿಕಾ ಸಹಕಾರೀ ಸೊಸೈಟಿ(ಕಪೆಕ್ಸ) ಯ 10 ಕಾಖಾನೆಗಳು ಮತ್ತೆ ತೆರೆದಿವೆ. ಈ ಮೂಲಕ ಸುಮಾರು 16,000 ಕಾರ್ಮಿಕರಿಗೆ ಮತ್ತೆ ಉದ್ಯೋಗ ಸಿಗುವಂತಾಗಿದೆ. ಸಿಐಟಿಯುವಿನ ದೊಡ್ಡ ಹೋರಾಟದ ಫಲವಾಗಿ ಹಾಗೂ ಎಲ್‌ಡಿಎಫ್ ಸರಕಾರದ ಧೋರಣೆಯಿಂದಾಗಿ ಈ ಕಾರ್ಖಾನೆಗಳನ್ನು ಪುನರಾರಂಭಿಸಲು ಸಾಧ್ಯವಾಗಿದೆ. ಯುಡಿಎಫ್ ಸರಕಾರ ಖಾಸಗಿಯವರೊಂದಿಗೆ ಶಾಮೀಲಾಗಿದ್ದುದರಿಂದ ಇವೆಲ್ಲ ಮುಚ್ಚಿದ್ದವು. ಆಗ ಈ ಹೋರಾಟಕ್ಕೆ ನೇತೃತ್ವ ನೀಡಿದ್ದ ಮರ್ಸಿಕುಟ್ಟಿ ಅಮ್ಮ ಈ ಗ ಕೈಗಾರಿಕಾಮಂತ್ರಿಯಾಗಿದ್ದು ಕೋಳಂ ಬಳಿಯ ಪೆರುಂಪುಲದಲ್ಲಿನ ಕಾಖಾನೆಯನ್ನು ಉದ್ಘಾಟಿಸಲು ಬಂದಾಗ ಗದ್ಗದಿತಳಾದ ಇಂಟಕ್ ಮುಖಂಡೆ ವಸಂತಾ ಕುಮಾರಿ ಅವರನ್ನು ಅಪ್ಪಿಕೊಂಡು ತನ್ನ ಹರ್ಷವನ್ನು ವ್ಯಕ್ತಪಡಿಸಿದರು.

ಎಲ್‌ಡಿಎಫ್ ಸರಕಾರ ಈ ಕಾರ್ಖಾನೆಗಳ ಆಧುನೀಕರಣಕ್ಕಾಗಿ ಈ ವರ್ಷದ ಬಜೆಟ್‌ನಲ್ಲಿ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು, ಕೂಡಲೇ 25 ಕೋಟಿಯನ್ನು ಬಿಡುಗಡೆ ಮಾಡಲಾಗಿದೆ.

ಕೆಲ ಖಾಸಗೀ ಗೋಡಂಬಿ ಕಾರ್ಖಾನೆಗಳ ಮಾಲೀಕರು ಕಾರ್ಖಾನೆಯ ಕಾರ್ಯಾರಂಭಲ್ಲರ ಸಾಲುಷ್ಟು ಸಾಕಷ್ಟು ದಾಸ್ತಾನುಗಳನ್ನು ಹೊಂದಿದ್ದರೂ ಹೆಚ್ಚಿಸಿದ ಕನಿಷ್ಟ ಕೂಲಿಯಿಂದ ತಪ್ಪಿಸಿಕೊಳ್ಳಲು,, ಓಣಂ ನಂತರ ಅವರನ್ನು ಕಡಿಮೆ ಕೂಲಿಗೆ ದುಡಿಸಿಕೊಳ್ಳಲು ಅನುವಾಗುವಂತೆ ಪ್ರಯತ್ನಿಸುತ್ತಿದ್ದಾರೆ. ಇದನ್ನು ಎಲ್‌ಡಿಎಫ್ ಸರಕಾರ ಗಮನಿಸಿದ್ದು ಕಾರ್ಮಿಕರಿಗೆ ನೀಡಬೇಕಿರುವ ಕನಿಷ್ಟ ಕೂಲಿಯನ್ನು ನೀಡಿ ಸಹಕಾರಯುತವಾಗಿಎಲ್ಲಾ ಕಾರ್ಖಾನೆಗಳನ್ನು ಪುನರಾರಂಭಿಸಬೇಕು ಎಂದು



ಮಂತ್ರಿಗಳು ಖಾಸಗಿಯವರನ್ನು ಒತ್ತಾಯಿಸಿದ್ದಾರೆ. ಒತ್ತಾಯಿಸಿದರು.

ಸಿಡಬ್ಲ್ಯುಸಿ(ಗೋಡಂಬಿ ಕಾರ್ಮಿಕರ ಕೇಂದ್ರ –ಸಿಐಟಿಯು) ಖಾಸಗೀ ಕಾರ್ಖಾನೆಯ ಮಾಲೀಕರು ಕಾರ್ಖಾನೆಗಳನ್ನು ಸರಕಾರದ ನಿರ್ಧಾರದಂತೆ ಪುನರಾರಂಭಿಸಬೇಕು ಎಂದು ಒತ್ತಾಯಿಸಿ ಹೋರಾಟವನ್ನು ಮುಂದುವರೆಸಿದೆ.

ತ್ರಿಪುರಾ ಉಪಚುನಾವಣೆಯಲ್ಲಿ ಸಿ.ಪಿ.ಐ (ಎಂ)ಗೆ ಜಯ

ಸಿ.ಪಿ.ಐ(ಎಂ)ನ ಕುಮುದ್ ದೇಬ್‌ರಾಂ ಅವರು ತ್ರಿಪುರಾ ಟಿ.ಟಿ.ಎ.ಎ.ಡಿಸಿ ಉಪಚುನಾವಣೆಯಲ್ಲಿ ಸಿಮ್ನಾ–ತಮಾಕರಿಯಲ್ಲಿ ಜಯಗಳಿಸಿದ್ದಾರೆ. ಅವರು ಐ.ಪಿ.ಎಫ್‌ಟಿ.ನ ಪ್ರತಿಸ್ಪರ್ಧಿಯನ್ನು ಸೋಲಿಸಿದ್ದಾರೆ. ಬಿ.ಜೆ.ಪಿ ಮತ್ತು ಟಿ.ಎಂ.ಸಿ ಪಕ್ಷಗಳು ಐಪಿಎಫ್‌ಟಿ ಪರವಾಗಿ ತಮ್ಮ ಅಭ್ಯರ್ಥಿಗಳನ್ನು ಹಿಂತೆಗೆದುಕೊಂಡಿದ್ದವು. ಆದರೂ ಸಿಪಿಐ(ಎಂ) ಅಭ್ಯರ್ಥಿ 582 ಮತಗಳ ಅಂತರದಲ್ಲಿ ಸ್ಪಷ್ಟ ಗೆಲುವು ಸಾಧಿಸಿದ್ದಾರೆ, ಇಲ್ಲಿನ ಮತದಾರರು ಎಡಪಕ್ಷಗಳಲ್ಲಿ ಮತ್ತು ಶಾಂತಿ ಮತ್ತು ಅಭಿವೃದ್ಧಿಯ ನೀತಿಗಳಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸಿ ಬಿಜೆಪಿ ಮತ್ತು ಟಿಎಂಸಿಯ ವಿಭಾಜಕ ನಿಲುವುಗಳಿಗೆ ತಕ್ಕ ಉತ್ತರ ನೀಡಿದ್ದಾರೆ ಎಂದು ಸಿಪಿಐ(ಎಂ)ಹೇಳಿದೆ.

ಪ್ರಬಲ ಸಾಮೂಹಿಕ ಚಳುವಳಿ ಮತ್ತು ಸಂಘಟನಾತ್ಮಕ ಮರುರಚನೆ ವಿಭಜನಕಾರೀ ಶಕ್ತಿಗಳ ಹುನ್ನಾರ ಅಡಗಿಸಲು ತ್ರಿಪುರಾ ಗಣ ಮುಕ್ತಿ ಪರಿಷತ್ ಸಮ್ಮೇಳನದ ಪಣ

ಅಗಸ್ಟ್ 3–5 ರ ವರೆಗೆ ನಡೆದ ತ್ರಿಪುರಾ ರಾಜ್ಯ ಉಪಜಾತಿಗಣಮುಕ್ತಿ ಪರಿಷತ್ (ಜಿ.ಎಂ.ಪಿ.)ನ 21ನೇ ಸಮ್ಮೇಳನ ತ್ರಿಪುರಾದ ಕುಮುಲ್ವಾಂಗ್ ನಲ್ಲಿ ನಡೆಯಿತು. ಪ್ರಖ್ಯಾತ 'ಕಮ್ಯೂನಿಷ್ಟ್ ಮುಖಂಡರಾದ ದಶರತ್‌ನಾಥ್ ದೇಬ್ ಅವರು ಕಟ್ಟಿರುವ ಬುಡಕಟ್ಟು ಜನಗಳ ಸಂಘಟನೆ ಇದು. ಜಮಿಂದಾರೀ ಆಳ್ವಿಕೆಯ ವಿರುದ್ಧ ಅವಿರತ ಹೋರಾಟ, ಪ್ರಜಾಪ್ರಭುತ್ವದ ಸ್ಥಾಪನೆ ಮತ್ತು ಬುಡಕಟ್ಟು ಸಮೂಹದ ಜೀವನ ಮತ್ತು ಜೀವನಾಧಾರದ ಏಳಿಗೆ ಈ ಸಂಘಟನೆಯ ಧ್ಯೇಯೋದ್ದೇಶಗಳು. ವಿಭಜನಕಾರೀ ಶಕ್ತಿಗಳ ಹಿಡಿತದಿಂದ ಬುಡಕಟ್ಟು ಸಮೂಹದ ವಿಮೋಚನೆಗಾಗಿ, ಬುಡಕಟ್ಟು ಮತ್ತು ಇತರ ಜನರ ನಡುವೆ ಇರುವ ಸಾಂಪ್ರದಾಯಿಕ ಬಾಂಧವ್ಯವನನ್ನು ಮುರಿಯಲು ಶತಾಯಗತಾಯ ಪ್ರಯತ್ನಿಸಯತ್ತಿರುವ ರಾಜಕೀಯ ಯೋಜನೆಗಳ ವಿರುದ್ಧ ಹೋರಾಟ ನಡೆಸುತ್ತ ಬಂದಿರುವ ಸಂಘಟನೆ.

ಸಮ್ಮೇಳನವು ಬೃಹತ್ ಸಾಮೂಹಿಕ ಮೆರವಣಿಗೆಂ ಕೊಂದಿಗೆಆರಂಭವಾಯಿತು, ಅದರಲ್ಲಿ ಸಿ.ಪಿ.ಐ (ಎಂ)ನ ಪೋಲಿಟ್ ಬ್ಯೂರೋ ಸದಸ್ಯರಾದ ಬೃಂದಾಕಾರಟ್, ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸರಕಾರ್ ಹಾಗೂ ಸಿ.ಪಿ.ಐ (ಎಂ) ರಾಜ್ಯ ಕಾರ್ಯದರ್ಶಿ ಬಿಜಾನ್ ಧರ್ ಮತ್ತಿತರ ಮುಖಂಡರು ಪಾಲ್ಗೊಂಡಿದ್ದರು.

ದೇಶದ ಇತರ ರಾಜ್ಯಗಳಲ್ಲೆಲ್ಲೂ ಕಾಣಸಿಗದ ಸ್ನೇಹ ಸಂಬಂದ ಇಲ್ಲಿ ಬುಡಕಟ್ಟು, ಬುಡಕಟ್ಟೇತರ, ಮುಸ್ಲಿಂ, ಕ್ರಿಶ್ಚಿಯನ್, ಮುಂತಾದ ಸಮುದಾಯದಲ್ಲಿದೆ ಎಂದು ಸಂತೋಷ ವ್ಯಕ್ತಪಡಿಸಿದ ಬೃಂದಾಕಾರಟ್ ತ್ರಿಪುರಾಒಂದನ್ನು ಹೊರತುಪಡಿಸಿ ಯಾವರಾಜ್ಯವೂ ಸಹ ಅರಣ್ಯ ಹಕ್ಕು ಕಾಯ್ದೆಯನ್ನು ಸರಿಯಾಗಿ ಕಾರ್ಯಗತಗೊಳಿಸಿಲ್ಲ, ಬದಲಾಗಿ ಕೆಲವು ಬುಡಕಟ್ಟು ಸಮುದಾಯುವನ್ನು ಬಲವಂತವಾಗಿ ಅವರ ಭೂಮಿಯಿಂದ ಹೊರದಬ್ಬಿ ಗಣಿಗಾರಿಕೆಗಾಗಿ ವಾಣಿಜ್ಯ ವಲಯಕ್ಕೆ ನೀಡಲಾಗಿದೆ ಎಂದರು.

70 ರದಶಕದಲ್ಲಿ ತ್ರಿಪುರಾದ ಬುಡಕಟ್ಟು ಸಮೂಹದ 4 ಅಂಶ ಬೇಡಿಕೆಯ ಸಮಗ್ರ ಹೋರಾಟದ ಚರಿತ್ರೆಯನ್ನು ನೆನಪಿಸಿಕೊಳ್ಳುತ್ತಾ ಮಾತನಾಡಿದ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್, ಬುಡಕಟ್ಟು ಸಮೂಹ ಮತ್ತು ಬಂಗಾಳಿಗಳ ಪ್ರತ್ಯೇಕತೆಯನ್ನು ತ್ರಿಪುರಾದಲ್ಲಿ ಊಹಿಸಿಕೊಳ್ಳಲು ಸಾಧ್ಯವಿಲ್ಲ, ರಾಜರ ಆಡಳಿತ ಕಾಲದಿಂದಲೂ ಇದು ನಡೆದು ಬಂದ ಪರಂಪರೆ ಎಂದರು. ಆದರೆ ಒಂದು ವಿಭಾಗ ಮಾತ್ರ ಈ ಸಹಬಾಳ್ವೆಯನ್ನು ಪ್ರತ್ಯೇಕ ರಾಜ್ಯ ಘೋಷಣೆಯನ್ನು ಹಾಕುವದರ ಮೂಲಕಕ 'ದಡುವ ಪ್ರಯತ್ನ ನಡೆಸಿದೆ. ಆಶ್ಚರ್ಯದ ಸಂಗತಿಯೆಂದರೆ ರಾಜ್ಯದ ವಿರೋಧ ಪಕ್ಷಗಳು ಇಂತಹ 'ಪ್ರತ್ಯೇಕ ರಾಜ್ಯ' ಬೇಡಿಕೆಗೆ ಉಪಾಯುತವಾಗಿ ಬೆಂಬಲ ನೀಡಿ ಎಡರಂಗ ಸರಕಾರಕ್ಕೆ ಅಡಚಣೆ ಉಂಟುಮಾಡಿ, ಸದ್ಯ ಚಾಲ್ತಿಯಲ್ಲಿರುವ ಯೋಜನೆಗೆ ಮತ್ತು ವಿಭಿನ್ನ ಜನವಿಭಾಗದ ನಡುವೆ ಅಸಮತೋಲನ ಉಂಟಾಗುವಂತೆ ಮಾಡುತ್ತಿವೆ. ವಿಭಜನಕಾರಿಗಳಿಗೆ ' ಬೆಂಬಲ ನೀಡುತ್ತಿರುವ ಜನಸಮುದಾಯವನ್ನು ನಮ್ಮ ಶತ್ರುಗಳೆಂದು ನಾವು ಭಾವಿಸುವುದಿಲ್ಲ ಬದಲಾಗಿ ಸಮರ್ಪಕ ಕಾರಣ ಮತ್ತು ತರ್ಕಗಳ ಮೂಲಕ ಅವರಲ್ಲಿರುವ ಭ್ರಮೆಯನ್ನು ಹೋಗಲಾಡಿಸುತ್ತೇವೆ ಎಂದು ಮಾಣಿಕ್ ಸರ್ಕಾರ್ ಹೇಳಿದರು.

ಈ ಸಮ್ಮೇಳನದಲ್ಲಿ 95 ಮಹಿಳಾ ಪ್ರತಿನಿಧಿಗಳು ಸೇರಿದಂತೆ ಒಟ್ಟು 485 ಪ್ರತಿನಿಧಿಗಳು ಭಾಗವಹಿಸಿದರು. 39 ಪ್ರತಿನಿಧಿಗಳು ಚರ್ಚೆಗಳಲ್ಲಿ ಭಾಗವಹಿಸಿದರು.

'ನಿರಕ್ಷರತೆ–ಮುಕ್ತ, ಭಯೋತ್ಪಾನಾ–ಮುಕ್ತ ಸ್ವಾವಲಂಬಿ ತ್ರಿಪುರಾ' ಎಂಬ ಹಿಂದಿನ ಸಮ್ಮೇಳನದ ಘೋಷಣೆಯನ್ನು ನೆನೆಪಿಸಿಕೊಳ್ಳುತ್ತ ಸಮ್ಮೇಳನ ಹಲವು ನಿರ್ಣಯಗಳನ್ನು ಅಂಗೀಕರಿಸಿತು. ಸ್ವಾಯತ್ರ ಜಿಲ್ಲಾಮಂಡಳಿಗಳಿಗೆ ಹೆಚ್ಚಿನ ಅಧಿಕಾರಗಳು, ತ್ರಿಪುರಾ ಸೇರಿದಂತೆ ಈಶಾನ್ಯ ರಾಜ್ಯಗಳಿಗೆ ವಿಶೇಷ ಸ್ಥಾನಮಾನ, ಕೊಕ್‌ಬೊರಾಕ್ ಭಾಷೆಗೆ ಸಂವಿಧಾನದ 8ನೇ ಶೆಡ್ಯೂಲ್‌ನಲ್ಲಿ ಸ್ಥಾನ, ಪ್ರತ್ಯೇಕ ಬುಡಕಟ್ಟು ರಾಜ್ಯದ ತರ್ಕಹೀನ ಬೇಡಿಕೆಗೆ ಖಂಡನೆ ಮುಂತಾದವನ್ನು ಕುರಿತಂತೆ ನಿರ್ಣಯಗಳನ್ನು ಅಂಗೀಕರಿಸಿದ ಸಮ್ಮೇಳನ ತನ್ನ ಆಂದೋಲನವನ್ನು ಮುಂದೊಯ್ಯಲು 21 ಅಂಶಗಳ ಬೇಡಿಕೆ ಪಟ್ಟಿಯನ್ನು ಅಂಗೀಕರಿಸಿತು.

ಜಿತೇಂದ್ರ ಚೌಧರಿ ಮತ್ತು ರಾಧಾ ಚರಣೆ ದೇಬ್‌ಬರ್ಮ ಹೊಸ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಾಗಿ ಚುನಾಯಿತರಾದರು.

ಶಬರಿಮಲೆಯೊಳಗೆ ಮಹಿಳೆಯರ ಪ್ರವೇಶ ನಿಷೇಧ ಹಳಸಲು ಪಾಳೇಗಾರಿ ಮನೋಭಾವದ ಪ್ರತೀಕ: ಸಿ.ಪಿ.ಐ(ಎಂ)

ಶಬರಿಮಲೆ ದೇವಸ್ಥಾನದೊಳಕ್ಕೆ ಎಲ್ಲ ವಯಸ್ಸಿನ ಮಹಿಳೆಯರಿಗೆ ಪ್ರವೇಶ ಇರಬೇಕು, ಇದರಲ್ಲಿ ವಯಸ್ಸಿನ ಮಿತಿ ಹಾಕುವುದನ್ನು ಬೆಂಬಲಿಸುವವರು ಪಾಳೇಗಾರಿ ಮತ್ತು ಮಹಿಳಾ–ವಿರೋಧಿ ಮನೋಭಾವದವರು ಮಾತ್ರ ಎಂದು ಸಿ.ಪಿ.ಐ(ಎಂ) ಕೇರಳ ರಾಜ್ಯ ಕಾರ್ಯದರ್ಶಿ ಕೋಡಿಯೇರಿ ಬಾಲಕೃಷ್ಣನ್ ಅವರು ಹೇಳಿದ್ದಾರೆ. ಈ ರೀತಿ ವಯೋಮಿತಿ ಹೇರುವುದು ಮತ್ತು ಸಮಾಜದಲ್ಲಿ ಪುರುಷ ಪ್ರಾಬಲ್ಯ ಉಳಿಸಿಕೊಳ್ಳಲು ಸಾರ್ವಜನಿಕ ಸ್ಥಳಗಳು ಮತ್ತು ಪೂಜಾಸ್ಥಳಗಳಲ್ಲಿ ಮಹಿಳೆಯರಿಗೆ ತಾರತಮ್ಯ ತೋರುವುದು ಹಳಸಲಾಗಿರುವ ಒಂದು ವರ್ಗವ್ಯವಸ್ಥೆಯ ಪ್ರತಿಬಿಂಬ ಎಂದು ಅವರು 'ದೇಶಾಭಿಮಾನಿ' ಪತ್ರಿಕಯಲ್ಲಿ ಬರೆದ ಲೇಖನದಲ್ಲಿ ಅವರು ಹೇಳಿದ್ದಾರೆ.

ಶಬರಿಮಲೆ ದೇವಾಲಯವನ್ನು ನಿರ್ವಹಿಸುತ್ತಿರುವ ತಿರುವಾಂಕೂರ್ ದೇವಸ್ವಂ ಮಂಡಳಿ ಈ ಕುರಿತ ಯಾವುದೇ ನಿರ್ಧಾರವನ್ನು ಪರಂಪರೆ ಮತ್ತು ಪದ್ಧತಿಯ ಆಧಾರದಲ್ಲಿ ಕೈಗೊಳ್ಳಬೇಕಾಗಿದೆ ಎಂದು ಪದೇಪದೇ ಹೇಳುತ್ತಿರುವ ಹಿನ್ನೆಲೆಯಲ್ಲಿ ಸಿಪಿಐ(ಎಂ) ಮುಖಂಡರ ಈ ಅಭಿಪ್ರಾಯ ಮಹತ್ವ ಪಡೆದು–ಕೊಂಡಿದೆ.

ಋತುಚಕ್ರದ ವಯಸ್ಸಿನ ನೆಪದಲ್ಲಿ ಒಂದು ದೊಡ್ಡ ಮಹಿಳಾ ವಿಭಾಗವನ್ನೇ ದೇವಾಲಯದ ಒಳಗೆ ಪ್ರವೇಶಿಸದಂತೆ ನಿಷೇಧಿಸುವುದು ನ್ಯಾಯಸಮ್ಮತವಲ್ಲ, ಮಹಿಳೆಯರ ಕೆಲವು ಜೈವಿಕ ವಿಶಿಷ್ಟತೆಗಳು ಅವರಿಗೆ ಮುಳುವಾಗಬಾರದು ಎಂದು ಹೇಳಿರುವ ಕೊಡಿಯೇರಿಯವರು ಕೇರಳದಲ್ಲಿ ಮಹಿಳೆಯರು ಆರೋಗ್ಯ, ಸಾಕ್ಷರತೆ, ಮತ್ತು ಆಯಸ್ಸಿನ ವಿಷಯಗಳಲ್ಲಿ ತಮ್ಮ ಪುರುಷ ಸಹವರ್ತಿಗಳಿಗಿಂತ ಮುಂದಿದ್ದಾರೆ ಎಂಬುದರತ್ತ ಗಮನ ಸೆಳೆದಿದ್ದಾರೆ.

ಎಲ್ಲಾ ವಯೋಮಾನದ ಮಹಿಳೆಯರಿಗೆ ದೇವಾಲಯಗಳಲ್ಲಿ ಪ್ರವೇಶವಿರಬೇಕು, ಈ ಹಿಂದಿದ್ದ ಪಾಳೆಗಾರಿ ಪದ್ದತಿಯನ್ನು ಪುನಃಸ್ಥಾಪಿಸಲು ಬಯಸುತ್ತಿರುವ ಮನಸ್ಸುಗಳು ಮಾತ್ರ ಅಂತಹ ಆಚರಣೆಗಳ ನೆಪ ಮಾಡಿ ಮಹಿಳೆಯರ ವಿರುದ್ಧ ತಾರತಮ್ಯ ಮಾಡಬಯಸುತ್ತಾರೆ ಎಂದು ಅವರು ಹೇಳಿದರು. ಬ್ರಾಹ್ಮಣ ಪ್ರಾಬಲ್ಯದ ವ್ಯವಸ್ಥೆಯಲ್ಲಿ ಈ ಮಹಿಳಾ–ವಿರೋಧಿ ನಿಲುವನ್ನು ತಳೆಯಲಾಗಿತ್ತು. ಅದಕ್ಕನುಗುಣವಾಗಿ ದೇವಸ್ಥಾನದ ತಂತ್ರಿಗಳು ಅಯ್ಯಪ್ಪ ಸ್ವಾಮಿಯ 'ನೈಷ್ಠಿಕ ಬ್ರಹ್ಮಚರ್ಯ'ದ ಹೆಸರಿನಲ್ಲಿ ಈ ನಿಷೇಧ ಹೇರಿದ್ದರು

ಈ ವಿಷಯದಲ್ಲಿ ತಿರುವಾಂಕೂರ್ ದೇವಸ್ವಂ ಮಂಡಳಿ(ಟಿ.ಡಿ.ಬಿ)ಯು ಮಹಿಳಾ–ವಿರೋಧಿಯಾಗಿ ವರ್ತಿಸುತ್ತಿದೆ, ಅದರ ಅಧ್ಯಕ್ಷರಾದ ಪ್ರಯಾರ್ ಗೋಪಾಲಕೃಷ್ಣನ್ ಅವರು ಮಹಿಳೆಯರು ಅಯ್ಯಪ್ಪ ಸ್ವಾಮಿಯ ದರ್ಶನಕ್ಕೆ ಒಳಗೆ ಪ್ರವೇಶಿಸಿದರೆ ಪರ್ವತವೇ ಕುಸಿದು ಬೀಳುತ್ತದೇನೋ ಎಂಬಂತೆ ಮಾತಾಡುತ್ತಿದ್ದಾರೆ. ಅವರಿಗೆ ಕಾಂಗ್ರೆಸ್ ನೇತೃತ್ವದ ಯು.ಡಿ.ಎಫ್ ಹಾಗೂ ಬಿ.ಜೆ.ಪಿ. ಆರ್.ಎಸ್.ಎಸ್.ನ ಬೆಂಬಲ ನೀಡುತ್ತಿವೆ ಎಂದು ಕೊಡಿಯೇರಿಯವರು ಆಪಾದಿಸಿದ್ದಾರೆ.

ಕಳೆದ ವರ್ಷ 4 ಕೋಟಿ ಯಾತ್ರಿಗಳು ಈ ಯಾತ್ರಾ ಸ್ಥಳಕ್ಕೆ ಭೇಟಿ ನೀಡಿದ್ದು ಅದರಲ್ಲಿ 50 ವರ್ಷ ದಾಟಿದ 5 ಲಕ್ಷ ಜನ ಮಹಿಳೆಯರೂ ಇದ್ದರು ಎಂದು ಸ್ವತಃ ಆ ಅಧ್ಯಕ್ಷರೇ ಹೇಳಿದ್ದಾರೆ. ಅದರಿಂದ ಭೂಕಂಪನವೇನೂ ಆಗಿಲ್ಲವಲ್ಲ ಎಂದು ಬಾಲಕೃಷ್ಣನ್ ಅವರು ವ್ಯಂಗ್ಯವಾಡಿದ್ದಾರೆ.

ಸಿಪಿಐ(ಎಂ) ಸದಾ ಸಾಮಾಜಿಕ ಪ್ರಸ್ತುತತೆಯಿರುವ ಪ್ರಶ್ನೆಗಳಲ್ಲಿ ಅಲ್ಪಸಂಖ್ಯಾತ ಮತ್ತು ಬಹುಸಂಖ್ಯಾತ ಎಂಬ ಬೇಧಭಾವಗಳಿಲ್ಲದೆ ಮಧ್ಯಪ್ರವೇಶಿಸಿದೆ, ಕ್ರಿಶ್ಚಿಯನ್ನರಲ್ಲಿ ಮತ್ತು ಮುಸ್ಲಿಮರಲ್ಲಿ ಇರುವ ಕೆಲ ಮಹಿಳಾ ವಿರೋಧಿ ಆಚರಣೆಗಳ ಬಗ್ಗೆಯೂ ಈ ಹಿಂದೆ ಅದು ಬಲವಾದ ನಿಲುವನ್ನು ತಳೆದಿತ್ತು. ಈಗಲೂ ಅದನ್ನೇ ಮುಂದುವರೆಸುತ್ತಿದೆ ಎನ್ನುತ್ತ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು ಕಾಂಗ್ರೆಸ್ ಪಕ್ಷ ಮಹಿಳೆಯರಿಗೆ ಸಮಾನ ಸ್ಥಾನ ನೀಡುವುದರ ವಿರುದ್ಧವೇನಾದರೂ ನಿಲುವು ತಳೆದಿದೆಯೇ ಎಂದು ಕೆ.ಪಿ.ಸಿ.ಸಿ ಅಧ್ಯಕ್ಷ ವಿ.ಎಂ ಸುಧೀರನ್ ಅವರನ್ನು ಪ್ರಶ್ನಿಸಿದ್ದಾರೆ. ಇದೇ ಪ್ರಶ್ನೆಗೆ 'ಮಹಿಳಾ ಕಾಂಗ್ರೆಸ್' ಕೂಡ ಉತ್ತರಿಸಬೇಕಾಗಿದೆ ಎಂದಿದ್ದಾರೆ. ಮಹಿಳೆಯರನ್ನು ಸಾರ್ವಜನಿಕ ಸ್ಥಳ ಮತ್ತು ಪೂಜಾ ಮಂದಿರಗಳಿಂದ ದೂರ ಇಡುವುದು ಒಂದು ಪ್ರಗತಿಪರ ಸಮಾಜಕ್ಕೆ ತಕ್ಕುದಲ್ಲ, ಎಲ್ಲ ವಯಸ್ಸಿನ ಮಹಿಳೆಯರಿಗೆ ದೇವಾಲಯ ಪ್ರವೇಶಕ್ಕೆ ಅವಕಾಶ ನೀಡುವುದು ಅವರನ್ನು ಸಮಾನರನ್ನಾಗಿ ಕಾಣಲು ನೆರವಾಗುತ್ತದೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ಯುವ ವಕೀಲರ ಸಂಘ ಎಲ್ಲ ವಯೋಮಾನದ ಮಹಿಳೆಯರಿಗೆ ಶಬರಿಮಲೆ ದೇವಾಲಯದೊಳಗೆ ಪ್ರವೇಶಿಸಲು ಅನುಮತಿ ನೀಡಬೇಕೆಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದು ಅದರ ವಿಚಾರಣೆ ನಡೆಸುತ್ತಿರುವ ಸರ್ವೋಚ್ಚ ನ್ಯಾಯಾಲಯವು ದೇವರು ಪುರುಷ ಮತ್ತು ಮಹಿಳೆಯರ ನಡುವೆ ಯಾವುದೇ ತಾರತಮ್ಯ ಮಾಡದಿರುವಾಗ ಮಾನವ ನಿರ್ಮಿತ ಆಚರಣೆಗಳು ಅಡ್ಡಿಯುಂಟು ಪಡಿಸಿದರೆ ಹೇಗೆ ಎಂದು ಪ್ರಶ್ನಿಸಿದೆ.

2008 ರಲ್ಲಿ ಆಗಿನ ಎಲ್.ಡಿ.ಎಫ್ ಸರಕಾರ ತಾನು ಎಲ್ಲ ವಯೋಮಾನದ ಮಹಿಳೆಯರಿಗೆ ಶಬರಿಮಲೆ ದೇವಾಲಯದೊಳಗೆ ಪ್ರವೇಶಿಸಲು ಅನುಮತಿ ನೀಡುವುದರ ಪರವಾಗಿರುವುದಾಗಿ ಅಫಿಡವಿಟ್ ಸಲ್ಲಿಸಿತ್ತು. ಆದರೆ ನಂತರ 2016ರಲ್ಲಿ ಯು.ಡಿ.ಎಫ್. ಸರಕಾರ ಇದನ್ನು ವಿರೋಧಿಸಿ ಅಫಿಡವಿಟ್ ಸಲ್ಲಿಸಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ತಾಯ್ತನದ ವ್ಯಾಪಾರ

– ಸತ್ಯಾ ಎಸ್.



ಬಾಡಿಗೆ ತಾಯಂದಿರ ಮೂಲಕ ಮಕ್ಕಳನ್ನು ಪಡೆಯುವ ವಿಧಾನದ ಸುತ್ತ ಅನೇಕ ವಿವಾದಗಳು ಎದ್ದ ಬಳಿಕ ಅದನ್ನು ನಿಯಂತ್ರಿಸಲು ರೂಪಿಸಲಾದ ಮಸೂದೆಗೆ ಕೇಂದ್ರ ಸರ್ಕಾರದ ಸಚಿವ ಸಂಪುಟವು ಮೊನ್ನೆ ಆಗಸ್ಟ್ 24 ರಂದು ಅನುಮೋದನೆ ನೀಡಿದೆ.

ಮಕ್ಕಳಾಗುವುದು ಶಕ್ಯವಿಲ್ಲ ಎನ್ನುವ ದಂಪತಿಗಳಿಗೆ ಬದಲಿ ಮಾರ್ಗವಾಗಿ ರೂಪುಗೊಂಡಿದ್ದ ಬಾಡಿಗೆ ತಾಯಂದಿರ ಮೂಲಕ ಮಕ್ಕಳನ್ನು ಪಡೆಯುವ ಒಂದು ವೈದ್ಯಕೀಯ ವಿಧಾನವು ಮಧ್ಯವರ್ತಿಗಳು ಹಾಗೂ ಇತರೆ ಹಲವು ಕಾರಣಗಳಿಂದ ಕೋಟ್ಯಂತರ ರೂಪಾಯಿ ಮೌಲ್ಯದ ವ್ಯಾಪಾರವಾಗಿ ಬೆಳೆದಿತ್ತು. ಅದು ಬಾಡಿಗೆ ತಾಯಿಯರನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದ ಹಿನ್ನೆಲೆಯಲ್ಲಿ ಇದನ್ನು ನಿಯಂತ್ರಿಸುವ ಮಸೂದೆ ರೂಪಿಸುವಂತೆ ಸ್ವಯಂ ಸೇವಾ ಸಂಘಟನೆಗಳು ಬಹಳ ಸಮಯದಿಂದ ಆಗ್ರಹಿಸುತ್ತಿದ್ದವು. ಅದರಂತೆ ಈಗ ರೂಪಿಸಲಾದ ಮಸೂದೆಯು ಬಾಡಿಗೆ ತಾಯ್ತನವನ್ನು ನಿಯಂತ್ರಿಸಲು ಕೈಗೊಂಡಿರುವ ಕೆಲವು ಕ್ರಮಗಳು ಸ್ವಾಗತಾರ್ಹವಾಗಿವೆ. ಆದರೆ, ಈ ನಿಯಂತ್ರಣದ ಹಿಂದೆ ಇರುವ ಕಾರಣಗಳಲ್ಲಿ ಎಲ್ಲವೂ ಸಕಾರಣಗಳಲ್ಲ ಎನ್ನುವುದನ್ನು ಗಮನಿಸಬೇಕು.

ಬಾಡಿಗೆ ತಾಯ್ತನ ಎನ್ನುವುದು ನಮ್ಮ ಸಂಸ್ಕೃತಿಗೆ ವಿರುದ್ಧವಾದದ್ದು ಎನ್ನುವುದು ನಮ್ಮ ನಿಲುವಲ್ಲ. ನಮ್ಮ ನಿಲುವು ಏನೆಂದರೆ ಬಾಡಿಗೆ ತಾಯ್ತನವು ಒಂದು ದಂಧೆಯಾಗಿ ಬೆಳೆದಿರುವುದರ ಬಗ್ಗೆ, ಬಾಡಿಗೆ ತಾಯಿಯರಾಗುವ ಮಹಿಳೆಯರ ದುರುಪಯೋಗದ ಬಗ್ಗೆ, ಅದರಲ್ಲೂ ಬಡ ಮಹಿಳೆಯರನ್ನು ಬಳಸಿಕೊಳ್ಳುವ ಬಗ್ಗೆ ನಮ್ಮ ವಿರೋಧ ಇದೆ. ಈ ಮಸೂದೆಯು ಪ್ರತಿಪಾದಿಸುವ ಸಾಂಪ್ರದಾಯಿಕ ಆಲೋಚನೆಗೆ ನಮ್ಮ ವಿರೋಧ ಇದೆ.

ಈ ಮಸೂದೆ ಏನು ಹೇಳುತ್ತದೆ ಎಂದರೆ,

1. ಮದುವೆಯಾದ ಐದು ವರ್ಷಗಳ ಬಳಿಕವೂ ಮಕ್ಕಳಾಗದೆ ಇದ್ದ ದಂಪತಿಗಳಿಗೆ, ಮುಂದೆಯೂ ಮಕ್ಕಳಾಗುವುದಿಲ್ಲ ಎಂದು ವೈದ್ಯರು ಹೇಳಿದ ಸಂದರ್ಭದಲ್ಲಿ ಮಾತ್ರ ಬಾಡಿಗೆ ತಾಯಿಯರ ಮೂಲಕ ಮಕ್ಕಳನ್ನು ಪಡೆಯಬಹುದು. ಹೀಗೆ ಬಾಡಿಗೆ ತಾಯಿಯನ್ನು ಗೊತ್ತುಮಾಡುವಾಗಲೂ ಅಲ್ಲಿ ದುಡ್ಡಿಗಾಗಿ ತಾಯಿಯಾಗುವವರ ಮೂಲಕ ಮಕ್ಕಳನ್ನು ಪಡೆಯುವಂತಿಲ್ಲ. ದುಡ್ಡಿನ ಆಸೆ ಇಲ್ಲದೆ, ಕೇವಲ ಒಂದು ಒಳ್ಳೆಯ ಉದ್ದೇಶ ಎಂಬ ಕಾರಣಕ್ಕೆ ತಾಯಿಯಾಗುವವರಿಗೆ ಮಾತ್ರ ಅವಕಾಶ ಎನ್ನುತ್ತದೆ ಹೊಸ ಮಸೂದೆ. ಇದು ಉತ್ತಮ ಅಂಶ.
2. ಇಷ್ಟೇ ಆಗಿದ್ದರೆ ಒಳ್ಳೆಯದಿತ್ತು. ಆದರೆ ಮತ್ತೂ ಮುಂದೆ ಹೋಗುವ ಮಸೂದೆಯು ಯಾರಿಗೆ ಮಕ್ಕಳಿಲ್ಲ ಅವರದೇ ಜಾತಿ ಮತ್ತು ಸಮುದಾಯದ ಮಹಿಳೆಯರಿಂದ ಮಾತ್ರ ಮಕ್ಕಳನ್ನು ಪಡೆಯಬಹುದು ಎನ್ನುತ್ತದೆ. ಈ ಮೂಲಕ ಇಲ್ಲಿಯೂ ಜಾತಿವಾದವನ್ನು ತೂರಿಸುತ್ತಿದೆ. ಹಾಗೂ ಸಂಬಂಧಿಕರ ಮೂಲಕ ಪಡೆಯುವ ಮಕ್ಕಳಲ್ಲಿ ಜೈವಿಕ ನ್ಯೂನತೆಗಳು ಉಂಟಾಗುವ ಸಾಧ್ಯತೆ ಇರುವುದರಿಂದ ಈ ಸಲಹೆಯು ವೈದ್ಯಕೀಯವಾಗಿ ಸೂಕ್ತವಾದುದಲ್ಲ.
3. ಒಂಟಿ ಮಹಿಳೆ ಅಥವಾ ಪುರುಷ, ಮದುವೆಯಾಗಿಲ್ಲದೆ ಜೊತೆಯಾಗಿ ಬದುಕುತ್ತಿರುವ ಜೋಡಿ ಹಾಗೂ ಸಲಿಂಗ ದಂಪತಿಗಳು ಬಾಡಿಗೆ ತಾಯ್ತನದ ಮೂಲಕ ಮಕ್ಕಳನ್ನು ಪಡೆಯುವಂತಿಲ್ಲ. ನಮ್ಮ ಸಂವಿಧಾನವು ಭಾರತದ ಎಲ್ಲ ಪ್ರಜೆಗಳೂ ಸಮಾನರು ಹಾಗೂ ಎಲ್ಲರಿಗೂ ಒಂದೇ ರೀತಿಯ ಹಕ್ಕುಗಳಿರಬೇಕು ಎನ್ನುತ್ತದೆ. ಆದರೆ ಈ ಮಸೂದೆಯು ಈ ಮೇಲಿನ ವರ್ಗದ ಜನರ ಮಕ್ಕಳನ್ನು ಪಡೆಯುವ ಮೂಲಭೂತ ಹಕ್ಕುಗಳನ್ನು ನಿರಾಕರಿಸುತ್ತದೆ. ವ್ಯಾವಹಾರಿಕ ಉದ್ದೇಶವಿಲ್ಲದೆ, ನಿಜಕ್ಕೂ ಮಕ್ಕಳನ್ನು ಪಡೆಯಲು ಸಾಧ್ಯವಾಗದೆ ಇರುವ ಈ ಮೇಲಿನ ವರ್ಗದ ಜನರಿಗೂ ಬಾಡಿಗೆ ತಾಯ್ತನದ ಮೂಲಕ ಮಕ್ಕಳನ್ನು ಪಡೆಯಲು ಅವಕಾಶ ನೀಡಬೇಕು ಎನ್ನುವುದು ನಮ್ಮ ನಿಲುವು.
4. ಬಾಡಿಗೆ ತಾಯಿಯಾಗುವ ಮಹಿಳೆಯರ ರಕ್ಷಣೆಗೆ ಮಸೂದೆಯು ಸಾಕಷ್ಟು ಗಮನ ಹರಿಸಿಲ್ಲ. ದುಡ್ಡಿನ ಆಸೆ ಇಲ್ಲದೆ ತಾಯಿಯಾಗುವುದಾದರೂ ಕೂಡ, ಆಕೆಯ ದೀರ್ಘಕಾಲಿನ ಆರೋಗ್ಯದ ರಕ್ಷಣೆಗಾಗಿ, ಸುರಕ್ಷತೆಗಾಗಿ ಆರೋಗ್ಯ ವಿಮೆ ಮಾಡಿಸುವಂತಹ ಕ್ರಮಗಳನ್ನು ಮಸೂದೆಯಲ್ಲಿ ಸೇರಿಸಬೇಕು.
5. ಕಾಯಿದೆಯ ಆಶಯಗಳು ಈಡೇರಬೇಕೆಂದರೆ ಅದರ ಅನುಷ್ಠಾನ ಹಾಗೂ ಮೇಲ್ವಿಚಾರಣೆ ಬಹು ಮುಖ್ಯವಾದದ್ದು. ಈ ಭಾಗವನ್ನು ಕಟ್ಟುನಿಟ್ಟಾಗಿ ರೂಪಿಸಬೇಕು. ಇಲ್ಲವಾದರೆ ಈಗಾಗಲೇ ಮಸೂದೆಗೆ ವಿರೋಧ ವ್ಯಕ್ತಪಡಿಸುತ್ತಿರುವ ವಾಣಿಜ್ಯ ಹಿತಾಸಕ್ತಿಯ ಶಕ್ತಿಗಳು ಮಸೂದೆಯ ಅನುಷ್ಠಾನವನ್ನು ಮೂಲೆಗುಂಪು ಮಾಡಬಲ್ಲವು. ಇದನ್ನು ಸಂಸತ್ತಿನ ಮುಂದೆ ಮಂಡಿಸುವ ಮೊದಲು ಇದನ್ನೊಂದು ಉತ್ತಮ ಮಸೂದೆಯನ್ನಾಗಿ ರೂಪಿಸಲು ತಳಮಟ್ಟದಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಸಂಘಟನೆಗಳ ಸಲಹೆ-ಸಹಕಾರ ಪಡೆಯುವುದು ಒಳ್ಳೆಯದು.

ಬಾಡಿಗೆ ತಾಯ್ತನದ ಒಪ್ಪು ತಪ್ಪುಗಳ ಬಗ್ಗೆ ಚರ್ಚೆ-ವಾದ ವಿವಾದಗಳು ಆರಂಭವಾಗಿದ್ದು 2008ರಲ್ಲಿ. ಭಾರತೀಯ ಮಹಿಳೆಯ ಮೂಲಕ ಮಕ್ಕಳನ್ನು ಪಡೆಯಲು ಬಯಸುವ ವಿದೇಶಿ ದಂಪತಿಗಳ ನಡವಳಿಕೆಗಳು ಮಕ್ಕಳನ್ನು ತ್ರಿಶಂಕು ಸ್ಥಿತಿಗೆ ದೂಡಿದಂತಹ ಪ್ರಕರಣಗಳು ಇದು ಎಂತಹ ದೊಡ್ಡ ಉದ್ದಿಮೆಯಾಗಿದೆ ಎನ್ನುವುದನ್ನು ಬಿಚ್ಚಿಡುತ್ತಾ ಹೋಯಿತು.

2008ರಲ್ಲಿ ಜಪಾನಿನ ಓರ್ವ ವೈದ್ಯ ದಂಪತಿಗಳು ಗುಜರಾತಿನ ಹಳ್ಳಿಯೊಂದರ ಮಹಿಳೆಯನ್ನು ಬಾಡಿಗೆ ತಾಯಿಯಾಗಿ ನಿಗದಿ ಪಡಿಸಿದರು. ಆಕೆಗೆ ಮಗುವಾಗುವ ವೇಳೆಗೆ ಆ ದಂಪತಿಗಳು ಪ್ರತ್ಯೇಕವಾಗಿದ್ದರು ಹಾಗೂ ತಮಗೆ ಮಗು ಬೇಡ ಎಂದುಬಿಟ್ಟರು. ಮಗುವಿಗೆ ತಂದೆ-ತಾಯಿಯೂ ಇಲ್ಲ, ದೇಶವೂ ಇಲ್ಲದ ಸ್ಥಿತಿಯಾಯಿತು. ಮಗು ತನ್ನ ಅಜ್ಜಿಯ ಬಳಿ ಇದೆಯಾದರೂ ಜಪಾನ್ ದೇಶ ಬಾಡಿಗೆ ತಾಯಿಯ ಮಕ್ಕಳನ್ನು ಪುರಸ್ಕರಿಸದೇ ಇರುವುದರಿಂದ ಆ ದೇಶದ ಪೌರತ್ವ ಮಗುವಿಗೆ ಇನ್ನೂ ಸಿಕ್ಕಿಲ್ಲ.

2012ರಲ್ಲಿ ಆಸ್ಟ್ರೇಲಿಯಾದ ದಂಪತಿಗೆ ಬಾಡಿಗೆ ತಾಯಿಯಾಗಿದ್ದ ಭಾರತೀಯ ಮಹಿಳೆ ಅವಳಿ-ಜವಳಿ ಮಕ್ಕಳನ್ನು ಹೆತ್ತಳು. ಆ ದಂಪತಿ ತಾವು ಒಂದೇ ಮಗುವನ್ನು ಕೇಳಿದ್ದು ಎಂದ ಹೇಳಿ ಮತ್ತೊಂದು ಮಗುವನ್ನು ಇಲ್ಲೇ ಬಿಟ್ಟು ಹೋದರು.

ಚೆನ್ನೈನ ಓರ್ವ ಬಡ ಒಂಟಿ ಮಹಿಳೆ ತನ್ನ ಮಕ್ಕಳನ್ನು ಸಾಕುವ ಸಲುವಾಗಿ ಬಾಡಿಗೆ ತಾಯಿಯಾಗಲು ಒಪ್ಪಿದಳು. ಮಗುವನ್ನು ಹೆತ್ತು ಕೊಟ್ಟಾಗ ಮಧ್ಯವರ್ತಿಯು ಆಕೆಗೆ ಕೊಟ್ಟಿದ್ದು ಕೇವಲ 75,000/- ರೂಪಾಯಿ. ಅರ್ಧಕ್ಕಿಂತ ಹೆಚ್ಚು ಮೊತ್ತವನ್ನು ಅವನೇ ನುಂಗಿಹಾಕಿದ್ದ.

2014ರ ಜನವರಿಯಲ್ಲಿ ದೆಹಲಿಯಲ್ಲಿ ಮಹಿಳೆಯರಿಂದ ಅಂಡಾಣು ಸಂಗ್ರಹಣೆ ಮಾಡುತ್ತಿದ್ದ ಖಾಸಗಿ ಕ್ಲಿನಿಕ್‌ನ ನಿರ್ಲಕ್ಷದಿಂದಾಗಿ ಅಂಡಾಣು ದಾನ ಮಾಡಲು ಬಂದಿದ್ದ 26 ವರ್ಷದ ಯುಮಾ ಷೆರ್ಪಾ ಪ್ರಾಣವನ್ನೇ ಬಿಟ್ಟಳು.

ಇಂತಹ ಪ್ರಕರಣಗಳು ಬಾಡಿಗೆ ತಾಯ್ತನದ ಜೊತೆಗೆ ಇರುವ ಅತ್ಯಂತ ಸೂಕ್ಷ್ಮವಾದ ಸಮಸ್ಯೆಗಳನ್ನು ಎತ್ತಿ ತೋರಿಸುತ್ತವೆ. ಮಕ್ಕಳ ಭವಿಷ್ಯ, ತಾಯಂದಿರ ಆರೋಗ್ಯ, ಸುರಕ್ಷತೆ ಇತ್ಯಾದಿ ಪ್ರಶ್ನೆಗಳು ಇದರಲ್ಲಿ ಅಡಗಿವೆ. ●

ಏನಿದು ಬಾಡಿಗೆ ತಾಯ್ತನ? ಹೇಗೆ ಮಾಡುತ್ತಾರೆ?

ಮಕ್ಕಳಾಗದೆ ಇರುವ ದಂಪತಿಗಳು ಮತ್ತೊಬ್ಬ ಮಹಿಳೆಯ ಗರ್ಭದಲ್ಲಿ ತಮ್ಮ ಮಗುವಿನ ಭ್ರೂಣವನ್ನು ಇರಿಸಿ, ಹೆರಿಗೆಯಾದ ಬಳಿಕ ಆ ಮಗುವನ್ನು ಪಡೆಯುವುದು ಬಾಡಿಗೆ ತಾಯ್ತನ.

ಮಹಿಳೆಯ ಗರ್ಭಾಶಯದಲ್ಲಿ ದೋಷವಿದ್ದರೆ ಅಥವಾ ಗರ್ಭಾಶಯ ಇಲ್ಲದಿದ್ದಲ್ಲಿ, ಮೇಲಿಂದ ಮೇಲೆ ಗರ್ಭಪಾತ ಆಗುತ್ತಿದ್ದಲ್ಲಿ ಹಾಗೂ ಕೃತಕ ಗರ್ಭನಾಳ ಚಿಕಿತ್ಸೆಗಳೂ ಫಲಕಾರಿಯಾಗದಿದ್ದಲ್ಲಿ ಬೇರೊಂದು ಮಹಿಳೆಯ ಗರ್ಭಾಶಯದ ಮೂಲಕ ಮಕ್ಕಳನ್ನು ಪಡೆಯಲು ವೈದ್ಯರು ಸಲಹೆ ಮಾಡುತ್ತಾರೆ.

ದಂಪತಿಗಳಲ್ಲಿ ಇರುವ ನ್ಯೂನತೆಯ ಆಧಾರದ ಮೇಲೆ ಬಾಡಿಗೆ ತಾಯಿಯ ಗರ್ಭದಲ್ಲಿ ಭ್ರೂಣ ಬೆಳೆಸಲು ವಿಭಿನ್ನ ವಿಧಾನಗಳನ್ನು ಅನುಸರಿಸಲಾಗುತ್ತದೆ.

1. ದಂಪತಿಯ ಅಂಡಾಣು ಮತ್ತು ವೀರ್ಯಾಣು ಬಳಸಿ ರೂಪಿಸಲಾದ ಭ್ರೂಣವನ್ನು ಮಹಿಳೆಯ ಗರ್ಭಕ್ಕೆ ಸೇರಿಸುವುದು
2. ತಂದೆಯ ವೀರ್ಯಾಣುವಿನ ಜೊತೆಗೆ ಕಡ ಪಡೆದ ಅಂಡಾಣುವನ್ನು ಬಳಸಿ ರೂಪಿಸಿ ಭ್ರೂಣವನ್ನು ಬಳಸುವುದು
3. ವೀರ್ಯಾಣೂ ಮತ್ತು ಅಂಡಾಣು ಎರಡನ್ನೂ ಕಡ ಪಡೆದು ರೂಪಿಸಿದ ಭ್ರೂಣದಿಂದ ಮಗುವನ್ನು ಪಡೆಯುವುದು.
4. ತಂದೆಯ ವೀರ್ಯಾಣುವನ್ನು ಬಾಡಿಗೆ ತಾಯಿಯ ಅಂಡಾಣುವಿನೊಂದಿಗೆ ಸೇರಿಸಿ ಕೃತಕ ವಿಧಾನದಲ್ಲಿ ಭ್ರೂಣ ರೂಪಿಸಿ ಮತ್ತೆ ಅದನ್ನು ಬಾಡಿಗೆ ತಾಯಿಯ ಗರ್ಭದಲ್ಲಿ ಸೇರಿಸುವುದು.

ಬಾಡಿಗೆ ತಾಯ್ತನ: ಯಾವ ದೇಶದಲ್ಲಿ ಹೇಗೆ?

ಸ್ಪೇನ್, ಇಂಗ್ಲೆಂಡ್, ಚೀನಾ, ಕೆನಡಾ ಮತ್ತು ಆಸ್ಟ್ರೇಲಿಯಾ ದೇಶಗಳು ಲಾಭದ ಉದ್ದೇಶವಿಲ್ಲದ ಬಾಡಿಗೆ ತಾಯ್ತನಕ್ಕೆ ಮಾತ್ರ ಅವಕಾಶ ನೀಡಿವೆ. ಇಂತಹ ತಾಯ್ತನದಲ್ಲಿ ದೊಡ್ಡ ಮಟ್ಟದ ಹಣಕಾಸಿನ ವ್ಯವಹಾರಕ್ಕೆ ಆಸ್ಪದವಿಲ್ಲದಂತೆ ಕಟ್ಟುನಿಟ್ಟು ಕ್ರಮಗಳನ್ನು ಕೈಗೊಂಡಿವೆ.

ಜರ್ಮನಿ, ಇಟಲಿ, ಕ್ಯುಬೆಕ್, ಫಿನ್‌ಲ್ಯಾಂಡ್ ಮತ್ತು ಫ್ರಾನ್ಸ್ ದೇಶಗಳು ಬಾಡಿಗೆ ತಾಯ್ತನವನ್ನು ಸಂಪೂರ್ಣವಾಗಿ ನಿಷೇಧಿಸಿವೆ.

ಗ್ರೀಸ್‌ನಲ್ಲಿ ಮಕ್ಕಳನ್ನು ಬಯಸುವ ದಂಪತಿಗಳು ಹಾಗೂ ಬಾಡಿಗೆ ತಾಯಿ ಇಬ್ಬರೂ ಗ್ರೀಸ್ ದೇಶದವರೇ ಆಗಿರಬೇಕು ಹಾಗೂ ದಂಪತಿಗೆ ಮಕ್ಕಳಾಗಲು ಸಾಧ್ಯವೇ ಇಲ್ಲ ಎನ್ನುವುದು ಖಚಿತವಾಗಿರಬೇಕು.

‘ಡಿಜಿಟಲ್ ಇಂಡಿಯಾ’ ಅಂದರೆ ಏನು?

ಇದು ಶ್ರೀ ಸಾಮಾನ್ಯನಿಗೆ ಅರ್ಥವಾಗೋದು ಕಷ್ಟ. ಅದಕ್ಕೇ ಉತ್ತರ ಇಲ್ಲಿದೆ.

ವರ್ಷ: ಕ್ರಿಸ್ತ ಶಕ 2020

Mr.X ಎಂಬಾತ ಮಸಾಲೆ ದೋಸೆ ಬೇಕಾಗಿ ‘ಅಡಿಗಾಸ್ ಹೋಟೆಲ್’ ಗೆ ಕಾಲ್ ಮಾಡುತ್ತಾನೆ.

ಅಡಿಗಾಸ್: ಹಲೊ ಅಡಿಗಾಸ್, ಹೇಳಿ....

Mr.X: ನನ್ನ ಆರ್ಡರ್ ತಗೊಳ್ಳಿ.

ಅ: ಸರ್, ನಿಮ್ಮ ಆಧಾರ್ ನಂಬರ್ ಹೇಳಿ....

X: ಆಧಾರ್?..... ok ತಗೊಳ್ಳಿ 6113-0676-4727.

ಅ: ನಿಮ್ಮ ಹೆಸರು Mr.X. ನಿಮ್ಮ ಮನೆ ವಿಳಾಸ ನಂಬರ್ 115, 2nd cross, 5th main, Dollars colony, Bangalore. ನಿಮ್ಮ ಮನೆ ದೂರವಾಣಿ ಸಂಖ್ಯೆ 080-23545678. ನಿಮ್ಮ ಮೊಬೈಲ್ ಸಂಖ್ಯೆ 7760882971.

X: ನಿಮಗೆ ಇದೆಲ್ಲಾ ಹೇಗೆ ತಿಳೀತು?

ಅ: ನಿಮ್ಮ ಆಧಾರ ಸಂಖ್ಯೆ “ಡಿಜಿಟಲ್ ಇಂಡಿಯಾ” ಜೊತೆ ಕನೆಕ್ಟಿಂಗ್ ಮಾಡಿದ್ವಿ ಅದರಿಂದ ತಿಳಿತು.

X: ಸರಿ. ನನಗೆ ಮಸಾಲ ದೋಸೆ ಬೇಕಿತ್ತು.

ಅ: ಅದು ಬೇಡ ಸರ್

X: ಯಾಕೆ?

ಅ: ನಿಮ್ಮ ದೇಹದ ಆರೋಗ್ಯಕ್ಕೆ ಅನುಗುಣವಾಗಿ ನಿಮಗೆ ಬೊಜ್ಜು ಮತ್ತೆ ವಾಯು ಸಮಸ್ಯೆ ಇರುವುದರಿಂದ ಅದು ಬೇಡ.

X: ಹೌದಾ....ನನಗೆ ತಿನ್ನೋಕೆ ಏನಿದೆ?

ಅ: ನಿಮ್ಮ ಇಷ್ಟದ ರವಾ ಇಡ್ಲಿ ಇದೆ.

X: ನನಗೆ ಇಷ್ಟದ ಅಂತ ಹೇಗೆ ಗೊತ್ತಾಯ್ತು?

ಅ: ನೀವು ಹೋದವಾರ ಸದಾಶಿವನಗರ ಸ್ವಪ್ನಾ ಬುಕ್ ಹೌಸ್ ನಲ್ಲಿ “ರವಾ ಇಡ್ಲಿ ಮಾಡುವ ವಿಧಾನಗಳು” ಎಂಬ ಪುಸ್ತಕ ಖರೀದಿ ಮಾಡಿದಿರಲ್ಲವೆ?

X: ನಿಜ, ರವಾ ಇಡ್ಲಿ ಕಳಿಸಿ.

ಅ: ನಿಮ್ಮ ಮನೆಯಲ್ಲಿ 7 ಜನ ಇದ್ದಿರಿ. 14 ಇಡ್ಲಿ ಸಾಕು. 350 ರೂಪಾಯಿ ಆಗುತ್ತದೆ.

X: ಸರಿ ನಾ ಕ್ರೆಡಿಟ್ ಕಾರ್ಡ್ ಕೊಡ್ತೀನಿ.

ಅ: ಬೇಡ ಸಾರ್, ನಿಮ್ಮ ಸಂಬಳದಲ್ಲಿ ಎಲ್ಲಾ ಖರ್ಚು ಹೋಗಿ ನಿನ್ನೆ ನಿಮ್ಮ ಮನೆ ಲೋನ್ 12,357.50 ಕಟ್ ಆಗಿ ಈಗ ಬರಿ 180 ರೂಪಾಯಿ ಇದೆ.

X: ತೊಂದರೆ ಇಲ್ಲ. ನನ್ನ ಹತ್ತಿರ ATM ಕಾರ್ಡ್ ಇದೆ.

ಅ: ಸಾರಿ ಸರ್, ಅದರಲ್ಲಿ ಬರೀ 30 ರೂಪಾಯಿ ಇದೆ.

X: ಸರಿ ನಾ ಕ್ಯಾಶ್ ಕೊಡ್ತೇನೆ. ರವಾ ಇಡ್ಲಿ ಬರೋಕೆ ಎಷ್ಟು ಹೊತ್ತಾಗುತ್ತೆ?

ಅ: 45 ನಿಮಿಷ ಆಗುತ್ತೆ, ನೀವು ಸುಮ್ಮನೆ ಕಾಯಬೇಕು. ಅದರ ಬದಲು ನಿಮ್ಮ ಹೀರೋ ಹೊಂಡ KA 20 EA 3641 ಗಾಡಿ ಇದೆ ಅಲ್ವಾ, ಅದರಲ್ಲಿ ಬಂದು ತೆಗೆದು ಕೊಂಡು ಹೋಗಬಹುದಲ್ವಾ?

X: ಅದು ನಿಮಗೆ ಗೊತ್ತಾ? ಸರಿ 10 ರವಾ ಇಡ್ಲಿಗೆ ಅರ್ಧ ಲೀ ಪೆಪ್ಸಿ free ಅಂತ ಆಫರ್ ಇದೆ ಅಲ್ವಾ?

ಅ: ಹೌದು ಸರ್, ಆದರೆ ನಿಮಗೆ ಕೊಡೋಕೆ ಆಗೊಲ್ಲ. ಹೋದ ವಾರ ರಾಮಯ್ಯ ಆಸ್ಪತ್ರೆಯಲ್ಲಿ ಮೆಡಿಕಲ್ ಚೆಕಪ್‌ಗೆ ಹೋದಾಗ ನಿಮ್ಮ ಶುಗರ್ ಲೆವೆಲ್ ಜಾಸ್ತಿ ಆಗಿದೆ ಅಂತ ಡಾಕ್ಟರ್ ಸುರೇಶ್ ರಾವ್ ಹೇಳಿದ್ದಾರಲ್ವಾ?

X: ನಿಮ್ಮ ಅಜ್ಜಿ ...

ಅ: ಸರ್ ಹಾಗೆಲ್ಲ ಕೆಟ್ಟದಾಗಿ ಮಾತಾಡಬೇಡಿ. 1999 ರಲ್ಲಿ ಇಂದಿರಾನಗರದಲ್ಲಿ ಗಲಾಟೆ ಆದಾಗ ನೀವು ಇದೇ ರೀತಿ ಕೆಟ್ಟದಾಗಿ ಮಾತಾಡಿದ್ದಕ್ಕೆ ಪೋಲಿಸ್‌ನವರು 500 ರೂಪಾಯಿ ದಂಡ ಹಾಕಿದ್ದು ನೆನಪಿದೆಯಾ?

Mr.X ಸುಸ್ತೋ ಸುಸ್ತು.

ಇದೇ ಡಿಜಿಟಲ್ ಇಂಡಿಯಾ ...!

(ಕೃಪೆ: ವ್ಯಾಟ್ಸಪ್)



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ವಿಜಯ ಕರ್ನಾಟಕ

JANASHAKTHI KANNADA VARA PATRIKE SEPT 11, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Satuarday
Licensed to Post without prepayment License No. WPP-283

ಕರ್ನಾಟಕದ 50 ಲಕ್ಷ ಕಾರ್ಮಿಕರ ಎಚ್ಚರಿಕೆ



ಬೆಂಗಳೂರು

ಸೆಪ್ಟಂಬರ್ 2 ರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದಲ್ಲಿ ಎಲ್.ಐ.ಸಿ, ಬ್ಯಾಂಕ್, ರಾಜ್ಯ, ಕೇಂದ್ರ ಸೇವೆ, ರಕ್ಷಣೆ, ಕೆ.ಎಸ್.ಆರ್.ಟಿ.ಸಿ, ಬಿ.ಎಮ್.ಟಿ.ಸಿ, ಆಟೋ, ಖಾಸಗಿ ಟಾಕ್ಸಿ, ಖಾಸಗಿ ಬಸ್ಸುಗಳು, ಅಂಗನವಾಡಿ, ಬಿಸಿಯೂಟ, ಬಿ.ಎಸ್.ಎನ್.ಎಲ್, ರಾಜ್ಯದ ಪ್ರಮುಖ ಕೈಗಾರಿಕಾ ಪ್ರದೇಶಗಳು, ಘನ ಕೈಗಾರಿಕೆಗಳ ಕಾರ್ಮಿಕರು ಪಾಲ್ಗೊಂಡಿದ್ದಾರೆ. ರಾಜ್ಯದ 30 ಜಿಲ್ಲೆಗಳಲ್ಲಿ ಹಲವಾರು ಜಿಲ್ಲಾ ಕೇಂದ್ರಗಳು ಹಾಗೂ ತಾಲೂಕು ಕೇಂದ್ರಗಳು ಸಂಪೂರ್ಣ ಬಂದ್ ಆಗಿವೆ. ಅಸಂಘಟಿತ ವಲಯಗಳಾದ ಬೀಡಿ, ಹಮಾಲಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಮುನ್ಸಿಪಲ್ ಕಾರ್ಮಿಕರು, ಹಲವು ವಿಭಾಗಗಳ ಗುತ್ತಿಗೆ ನೌಕರರು, ಮನೆಗೆಲಸಗಾರರು, ಬೀದಿ ಬದಿ ವ್ಯಾಪಾರಸ್ಥರು, ಇನ್ನು ಮುಂತಾದ ಕಾರ್ಮಿಕರು, ನೌಕರರು ಮುಷ್ಕರದಲ್ಲಿ ಭಾಗಿಗಳಾಗಿದ್ದಾರೆ. ರಾಜ್ಯದಲ್ಲಿ 50 ಲಕ್ಷಕ್ಕೂ ಹೆಚ್ಚಿನ ಕಾರ್ಮಿಕರು–ನೌಕರರು ಮುಷ್ಕರದಲ್ಲಿ ಪ್ರತ್ಯಕ್ಷವಾಗಿ ಪಾಲ್ಗೊಂಡಿದ್ದಾರೆ. ಕೇಂದ್ರ ಸರ್ಕಾರದ ನೀತಿಗಳನ್ನು ಒಪ್ಪುವುದಿಲ್ಲ ಎಂದು ದಿಟ್ಟತನ ಮೆರೆದ ರಾಜ್ಯದ ದುಡಿಯುವ ಜನತೆಯನ್ನು ಸಿಐಟಿಯು ರಾಜ್ಯ ಸಮಿತಿ ಅಭಿನಂದಿಸಿದೆ. ಕೂಡಲೇ ಕೇಂದ್ರ ಸರ್ಕಾರ ಸಮಸ್ಯೆಗಳನ್ನು ನಿರ್ದಿಷ್ಟವಾಗಿ ಬಗೆಹರಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಇನ್ನು ತೀವ್ರವಾದ ಹೋರಾಟಗಳನ್ನು ಎದುರಿಸಬೇಕಾಗುತ್ತದೆ ಎಂದು ಸಿಐಟಿಯು ಎಚ್ಚರಿಸಿದೆ.


ಶಿರಾ


ಬೆಂಗಳೂರು



ಹುಣಸೂರು



ಹುಬ್ಬಳ್ಳಿ



ಹಾಸನ


ಗುಡಿಬಂಡೆ



ತುಮಕೂರು


ಚನ್ನರಾಯಪಟ್ಟಣ



ಕುಂದಾಪುರ


ತುಮಕೂರು

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**